ಹುಮಾಯೂನ್ ಹರಲಾಪುರ

ಡಾ. ವೃಷಭಕುಮಾರ್



ಹುಮಾಯೂನ್ ಹರಲಾಪುರ
ಡಾ. ವೃಷಭಕುಮಾರ್

ಹುಮಾಯೂನ್ ಹರಲಾಪುರ

ಡಾ. ವೃಷಭಕುಮಾರ್

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ – ೫೮೧ ೧೯೭

HUMUYUN HARALAPUR

By
Dr. Vrushabakumar
Assistant Professor
Karnataka Janapada Univerisity, Gotagodi
Mob : 94828 10694

Published by
Prof. S.C. Ramesh
Director
Centre for Extension and Consultancy
Karantaka Janapada University
Gotagodi – 581 197
Shiggavi Taluk, Haveri Dist, Karnataka
Phone: 0836 - 2255180

Pages: _________ **Price: ________**

www.janapadauni.in

First Impression : 2014

ISBN 978-93-83149-15-5

ಬೆಲೆ : _______

ಮುಖಪುಟ:

ಅಕ್ಷರ ಸಂಯೋಜನೆ : **ವಿಶ್ವ ಗುಜ್ಜರ್**

ಪುಸ್ತಕ ದೊರೆಯುವ ಸ್ಥಳ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭,
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಕಟ್ಟಡ
ನಂ. ೨/೧೦೬, ೩ನೇ ಮಹಡಿ, ೧೭ನೇ ಅಡ್ಡರಸ್ತೆ,
ಮಾಗಡಿ ಕಾರ್ಡ್‌ರಸ್ತೆ, ವಿಜಯನಗರ, ಬೆಂಗಳೂರು – ೫೬೦ ೦೪೦

ಮುದ್ರಣ
ರಾಜಾ ಪ್ರಿಂಟರ್ಸ್, ಬೆಂಗಳೂರು

ದೇಶ ಸುತ್ತು ಕೋಶ ಓದು

ಕನ್ನಡನಾಡು ಅಮೂಲ್ಯ ಹಾಗೂ ಸಮೃದ್ಧ ಜಾನಪದ ಸಂಪತ್ತಿನ ಆಗರವಾಗಿದೆ. ಅಪಾರವಾದ ಜ್ಞಾನದ ಅನನ್ಯತೆಯನ್ನು ಶೋಧಿಸುವ, ಸಂರಕ್ಷಿಸುವ ಹಾಗೂ ಸಂವರ್ಧಿಸುವ ಕಾರ್ಯಗಳು ಯಾವ ಕಾಲಕ್ಕೂ ಆಗಬೇಕಾದ ಕಾರ್ಯವೇ ಆಗಿದೆ. ಈ ಮಹತ್ವದ ಉದ್ದೇಶಗಳ ಈಡೇರಿಕೆಗಾಗಿ ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯವಿತ್ತು. ನೆಲದ ಸಂಸ್ಕೃತಿಯನ್ನು ಉಸಿರಾಗಿಸಿಕೊಂಡು ಬದುಕುತ್ತಿರುವ ನಾಡಿನ ಸಮಸ್ತರ ಒಲವು ಮತ್ತು ನಿರೀಕ್ಷೆಗಳು ನಿಜವಾಗಬೇಕೆಂಬ ಮಹದಾಸೆಯೊಂದಿಗೆ ಜಗತ್ತಿನ ಪ್ರಪ್ರಥಮ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಇದು ಕನ್ನಡದ ಮಟ್ಟಿಗೆ ಅಷ್ಟೇ ಅಲ್ಲ ದೇಶೀ ಸಂಸ್ಕೃತಿಯ ಮೂಲವನ್ನು ಶೋಧಿಸುವ ಮತ್ತು ಅದರ ಹರವು ವಿಸ್ತಾರಗೊಳ್ಳುವಂತೆ ಮಾಡಬೇಕಾದ ಮಹತ್ವದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ವಿಶ್ವವಿದ್ಯಾಲಯದ ಸ್ಥಾಪನೆ ಚಾರಿತ್ರಿಕವಾಗಿ ಮಹತ್ವದ್ದೆನಿಸಿದೆ.

ಸಮಾಜದ ಎಲ್ಲ ಸಮುದಾಯಗಳ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲಿಕೆ, ಪ್ರದರ್ಶನ ಕಾರ್ಯಗಳು ಇನ್ನೂ ತೀವ್ರಗತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪ್ರಮಾಣಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುವ ಉದ್ದೇಶವೇ ವಿಶ್ವವಿದ್ಯಾಲಯದ ಮೂಲ ಧ್ಯೇಯವಾಗಿದೆ. ಬಹುಭಾಷಿಕ ಹಾಗೂ ಬಹುಸಂಸ್ಕೃತಿಗಳು ಇರುವ ನಾಡಿನಲ್ಲಿ ಇನ್ನೂ ಅನಾವರಣಗೊಳ್ಳಬೇಕಾದ ಜ್ಞಾನ ಸಂಪತ್ತು ಅಗಾಧ ಪ್ರಮಾಣದಲ್ಲಿದೆ. ಈವರೆಗೆ ಆದ ಜಾನಪದ ಕ್ಷೇತ್ರ ಸಂಬಂಧೀ ಕಾರ್ಯಗಳ ಬಗೆಗೆ ನಾವು ಅಷ್ಟೇನೂ ಬೀಗುವಂತಿಲ್ಲ. ಇನ್ನೂ ಆಗಬೇಕಾದ ಕೆಲಸ–ಕಾರ್ಯಗಳು ಬೇಕಾದಷ್ಟು ಇವೆ ಎಂಬ ವಿನಯದಿಂದಲೇ ಜಾನಪದ ವಿಶ್ವವಿದ್ಯಾಲಯ ಕಾರ್ಯಪ್ರವೃತ್ತವಾಗಿದೆ. ಜನಪದರ ಲೋಕದೃಷ್ಟಿ, ಅವರ ವಿವೇಕ ಹಾಗೂ ಜಾಗತೀಕರಣದಿಂದಾಗಿ ತೀವ್ರಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚಕ್ಕೆ ಪರ್ಯಾಯ ದೇಶೀ ಜ್ಞಾನ ಆಕರವಾಗಿ ಅದರ ಪ್ರಸ್ತುತತೆಗೆ ವಿಶ್ವವಿದ್ಯಾಲಯ ವಿಶೇಷವಾಗಿ ಗಮನಹರಿಸಿದೆ. ಶಿಷ್ಟ ಭಾಷೆಯ ಯಾಜಮಾನ್ಯಕ್ಕೆ ಭಿನ್ನವಾಗಿ ಮೌಖಿಕತೆಯಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಮೌಖಿಕ ಸಂಕಥನಕ್ಕೆ ಹೆಚ್ಚು ಒತ್ತು ಕೊಡುವ ಜರೂರತ್ತು ನಮ್ಮ ಮುಂದಿದೆ.

ಜಾನಪದ ಎಂದರೆ ಆಧುನಿಕ ಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿರುದ್ಧವಾದುದು ಎಂಬ ತಿಳಿವಳಿಕೆ ಬಲವಾಗಿ ಬೇರೂರಿದೆ. ಅಷ್ಟೇ ಅಲ್ಲ ಹಳೆಯದನ್ನು ಸಂಗ್ರಹಿಸುವುದು, ಮುಂದಿನ ವರ್ಗಕ್ಕೆ ಕೊಡಿಟ್ಟು ಕೊಡುವುದು ಎಂಬ ಸ್ಥಾಪಿತ ತಿಳಿವಳಿಕೆಯ ಚೌಕಟ್ಟಿನಾಚೆಗೂ, ಜಾನಪದವನ್ನು ವಿಶಾಲ ಮನೋಭೂಮಿಕೆಯಲ್ಲಿ ಅರ್ಥೈಸಿಕೊಳ್ಳಬೇಕಾದುದು ಇಂದಿನ ಅಗತ್ಯ ವಾಗಿದೆ. ಜಾನಪದವು ಭೂಮಿತೂಕದ್ದು, ಆಕಾಶದಷ್ಟು ವಿಸ್ತಾರವಾದುದು, ನೀರಿನಷ್ಟು ಚಲನಶೀಲವಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನ; ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿಕೊಂಡಿರುವ ಒಂದು ತವನಿಧಿಯಾಗಿದೆ. ಹಾಗಾಗಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಧ್ಯೇಯ ವಾಕ್ಯವನ್ನು ತನ್ನ ಮೂಲಮಂತ್ರವಾಗಿಸಿಕೊಂಡು ವಿಶ್ವವಿದ್ಯಾಲಯ ಕಾರ್ಯೋನ್ಮುಖವಾಗಿದೆ. ಈವರೆಗೆ ಗುಪ್ತನಿಧಿಯಾಗಿದ್ದ ತವನಿಧಿ ಹೊನ್ನು ಈಗ ಜಗತ್ಪ್ರಕಟವಾಗಬೇಕಿದೆ. ವಿದ್ಯೆಯನ್ನು ಬೋಧಿಸುವುದು, ಸಂರಕ್ಷಿಸುವುದು ಅಷ್ಟೇ ಅಲ್ಲ ಹಂಚುವುದು–ಪ್ರಸರಣ ಮಾಡುವುದು ಜ್ಞಾನ ಕೇಂದ್ರವಾದ ವಿಶ್ವವಿದ್ಯಾಲಯದ ಮೂಲ ಗುರಿಯಾಗಿರಬೇಕು. ಈ ನಾಡು ಮೊದಲ ಬಾರಿಗೆ ವಿಶ್ವವಿದ್ಯಾಲಯದ ಮೂಲಕ ದೇಸೀ ಜ್ಞಾನಸಂಪತ್ತನ್ನು ಜಾಗತಿಕ ಪರಿಸರದಲ್ಲಿ ಬಿತ್ತುವ ಕಾರ್ಯಕ್ಕೆ ಕಂಕಣಬದ್ಧವಾಗಿದೆ. ಬಿತ್ತುವ, ಬೆಳೆಯುವ ಪ್ರಕ್ರಿಯೆ ಹೊಸಹುಟ್ಟಿಗೆ ನಾಂದಿ ಹಾಡುವುದಲ್ಲದೆ ಜ್ಞಾನಪರಂಪರೆಯ ಸತತ ಮುಂದುವರಿಕೆ ಸಂರಕ್ಷಣೆ, ಅಭಿವೃದ್ಧಿಯ ರೂಪವೂ ಆಗಿದೆ.

ಪಾರಂಪರಿಕ ಜ್ಞಾನ/ಸಮುದಾಯ ಜ್ಞಾನ ಮತ್ತು ಆಚರಣೆಯ ಮೂಲ ನೆಲೆಯಿಂದಲೇ ಈ ಹೊತ್ತಿನ ಜ್ಞಾನಪದ್ಧತಿ ಬೆಳೆದು ಬಂದಿದೆ. ಸಮುದಾಯ ಜ್ಞಾನದಿಂದ ತಂತ್ರಜ್ಞಾನ ಕೌಶಲಗಳ ಬಳಕೆಯನ್ವಯ ನಮ್ಮ ಗ್ರಾಮ ವ್ಯವಸ್ಥೆಯನ್ನು ಹೆಚ್ಚು ಉತ್ಪಾದಕವಾಗಿಯೂ, ಪ್ರಾಯೋಜಕವಾಗಿಯೂ, ದೃಢವಾಗಿಯೂ ರೂಢಿಸಬೇಕಾಗಿದೆ. ಆದರೆ ಇವೊತ್ತಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಜಾನಪದದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಆಗಿವೆ. ಅದರಲ್ಲೂ ಉದ್ಯಮಪತಿತ್ವ ತನಗೆ ಬೇಕಾದ ಜ್ಞಾನವನ್ನು ಮಾತ್ರ ಸೆಳೆದುಕೊಂಡು ಲಾಭದಾಯಕವಲ್ಲದ್ದನ್ನು ಹಿಂದಕ್ಕೆ ತಳ್ಳುತ್ತಲೇ ಬರುತ್ತಿದೆ. ಪಾರಂಪರಿಕ ಜ್ಞಾನ –ವಿಜ್ಞಾನ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ವರ್ತಮಾನಕ್ಕೆ ಹೊಂದಿಕೆಯಾಗುವ ಅಧ್ಯಯನ ಮಾದರಿಗಳನ್ನು ರೂಪಿಸಿಕೊಳ್ಳುವುದು ಆವಶ್ಯಕವಾಗಿದೆ. ಬದಲಾದ ಸನ್ನಿವೇಶದಲ್ಲಿ ಜಾನಪದ ಎನ್ನುವುದು ನಿತ್ಯದ ಬದುಕಿನ ಒಡಲಾಳದಿಂದಲೇ ರೂಪಾಂತರವನ್ನು ಹೊಂದುತ್ತಿರುವುದರಿಂದ ಜಾನಪದದಲ್ಲಿಯೇ ಅದಕ್ಕೆ ಪರ್ಯಾಯವಾಗಿ, ಪ್ರತಿರೋಧ ಒಡ್ಡುವ ಶಕ್ತಿ ಇರುವುದನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮದೇ ಜ್ಞಾನ, ಸಂಸ್ಕೃತಿಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು ಯತ್ನಿಸಬೇಕಾಗಿದೆ. ಜನಪದರ ನಾಣ್ಣುಡಿಯಂತೆ, ಜ್ಞಾನ ಸಂಪಾದನೆಗೆ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳು ಎರಡೇ; ಅವುಗಳಲ್ಲಿ ಒಂದು ದೇಶ ಸುತ್ತುವುದು, ಮತ್ತೊಂದು ಕೋಶ ಓದುವುದು. ಮನುಷ್ಯ ತನ್ನ ಜ್ಞಾನದಾಹವನ್ನು ನೀಗಿಸಿಕೊಳ್ಳಲು ಎರಡೂ ಮಾರ್ಗಗಳನ್ನು ಅನುಸರಿಸುವುದು ಅಗತ್ಯ ಆದರೆ ಜ್ಞಾನ ಸಂಪಾದನೆಗೆ ಅವೆರೆಡರಲ್ಲಿ ಒಂದನ್ನಾದರೂ ಮಾಡಲೇಬೇಕು. ವಿಶ್ವವಿದ್ಯಾಲಯವು ಮೌಲಿಕವಾದ ಕೋಶಗಳನ್ನು ಪ್ರಕಟಿಸಿ ಓದುವಂತೆ ಪ್ರೇರೇಪಿಸುವ ಮೂಲಕ ಮಹತ್ವದ ಪ್ರಯತ್ನವನ್ನು ಮಾಡುತ್ತಿದೆ. ವಿಶ್ವವಿದ್ಯಾಲಯ ನೆಲಮೂಲವಾದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಕುರಿತು ವಿಶೇಷ ಅಧ್ಯಯನ, ಅಧ್ಯಾಪನ, ಸಂಶೋಧನೆ ಸೇರಿದಂತೆ ಹತ್ತು ಹಲವು ಕಾರ್ಯಯೋಜನೆಗಳನ್ನು ರೂಪಿಸಿಕೊಂಡು ತನ್ನ

ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಕೊಳ್ಳುತ್ತಲಿದೆ. ದೇಶೀ ಎನ್ನಬಹುದಾದ ಎಲ್ಲ ಜ್ಞಾನವನ್ನು ಸಂಗ್ರಹಿಸುವ, ನಿರಂತರವಾಗಿ ಚಲನಶೀಲಗೊಳ್ಳುವ ಜಾನಪದವನ್ನು ಅದೇ ನೆಲೆಯಿಂದಲೇ ಗ್ರಹಿಸಿ, ಹೊಸ ಹೊಸ ಜ್ಞಾನ ಶೋಧದೊಂದಿಗೆ ಜಾನಪದವನ್ನು ಇಟ್ಟು ನೋಡುವ ಮತ್ತೆ ಹೊಸದಾಗಿ ಕಟ್ಟಿಕೊಳ್ಳುವ ಕಾರ್ಯವನ್ನು ನೋಂಪಿಯಂತೆ ಮುನ್ನಡೆಸಿಕೊಂಡು ಹೋಗುವುದೇ ಜಾನಪದ ವಿಶ್ವವಿದ್ಯಾ ಲಯದ ಮೂಲ ಆಶಯವಾಗಿದೆ. ಅದರ ಭಾಗವಾಗಿ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಪುಸ್ತಕ ಪ್ರಕಟಣೆಗೆ ಮುಂದಾಗಿದೆ. ಈ ಮೂಲಕ ಅಂತರಶಿಸ್ತೀಯ ಜ್ಞಾನಶೋಧದ ವಿನೂತನ ಮಾರ್ಗಗಳು ತೆರೆದುಕೊಳ್ಳಲು ವಿಶ್ವವಿದ್ಯಾಲಯ ನಾಂದಿ ಹಾಡಿದೆ.

ಜನಪದರ ಬದುಕಿನೊಂದಿಗೆ ಹಾಡು ಬೆಸೆದುಕೊಂಡೇ ಬಂದಿರುತ್ತದೆ. ಬದುಕಿನ ಗತಿಗೆ ಲಯ ಯಾವತ್ತೂ ಜೊತೆಗೇ ಇರುತ್ತದೆ. ಹಾಗಾಗಿ ಈ ಎರಡೂ ಸಂಗತಿಗಳು ಅಭಿನ್ನ. ಜೀವನದಲ್ಲಿ ಸಹಜವಾಗಿ ಎದುರಾಗುವ ಪಾಡನ್ನು ಮರೆಯಲು ಹಾಡಿನ ಮೊರೆಹೋದ ಜನಪದರ ಬದುಕಿನ ಜೀವನಶೈಲಿ ಅನುಕರಣೀಯ. ಬದುಕಿನೊಂದಿಗೆ ಮೇಳವಿಸಿಕೊಂಡಿರುವ ಸಂಗೀತವನ್ನು ಶಿಷ್ಟ ಮತ್ತು ಜನಪದ ಎಂದು ವಿಭಾಗಿಸಿರುವುದು ಅಧ್ಯಯನದ ಅನುಕೂಲಕ್ಕಾಗಿ ಅಷ್ಟೆ. ಹಾಡುಗಾರನಿಗೆ ಹಾಡಿನ ಪರಿ ಮುಖ್ಯವೇ ಹೊರತು ಆ ಕುರಿತ ಪರಿಕಲ್ಪನೆಗಳಲ್ಲ; ಈ ಹಿನ್ನೆಲೆಯಲ್ಲಿ ಸಂಗೀತವನ್ನೇ ತಮ್ಮ ಉಸಿರನ್ನಾಗಿಸಿಕೊಂಡಿರುವ ಅನೇಕ ಸಂಗೀತ ಕಲಾವಿದರು ನಾಡಿನ ಸಂಗೀತ ಕ್ಷೇತ್ರದ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ. ಇಂಥ ಸಂಗೀತ ಸಾಧಕರ ಹಾಡುಗಾರಿಕೆ ಜನಮಾನಸಕ್ಕೆ ಚಿರಪರಿಚಿತ. ಆದರೆ, ಅವರ ಕಲಾಬದುಕನ್ನು ಪರಿಚಯಿಸುವ ಪ್ರಯತ್ನಗಳು ನಡೆದಿರುವುದು ವಿರಳವೆ. ಈ ನಿಟ್ಟಿನಲ್ಲಿ ಜನಪದ ಮತ್ತು ಶಿಷ್ಟ ಸಂಗೀತ ಪ್ರಕಾರಗಳೆಡರಲ್ಲೂ ವಿಶಿಷ್ಟ ಸಾಧನೆ ಮೆರೆದಿರುವ ಉಸ್ತಾದ್ ಹುಮಾಯೂನ್ ಎಂ. ಹರಲಾಪುರ ಅವರನ್ನು ಪರಿಚಯಿಸುವ ಡಾ. ವೃಷಭಕುಮಾರ್ ಅವರ ಈ ಪಯತ್ನ ಗಮನಾರ್ಹವಾದುದು. ಅವರ ಬದುಕಿನ ಘಟನೆಗಳನ್ನು ವಿವರಿಸಿರುವುದರ ಜೊತೆಗೆ ಸಂಗೀತದ ವಿವಿಧ ಪ್ರಕಾರಗಳ ಬಗೆಗೆ ಮಾಹಿತಿ ಒದಗಿಸುವ ಬರೆಹಗಳು ಇಲ್ಲಿ ಸಂಚಿತವಾಗಿವೆ. ಈ ಮಹತ್ವದ ಕಾರ್ಯಕ್ಕೆ ಡಾ. ವೃಷಭಕುಮಾರ್ ಅಭಿನಂದನಾರ್ಹರು.

ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತುವಲ್ಲಿ ತುಂಬ ಮುತುವರ್ಜಿ ವಹಿಸಿದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರೂ, ಮೌಲ್ಯಮಾಪನ ಕುಲಸಚಿವರೂ ಆದ ಪ್ರೊ. ಸ.ಚಿ. ರಮೇಶ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳು

ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂತ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ' ವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಪುನರುತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ ಸಿದ್ಧ ಜ್ಞಾನದ ಸಂಗ್ರಹದ ಜೊತೆಗೆ ನಿತ್ಯ ನೂತನವಾದ ಜನಪದ ಸಂಸ್ಕೃತಿಯನ್ನು ಪುನರ್ ನಿರ್ವಚಿಸುವ, ಹೊಸ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈ ಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯ ಬದುಕು ಬದಲಾಗುತ್ತಲೇ ಸಂವೇದನಾಶೀಲಗೊಳ್ಳುತ್ತ ಹೋಗುತ್ತದೆ. ನಮ್ಮ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆದ ಇವೊತ್ತಿನ ಸಂದಿಗ್ದತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗಗಳು, ಕಳೆಗುಂದುತ್ತಿರುವ ಜನಪದ ಸಂಸ್ಕೃತಿಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯ ಯೋಜನೆಗಳನ್ನು ರೂಪಿಸಿದೆ.

ಅಂತರ್‌ಶಿಸ್ತೀಯ ಜ್ಞಾನ ಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆ ಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ ವಿಶ್ವವಿದ್ಯಾಲಯದ ಮೇಲಿದೆ. ಅದನ್ನು ಸಾಧ್ಯವಾಗಿಸುವ ಉದ್ದೇಶ ಇಟ್ಟುಕೊಂಡೇ ಆರಂಭವಾದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು, ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಅದರ ಮೂಲ – ಚೂಲಗಳನ್ನು ಕಂಡರಿಸುವ ಪ್ರಯತ್ನ ಮಾಡುವ ಮಹದಾಸೆ ಹೊಂದಿದೆ. ಜೊತೆಗೆ ಹೊಸ ಅಧ್ಯಯನಗಳು, ನೂತನ ಮಾದರಿಯ ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಉದ್ದೇಶಕ್ಕೆ ಒತ್ತಾಸೆಯಾಗಿ ನಿಲ್ಲಲಿದೆ. ಕೇಂದ್ರವು ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಮೌಲಿಕವಾದ ಪುಸ್ತಕಗಳ ಪ್ರಕಟಣೆಗೆ ಮುಂದಾಗಿದೆ. ನಾವು ಪ್ರಕಟ ಮಾಡುವ ವೈವಿಧ್ಯಪೂರ್ಣವಾದ ಮೌಲಿಕ ಕೃತಿಗಳು ನಾಡಿನ ಓದುಗರಿಗೆ ತಲುಪಿ, ಅವು ಸದುಪಯೋಗವಾದರೆ ಮಾತ್ರ ನಮ್ಮ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

ಸಂಗೀತವು ಜನಪದರ ಬದುಕಿನ ಅವಿಭಾಜ್ಯ ಅಂಗ. ಜನಪದರು ತಮ್ಮ ದಿನನಿತ್ಯದ ಜೀವನದ ಜಂಜಾಟಗಳನ್ನು ಮರೆಯಲು ಹಾಡಿನೊಂದಿಗೆ ಸಾಂಗತ್ಯ ಸಾಧಿಸಿಕೊಂಡಿರುವುದು ತಿಳಿದಿರುವ ಸಂಗತಿಯೇ ಆಗಿದೆ. ಜಾತಿ, ಮತ–ಪಂಥ, ಪ್ರದೇಶ ಎಂಬ ಯಾವುದೇ ಭೇದವಿಲ್ಲದೆ ಸಮುದಾಯದ ಸರ್ವರನ್ನೂ ತನ್ನತ್ತ ಸೆಳೆಯುವ ಸಂಗೀತ ಶ್ರೇಷ್ಠವಾದುದು. ಸಂಗೀತ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆಗೈಯುವ ಮೂಲಕ ನಾಡಿನ ಕೀರ್ತಿಯನ್ನು ಹೆಚ್ಚಿಸಿದ ಅನೇಕ ಕಲಾವಿದರು ನಮ್ಮ ನಡುವೆ ಮಿನುಗುತಾರೆಗಳಂತೆ ಇದ್ದಾರೆ. ಅಂಥ ವಿರಳ ಸಂಗೀತ ಸಾಧಕ ಕಲಾವಿದರಾಗಿರುವ ಉಸ್ತಾದ್ ಹುಮಾಯೂನ್ ಹರಲಾಪುರ ಒಬ್ಬರು. ಅವರ ಸುಶ್ರಾವ್ಯ ಸಂಗೀತ ಕೇಳಿದ ಶ್ರೋತೃಗಳಿಗೆ ಅವರ ಜೀವನದ ಯಶೋಗಾಥೆಯನ್ನು ಓದುವ ಅವಕಾಶವನ್ನು ಒದಗಿಸುವ ಪ್ರಕೃತ ಕಾರ್ಯ ಮಹತ್ವಪೂರ್ಣವಾದುದು. ಹರಲಾಪುರರ ಜೀವನ ಚರಿತ್ರೆಯನ್ನು ದಾಖಲಿಸಿದ ಡಾ. ವೃಷಭಕುಮಾರ್ ಅವರಿಗೆ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಸ.ಚಿ. ರಮೇಶ
ನಿರ್ದೇಶಕ

ಪರಿವಿಡಿ

ಪೀಠಿಕೆ

ಧಾರವಾಡ ಜಿಲ್ಲೆಯ ಕುಂದಗೋಳದ ಕುಗ್ರಾಮವಾದ ಹರಲಾಪುರದಲ್ಲಿ ಜನಿಸಿದ ಹುಮಾಯೂನ್ ಹರಲಾಪುರ ಪ್ರಧಾನವಾಹಿನಿಗೆ ಬಾರದ ನದಾಫ ಸಮುದಾಯಕ್ಕೆ ಸೇರಿದವರು. ಆದರೆ ಎಳೆವೆಯಲ್ಲೇ ಜನಪದ ಸಂಗೀತವನ್ನು ಅನುಕರಿಸಿ, ಹಾಡಿ, ಎಲ್ಲರ ಮೆಚ್ಚುಗೆಗೆ ಪಾತ್ರರಾಗಿ, ಶ್ರೀ ರಂಭಾಪುರಿ ಜಗದ್ಗುರುಗಳ ಶಿಫಾರಸ್ಸಿನಿಂದ ಗದುಗಿನ ಶ್ರೀ ಗಾನಯೋಗಿ ಶಿವಯೋಗಿ ಪಂಡಿತ ಡಾ॥ ಪುಟ್ಟರಾಜ ಕವಿ ಗವಾಯಿಗಳ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಹಿಂದೂಸ್ಥಾನಿ ರಾಗ, ಲಯಗಳ ಸಂಗೀತ ಶಿಕ್ಷಣ ಪಡೆದು, ಎರಡು ದಶಕಗಳ ಕಾಲ ಸತತ ಸಂಗೀತ ಸಾಧನೆ ಮಾಡಿ ಕರ್ನಾಟಕದ ಗವಾಯಿಗಳಲ್ಲಿ ಪ್ರಮುಖರು ಉಸ್ತಾದ್ ಹುಮಾಯೂನ್ ಎಂ. ಹರಲಾಪುರ ಅವರು.

ಹುಮಾಯೂನರ ಬದುಕಿನ ಸಂಕಥನ ಕಷ್ಟಕೋಟಲೆಗಳ ಮೇಲೆ ರೂಪುಗೊಂಡದ್ದು. ದಶಕಗಳ ಕಾಲ ಸಂಗೀತ ಹೇಳಿಕೊಟ್ಟೇ ಬದುಕಿನ ಬಂಡಿ ನಡೆಸಿದವರು. ಆದರೆ ಅವರ ಸಂಗೀತದ ಪರಿಶ್ರಮವು ಅವರನ್ನು ನಾಡಿನೆಲ್ಲೆಡೆ ಗುರುತಿಸುವಂತೆ ಮಾಡಿದೆ. ವಚನ ಸಂಗೀತ, ಹಿಂದೂಸ್ಥಾನಿ ಸಂಗೀತದಲ್ಲಿ ಹಿಡಿತ ಹೊಂದಿರುವ ಹುಮಾಯೂನ ಹರಲಾಪುರ ಅವರ ಗರಡಿಯಲ್ಲಿ ಅನೇಕ ಸಂಗೀತಗಾರರು ಬೆಳಕಿಗೆ ಬಂದಿದ್ದಾರೆ. ಇವರ ಮಾರ್ಗದರ್ಶನದಲ್ಲಿ ಕಲಿತ ಲೌಕಿಕ ಜಗತ್ತಿನ ದೃಕ್‌ಅನುಭವವಿಲ್ಲದ ನಾಲ್ಕು ಅಂಧ ಸಂಗೀತಗಾರರು ಇಂದು ಸರ್ಕಾರಿ ಉದ್ಯೋಗವನ್ನು ಪಡೆದು ಬದುಕನ್ನು ರೂಪಿಸಿಕೊಂಡಿದ್ದಾರೆ. ಇವರ ಬದುಕಿನ ವಿಚಾರ ಮತ್ತು ಸಂಗೀತ ಬಗೆಗಿನ ವಿಚಾರಗಳನ್ನು ಕಿರುಹೊತ್ತಿಗೆಯಲ್ಲಿ ಪರಿಚಯಿಸುವುದು ಪ್ರಮುಖ ಉದ್ದೇಶ. ಕೃತಿಯು ಚೆನ್ನಾಗಿ ಮೂಡಿಬರಬೇಕಾದರೆ ವೈಯಕ್ತಿಕ ವಿವರಗಳಿಗಿಂತ ಜನಪದ ಸಂಗೀತ ಮತ್ತು ಶಾಸ್ತ್ರೀಯ ವಿವರಗಳನ್ನು ಹೆಚ್ಚಾಗಿ ದಾಖಲಿಸಿ ಎಂದು ಸಲಹೆ ನೀಡಿದ್ದಾರೆ.

ಕರಡು ಪ್ರತಿ ಪರಿಶೀಲಿಸಿ ತಿದ್ದಿದ ನಾಡಿನ ಹಿರಿಯ ಜಾನಪದ ವಿದ್ವಾಂಸರಾದ ಡಾ. ಎಸ್.ಪಿ. ಪದ್ಮಪ್ರಸಾದ್, ಕೃತಿಯನ್ನು ಪ್ರಕಟಿಸಲು ಒಪ್ಪಿಗೆ ನೀಡಿದ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಡಿ.ಬಿ. ನಾಯಕ ಅವರಿಗೆ ಹಾಗೂ ಕುಲಸಚಿವ (ಮೌಲ್ಯಮಾಪನ) ಹಾಗೂ ನಿರ್ದೇಶಕ, ವಿಸ್ತರಣೆ ಹಾಗೂ ಸಲಹಾ ಕೇಂದ್ರ ಪ್ರೊ. ಸ.ಚಿ. ರಮೇಶ ಅವರಿಗೆ ಮತ್ತು ಅಚ್ಚುಕಟ್ಟಾಗಿ ಅಕ್ಷರ ಸಂಯೋಜನೆ ಮಾಡಿಕೊಟ್ಟ ವಿಶ್ವ ಗುಜ್ಜರ್ ಅವರಿಗೆ ಮತ್ತು ಇದಕ್ಕೆ ಸಹಕರಿಸಿದ ವಿಶ್ವವಿದ್ಯಾಲಯದ ಎಲ್ಲಾ ಸಿಬ್ಬಂದಿ ವರ್ಗದವರಿಗೆ ನನ್ನ ಅನಂತಾನಂತ ಧನ್ಯವಾದಗಳು.

– ಡಾ. ವೃಷಭ ಕುಮಾರ್

೧. ಬಾಲ್ಯ

ಹುಮಾಯೂನ್ ಹರಲಾಪುರರವರು ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಹರಲಾಪುರ ಗ್ರಾಮದ ಕೃಷಿಕ ಮನೆತನದ ಮೌಲಾಸಾಬ್ ಮತ್ತು ಹುಸೇನಬಿ ಅವರ ನಾಲ್ಕನೇ ಪುತ್ರನಾಗಿ ೦೨-೦೩-೧೯೬೩ರಲ್ಲಿ ಜನಿಸಿದರು.

ನನ್ನ ತಂದೆ ಮೌಲಾಸಾಬ್ ಉತ್ತಮ ಜನಪದ ಹಾಡುಗಾರರಾಗಿದ್ದರು. ಅವರು ಶಿಶುನಾಳ ಶರೀಫರು ಮತ್ತು ಶ್ರೀ ರಂಭಾಪುರಿ ಜಗದ್ಗುರುಗಳ ಅನುಯಾಯಿಗಳು. ಅವರು ಅನೇಕ ಏಕತಾರಿ ಹಾಡುಗಳನ್ನು ಹಾಡುತ್ತಿದ್ದರು. ನನ್ನ ತಾಯಿ ಬೆಳಿಗ್ಗೆ ಎದ್ದು ಕುಟ್ಟುವಾಗ ಮತ್ತು ಬೀಸುವಾಗ ಹಾಡುತ್ತಿದ್ದ ಹಾಡುಗಳು ಉತ್ಸಾಹ ತುಂಬಿ ಅವರನ್ನು ಹಾಡಲು ಹುರಿದುಂಬಿಸುತ್ತಿದ್ದವು. ಹುಮಾಯೂನ್ ಅವರ ತಾಯಿಗೆ ಈಗ ಎಂಭತ್ತು ವರ್ಷ. ಈಗಲೂ ಅವರ ಕಂಠ ಸಿರಿಯಲ್ಲಿ ಯಾವುದೇ ಭಿನ್ನವಿಲ್ಲ. ಈಗಲೂ ಅವರು ಅನೇಕ ಜನಪದ ಹಾಡುಗಳನ್ನು ಸರಾಗವಾಗಿ, ಸುಶ್ರಾವ್ಯವಾಗಿ ಹಾಡುತ್ತಾರೆ. ಅಂದಿನ ದಿನಗಳಲ್ಲಿ ನನ್ನ ತಂದೆ ಹಾಡಿದ ಜನಪದ ಹಾಡಿನ ತುಣುಕು ಹೀಗಿದೆ.

ಜಾಣ ಹೆಂಗಸರ ಆಟ ನೋಡಿರೀ॥
ಜಲದ ಬಾವ್ಯಾಗ। ಛಲದಿಂದ ಕೊಡಗಳ ತುಂಬುತ್ತಿದ್ದರು
ನಲೆದು ನೀರಾಗ॥
ಪರಮ ಪತಿವ್ರತಿ ಎಂಬ ಗರತಿ
ಕೊಡವ ಹೊತ್ತುಕೊಂಡು ನೀರುತರಲು
ನೀರಿಗಾಗಿ ಹೊರಗೆ ಬರಲು
ಕಾಮಕ್ರೋಧ ಎಂಬ ನೀಚರು ದಾರಿಗಂಟಲು॥
ಪುಂಡ ಪುಂಡ ಮಂದಿ ಹೋಗಿ
ಉಡಾಳ ಮಂದಿ ಊರೊಳಗೆ ತಿರುಗುತಿರಲು
ಪತ್ಯಾ ಮಾಡುವ ಉತ್ತಮರೆಲಾ
ಎತ್ತ ಹೋದರು ಹೇಳೆ ತಂಗಿಯ॥

ಆರು ಮೂರು ಮಂದಿ ಗೆಳತಿಯರೂ
ಆಶಿ ಪಾಶಿ ಹೇಳಿ ಮಾಡಿ
ದೇಶದೊಳಗೆ ನಮ್ಮ ಗುರುವಿನ
ವಾಸ ಶಿಶುನಾಳಧೀಶನ ಕೂಡಿದಂತೆ॥

ಇಂಥ ಹಾಡುಗಳೇ ನನಗೆ ಸಂಗೀತ ಕಲಿಯಲು ಪ್ರೇರಣೆ ಒದಗಿಸಿವೆ.

ಹರಲಾಪುರ ಗ್ರಾಮದ ಜನಸಂಖ್ಯೆ ಸುಮಾರು ಎರಡೂವರೆ ಸಾವಿರ. ಚಿಕ್ಕಂದಿನಲ್ಲಿ ನನಗೆ ಓದಿನ ಕಡೆ ಹೆಚ್ಚು ಆಸಕ್ತಿ ಇರಲಿಲ್ಲ. ಸಂಜೆ ಶಾಲೆ ಬಿಟ್ಟ ತಕ್ಷಣ ದುರ್ಗಮ್ಮನ ಗುಡಿಗೆ ಹೋಗಿ ರಾತ್ರಿ ಹತ್ತರವರೆಗೂ ಸಂಗಡಿಗರೊಂದಿಗೆ ಹಾಡುತ್ತಿದ್ದೆ. ತಂದೆಯವರು ಓದಲು ಎಲ್ಲಿ ಹೇಳುತ್ತಾರೋ ಎಂಬ ಭಯದಿಂದ ತಪ್ಪಿಸಿಕೊಳ್ಳಲು ರಾತ್ರಿ ಹತ್ತರವರೆಗೂ ಹಾಡುತ್ತಿದ್ದುದೇ ಹೆಚ್ಚು. ನಾನು ಚಿಕ್ಕಂದಿನಲ್ಲಿ ಹತ್ತು ಹದಿನೈದು ಹುಡುಗರನ್ನು ಕೂಡಿಕೊಂಡು ಮೇಳ ಮಾಡಿಕೊಂಡು ಊರೆಲ್ಲಾ ಅಡ್ಡಾಡುತ್ತಿದ್ದೆ. ಮೇಳದ ಈ ಎಲ್ಲಾ ಹುಡುಗರು ಓಣಿ ಒಳಗೆ ಮತ್ತು ಮಠದಲ್ಲಿ ಹಾಡುತ್ತಿದ್ದರು.

ಚಿಕ್ಕವನಿದ್ದಾಗ ಸುಶ್ರಾವ್ಯವಾಗಿ ಹಾಡುತ್ತಿದ್ದ ಹಾಡುಗಳು ಗ್ರಾಮದ ಜನರಿಗೆ ಪ್ರಿಯವಾಗಿತ್ತು. ಗ್ರಾಮದ ಅನೇಕರು ನನ್ನನ್ನು ಕರೆಸಿ ಒತ್ತಾಯಪೂರ್ವಕವಾಗಿ ಹಾಡಿಸುತ್ತಿದ್ದುದೂ ಉಂಟು. ಗ್ರಾಮದ ಅನೇಕ ಹಬ್ಬ ಉತ್ಸವಗಳ ಸಂದರ್ಭದಲ್ಲಿ ನನ್ನಿಂದ ಹಾಡಿಸುವ ಸಲುವಾಗಿ ಗ್ರಾಮದ ಕೆಲವು ಹೆಣ್ಣುಮಕ್ಕಳು 'ನೀನು ನಿಂತು, ನಡೆಯುತ್ತ ಹಾಡಿದರೆ ನಿನ್ನ ಕಾಲಿಗೆ ನೋವಾಗುತ್ತದೆ' ಎಂದು ನನ್ನನ್ನು ಎತ್ತಿಕೊಂಡು ಹಾಡುಗಳನ್ನು ಹಾಡಿಸುತ್ತಿದ್ದರು. ಆಗ ಹಾಡುತ್ತಿದ್ದ ಜನಪದ ಹಾಡು ಇಂತಿದೆ.

ಹೋಗಿ ಬರುವಂತಿ ತಂಗಿ ಊರಿಗೇ

ನಿನ್ನ ಕರಿಲಾಕ ಬಂದೀ ತೇರಿಗೆ
ಮತ್ತೆ ಬರುವಂತಿ ನಾಳೆ ನಿನ್ನೆ
ಊರಿಗೆ ಹೋಗಿ ಬರುವಂತಿ ಬಾ ತಂಗಿ ಊರಿಗೇ ॥
ವಾರಿಗಿ ಗೆಳತ್ಯಾರೆಲ್ಲ ಬಂದಾರವ್ವ ತೇರಿಗೆ
ದಾರಿಗೆ ಕಾಯುತ್ತ ನಿಂತಾರವ್ವ ದಾರಿಗೆ
ಹೇಮರೆಡ್ಡಿ ಮಲ್ಲಮ್ಮ ಕಿತ್ತೂರು ಚೆನ್ನಮ್ಮ
ಅಕ್ಕಮಹಾದೇವಿ ಶಿವಶರಣಾರು
ಹೋಗಿ ಬರುವಂತಿ ಬಾ ತಂಗಿ ಊರಿಗೇ ॥

ಗಡ್ಡಿ ಬಡ್ಡಿಯಿಂದ ಗಾಲಿಯ ಜೋಡಿಸಿ
ಅಜ್ಞಾನವೆಂಬ ಅಚ್ಚನು ಹಾಕಿ
ಹರಹರ ಎನ್ನುತ ಹಗ್ಗವ ಹಿಡಿಯುತ
ಶಿವ ಶಿವ ಎನ್ನುತ ಎಳಿಯೋಣ ಬಾ
ಹೋಗಿ ಬರುವಂತಿ ಬಾ ತಂಗಿ ಊರಿಗೇ ॥

ವಶದೊಳಗೆ ನಮ್ಮ ಶಿಶುನಾಳಧೀಶನ
ಗುರುಗೋವಿಂದನ ಪಾದ ಹಿಡಿಯಾಣ ಬಾರ
ಗುರು ಗೋವಿಂದನ ಪಾದ ಹಿಡಿದು ಮುಕ್ತಿಯ
ಪಡೆದು ಹಸನಾದ ಪದಗಳ ಹಾಡೋಣ
ಬಾ ಬಾ ಬಾ ಬಾ
ಹೋಗಿ ಬರುವಂತಿ ತಂಗಿ ಊರಿಗೆ ॥

ಹರಲಾಪುರದಲ್ಲಿ ಆರೇಳು ಭಜನಾ ಮೇಳಗಳಿದ್ದವು. ಪ್ರತಿ ವರ್ಷ ಗ್ರಾಮದಲ್ಲಿ ಶ್ರಾವಣ ಮಾಸದ ಸಂದರ್ಭದಲ್ಲಿ ಪ್ರತಿದಿನ ಭಜನೆಮೇಳದ ಸವಾರಿ ಮಾಡುತ್ತಿದ್ದರು (ಗ್ರಾಮದ ಭಜನಾಮೇಳಗಳು ಈಗ ಅಸ್ತಿತ್ವದಲ್ಲಿಲ್ಲ). ಭಜನಾ ಮೇಳಗಳಲ್ಲಿ ಹಾಡುಗಳನ್ನು ಹೇಳುವುದರ ಜೊತೆಗೆ ಹಾಡಿನ ಅರ್ಥವನ್ನು ಸಹ ಅಲ್ಲಲ್ಲೇ ಹೇಳುವ ಸಂಪ್ರದಾಯವಿತ್ತು. ಆ ಸಂದರ್ಭದಲ್ಲಿ ಹೇಳಿದ ಈಗಲೂ ನನ್ನ ಸ್ಮರಣೆಯಲ್ಲಿರುವ ಒಂದು ಭಕ್ತಿಗೀತೆ ಇಂತಿದೆ.

ಕಷ್ಟ ಸುಖವೋ ದೇವರ ಲೀಲೆಯೋ
ಹುಟ್ಟಿದ ಮೇಲಕೆ ಮರಗುವುದೋ
ಹುಟ್ಟಿದ ಮೇಲಕೆ ಮರಗುವುದೋ

ಮಾತೆಯ ಗರ್ಭಕ್ಕೆ ಹೊರಬಂದ ಕಾಲಕೆ
ಪ್ರೀತಿಯ ಕವಚವ ತೊಡಿಸಿದವರಾರು
ದೇವರು ಇರಲು ಏತಕೆ ದುಃಖವು
ಸೋತು ಸ್ವರ್ಗದಿ ಸುಃಖ ಆಗಿರು
ನೀ ಸುಖ ಆಗಿರು॥
ತಂದೆ ತಾಯಿ ಬಂಧು ಬಳಗವು
ಹಿಂದಿಂದೇ ಯಾರೂ ಬರಲಾರರು
ಸಂಗಮ ದೇವನು ಮುಂದಕ್ಕೆ ಪಾಡುವನು

ಕಷ್ಟ ಕಳೆದು ಸುಖಿಯಾಗಿರು ನೀ ಸುಖಿಯಾಗಿರು॥*

ಹರಲಾಪುರ ಗ್ರಾಮದಲ್ಲಿ ಅನೇಕ ಜನಪದ ಗೀತ ಪ್ರಕಾರಗಳ ಹಾಡುಗಾರರಿದ್ದರು. ಅವರಲ್ಲಿ ಓರ್ವರಾದ ನೀಲಪ್ಪ ಗೀ ಗೀ ಪದಗಳನ್ನು ಹಾಡುತ್ತಿದ್ದರು. ಅವರು ಹಾಡುತ್ತಿದ್ದ ಗೀಗೀ ಪದದ ತುಣುಕು ಇಂತಿದೆ.

ಬುದ್ಧಿವಂತ ಬಹದ್ದೂರ ಬಡಗೇನ ಬೆಕ್ಕ
ಬಯಿಬ್ಯಾಡವೋ ಅಕ್ಕ
ಬುದ್ಧಿವಂತ ಬಹದ್ದೂರ ಬಡಗೇನ ಬೆಕ್ಕ

ಆರು ಬಾಗಿಲ ಮುಚ್ಚಿದ ಪಡಕ
ಬೆಳಕಂಡ್ಯಾಗ ಹಾದು ಬಂದು
ಹೋಡತೈತಿ ಬೆಕ್ಕ
ಬುದ್ದಿವಂತ ಬಹದ್ದೂರ ಬಡಗೇನ ಬೆಕ್ಕ

ನಾನು ನನ್ನದು ಎನ್ನುವ ಬೆಕ್ಕ
ಗುರುವಿನ ಸ್ಮರಣ ಮರೆತಂತ ಬೆಕ್ಕ
ದುರಂಹಕಾರದಿ ತಿರುಗುವ ಬೆಕ್ಕ
ಬುದ್ಧಿವಂತ ಬಹದ್ದೂರ ಬಡಗೇನ ಬೆಕ್ಕ

ಎಷ್ಟೇತಿ ಇವಳ ಮೈಯಾಗಿನ ಸೊಕ್ಕ
ನಾ ಶಿಶುನಾಳತನಕ್ಕ ಎಳಕೊಂತ ಹೋದೆ
ಬುದ್ಧಿವಂತ ಬಹದ್ದೂರ ಬಡಗೇನ ಬೆಕ್ಕ
ಎಷ್ಟೈತೆ ಮೈಯಾಗಿನ ಸೊಕ್ಕ
ನಾ ಶಿಶುನಾಳ ತನಕ ಎಳಕಂತ ಹೋದೆ.

ನಾನು ಐದು ವರ್ಷದವನಿದ್ದಾಗ ಪ್ರಥಮ ಬಾರಿಗೆ ಮೈಸೂರು ದಸರಾ ಸಂದರ್ಭದಲ್ಲಿ ಜಗ ಮೋಹನ ಅರಮನೆಯಲ್ಲಿ ಸಂಗೀತ ಹಾಡಿದ ಸುಯೋಗ ನನ್ನದಾಗಿತ್ತು. ಆ ಸಂದರ್ಭದಲ್ಲಿ ಚೆನ್ನವೀರ ಕಣವಿ ರಚಿಸಿದ ನಾನು ಹಾಡಿದ ಪದ್ಯ ಇದು;

‘ವಿಶ್ವವಿನೂತನ ವಿದ್ಯಾಚೇತನ
ಸರ್ವಹೃದಯ ಸಂಸ್ಕಾರಿ
ಜಯಭಾರತೀ ಕರುನಾಡ ಸರಸ್ವತೀ
ಗುಡಿ ಗೋಪುರ ಸುರಶಿಲ್ಪ ಕಲಾಕೃತಿ
ಕೃಷ್ಣೆ ತುಂಗೆ ಕಾವೇರಿ ಪವಿತ್ರಿತ
ಕ್ಷೇತ್ರ ಮನೋಹಾರೀ ॥

ಗಂಗ ಕದಂಬ ರಾಷ್ಟ್ರಕೂಟ ಬಲ
ಚಾಲುಕ್ಯ ಹೊಯ್ಸಳ ಬಲ್ಲಾಳ
ಹಕ್ಕ–ಬುಕ್ಕ ಪುಲಕೇಶಿ ವಿಕ್ರಮರ

ಚೆನ್ನಾಮ್ಮಾಜಿಯ ವೀರಶ್ರೀ

ತ್ಯಾಗ ಭೋಗ ಸಮಯೋಗದ ಸೃಷ್ಠಿ
ಬೆಳವೊಲ ಮತಿಕರ ಸುಂದರ ದೃಷ್ಠಿ
ಜ್ಞಾನದ ವಿಜ್ಞಾನದ ಕಲೆಗಳ ಐಸಿರಿ
ಸೂರ್ಯೋದಯದ ಧಾರನಗರಿ
ಅರಿವೆ ಗುರುನುಡಿ ಜ್ಯೋತಿರ್ಲಿಂಗ
ದಯವೇ ಧರ್ಮದ ಮೂಲತರಂಗ
ವಿಶ್ವಭಾರತಿಗೆ ಕನ್ನಡದಾರತಿ
ಮೊಳಗಲಿ ಮಂಗಲ ಜಯಭೇರಿ॥

೨. ಸಂಗೀತ ವಿದ್ಯಾಭ್ಯಾಸ

ಚಿಕ್ಕಂದಿನಲ್ಲಿ ಹುಮಾಯೂನರು ಗ್ರಾಮದ ಹತ್ತಿರವಿರುವ ಶ್ರೀ ಜಗದ್ಗುರು ರಂಭಾಪುರಿ ಗುರುಗಳ ಮುಕ್ತಿಮಂದಿರಕ್ಕೆ ಹೋಗುತ್ತಿದ್ದರು. ರಂಭಾಪುರಿ ಜಗದ್ಗುರಗಳ ಬಗೆಗೆ ಹುಮಾಯೂನ್‌ರ ತಂದೆಯವರಿಗೆ ವಿಶೇಷ ಭಕ್ತಿ ಮತ್ತು ಗೌರವವಿತ್ತು. ಪ್ರತಿ ವರ್ಷ ಮುಕ್ತಿಮಂದಿರದಲ್ಲಿ ರಂಭಾಪುರಿ ಜಗದ್ಗುರುಗಳ ದಸರಾ ದರ್ಬಾರ್ ನಡೆಯುತ್ತದೆ. ಆ ಸಂದರ್ಭದ ಕಾರ್ಯಕ್ರಮಗಳಲ್ಲಿ ಹುಮಾಯೂನ್ ಅವರು ಅನೇಕ ಹಾಡುಗಳನ್ನು ಹಾಡಿದ್ದಾರೆ. ರಂಭಾಪುರಿ ಜಗದ್ಗುರುಗಳು ಹುಮಾಯೂನ್‌ರು ಹಾಡುವುದನ್ನು ಗಮನಿಸುತ್ತಿದ್ದರು. ಎಸ್.ಎಸ್.ಎಲ್.ಸಿ. ಶಿಕ್ಷಣದ ನಂತರ ರಂಭಾಪುರಿ ಜಗದ್ಗುರುಗಳು ಹುಮಾಯೂನ್‌ರ ಸಂಗೀತದ ಆಸಕ್ತಿಯನ್ನು ಗಮನಿಸಿ, ಹುಮಾಯೂನ್‌ರು ಸಂಗೀತ ಕಲಿಯುವ ಸಲುವಾಗಿ ಗದುಗಿನ ಪಂಡಿತ ಪುಟ್ಟರಾಜ ಗವಾಯಿಗಳ ಬಳಿ ಸಂಗೀತ ಕಲಿಯಲು ಸೇರಿಸು ಎಂದು ತಂದೆಯವರಿಗೆ ತಿಳಿಸಿ, ಆ ಸಂಬಂಧ ಒಂದು ಶಿಫಾರಸ್ಸಿನ ಪತ್ರವನ್ನು ಕೊಟ್ಟರು.

ಪ್ರಥಮ ಬಾರಿಗೆ ಸಂಗೀತ ಗುರುವಿನ ದರ್ಶನ

ನಾನು ಪ್ರಥಮ ಬಾರಿಗೆ ಪಂಡಿತ ಪುಟ್ಟರಾಜ ಗವಾಯಿಗಳ ಮುಂದೆ ಹಾಜರಾದ ಸಂದರ್ಭ ಹೀಗಿದೆ. ಅವರ ಮಾತಿನಂತೆ ಗದುಗಿನ ಪಂಡಿತ ಪುಟ್ಟರಾಜ ಗವಾಯಿಗಳ ಬಳಿ ಸಂಗೀತ ಕಲಿಯುವ ಸಲುವಾಗಿ ಅವರ ಮುಂದೆ ಹಾಜರಾದೆ. ಅವರು ಪ್ರಥಮ ಬಾರಿಗೆ ನನ್ನ ಧ್ವನಿ ಪರೀಕ್ಷೆಯನ್ನು ಮಾಡಿದರು. ನಂತರ ಪುಟ್ಟರಾಜ ಗವಾಯಿ ಗುರುಗಳು ಒಂದು ಹಾಡನ್ನು ಹಾಡಲು ಹೇಳಿದರು. ಆಗ ನಾನು ಹಾಡಿದ ಹಾಡು ಇಂತಿದೆ.

ಕಂಡೇ ಕಂಡೇ ನಾ ಕಂಡೇ ದೇವರ ಕಂಡೇ
ದೇವರಿಗೆ ದೇವರ ಮಹಾದೇವರ
ಕಂಡೆ ನನ್ನ ಭಾಗದ ದೇವರು
ವೀರ ಗಂಗಾಧರ ಶಿವಯೋಗಿಯು
ಇವರೇ ನನ್ನ ಹೃದಯ ಗದ್ದುಗೆ ಏರಿ
ಪ್ರಜೇ ಗೋಂಡವರು ॥ ಕಂಡೇ॥

ಕಾಣದ ಕೈಲಾಸ ನಾನು ಕಂಡಿಲ್ಲಾ
ಕಾಣದ ದೇವರಿಗೆ ನಾನು ಕೈ ಮುಗಿದಿಲ್ಲಾ
ಕಣ್ಣ ಎದುರಿಗೆ ಕಾಣುವ ಕಾರುಣ್ಯ
ತುಂಬಿರುವ ನನ್ನ ಭಾಗದ ದೇವರು
ವೀರಗಂಗಾಧರ ಶಿವಯೋಗಿಯು॥ ಕಂಡೇ॥

ಆದೇವ ಈ ದೇವ ಮಹದೇವ
ಎನ್ನಬೇಡಾ ಎಲ್ಲಾ ದೇವರು ಅಡಗಿಕೊಂಡಿರುವ
ಈ ದೇವನಲ್ಲಿ ಕರುನಾಳು ಮಹಾ
ದೇವ ಇವನಲ್ಲವೇನು
ನನ್ನ ಭಾಗದ ದೇವರು
ವೀರ ಗಂಗಾಧರ ಶಿವಯೋಗಿಯು॥ ಕಂಡೇ॥

ಮಾನವ ಧರ್ಮಕ್ಕೆ ಜಯವಾಗಲಿ ಎನ್ನುತ
ಧರ್ಮದಿಂದ ವಿಶ್ವಕೆ, ಶಾಂತಿಯನ್ನು
ಕೋರಿದಾತ ಸರ್ವಧರ್ಮದ ಗುರುವು
ಇವನಲ್ಲವೇ ನನ್ನ ಭಾಗದ ದೇವರು

ವೀರಗಂಗಾಧರ ಶಿವಯೋಗಿಯು ॥ ಕಂಡೇ॥

ನಂತರ ಪುಟ್ಟರಾಜ ಗವಾಯಿಗಳು ನಿಮ್ಮ ಕಡೆಯ ಶಿಶುನಾಳ ಷರೀಫರ ಒಂದು ಪದ್ಯವನ್ನು ಹಾಡಿ ತೋರಿಸು ಎಂದು ಹೇಳಿದರು. ಆಗ ನಾನು ಶಿಶುನಾಳ ಷರೀಫರ ಈ ಹಾಡನ್ನು ಹಾಡಿದೆ.

ಎಡೆಯ ಒಯ್ಯನು ಬಾರೆ ॥
ಮಡಿಹುಡಿಯಿಂದಲಿ ಪೊಡವಿಅಧಿಕ ಎನ್ನ
ಅಲ್ಲಮನಿಗೆ, ಕರ್ಮದ
ಆದಿ ಅಲ್ಲಮ ಗುರು
ದೊಡ್ಡ ಪಾದಗಟ್ಟಿಯವರು
ಯೋಗಿ ಶಿಶುನಾಳಧೀಶನು ಇರುವಂಥ
ಸಾಧು ಸಜ್ಜನ ಇರುವಂತ ॥

ಗದುಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿ ಪ್ರಾರಂಭದಲ್ಲಿ ಸಂಗೀತ ಅಭ್ಯಾಸ ಮಾಡಲು ಬಂದವರಿಗೆ ಒಂದು ಖಾದಿ ಪಂಚೆ, ಜುಬ್ಬ ಕೊಡುತ್ತಿದ್ದರು. ತಲೆಯನ್ನು ಬೋಳಿಸುತ್ತಿದ್ದರು. ಆರಂಭದಲ್ಲಿ ನಮಗಿಂತ ಹಿರಿಯರ ಬಳಿ ಸಂಗೀತ ಅಭ್ಯಾಸ ಮಾಡಬೇಕಿತ್ತು. ಆ ಸಂದರ್ಭದಲ್ಲಿ ನನಗೆ ಸಂಗೀತ ಅಭ್ಯಾಸ ಮಾಡಿಸಿದ ಗುರುಗಳೆಂದರೆ ಪಂಡಿತ್ ಫಕೀರೇಶ್ ಕಣವಿ . ಇವರ ಬಳಿ ನಾನು ಐದು ವರ್ಷಗಳ ವರೆಗೆ ಸಂಗೀತ ಅಭ್ಯಾಸ ಮಾಡಿದೆ. ಆನಂತರ ಪಂಡಿತ್ ಶಿವರಾಜ ಗವಾಯಿಗಳ ಬಳಿ ಎಂಟು ವರ್ಷಗಳ ವರೆಗೆ ಸಂಗೀತ ಕಲಿತೆ.

ಏಳೆಂಟು ವರ್ಷಗಳಾದ ನಂತರ ಶ್ರೀ ಗಾನಯೋಗಿ ಪಂಡಿತ ಡಾ॥ ಪುಟ್ಟರಾಜ ಗವಾಯಿಗಳವರ ಬಳಿ ಹಿಂದೂಸ್ಥಾನಿ ಸಂಗೀತ ಕಲಿತೆ.

* * * * *

೩. ಸಂಗೀತದ ಬದುಕು

ಹಿಂದೂಸ್ಥಾನಿ ಸಂಗೀತ ಕಲಿಕೆಯ ನಂತರ ೧೯೮೮ರಲ್ಲಿ ಶಿವಮೊಗ್ಗದ ಶ್ರೀ ಪಂಚಾಕ್ಷರಿ ಸಂಗೀತ ವಿದ್ಯಾಲಯದಲ್ಲಿ ಸಂಗೀತ ಶಿಕ್ಷಕನಾಗಿ ನಿರಂತರ ಸೇವೆ ಸಲ್ಲಿಸಿದೆ. ಪ್ರಸ್ತುತ ಶಿವಮೊಗ್ಗ ಜಿಲ್ಲೆಯ ಆಯನೂರಿನ ಪದವಿ ಕಾಲೇಜಿನಲ್ಲಿ ಸಂಗೀತ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನೆ.

ನಾನು ಸರ್ಕಾರಿ ನೌಕರಿ ದೊರೆಯುವ ಮೊದಲು ಶಿವಮೊಗ್ಗದ ಪಂಡಿತ ಪುಟ್ಟರಾಜ ಗವಾಯಿಗಳ ಸಂಗೀತ ಶಾಲೆಯಲ್ಲಿ ತಾತ್ಕಾಲಿಕ ಸಂಗೀತ ಶಿಕ್ಷಕನಾಗಿ ಕಾರ್ಯನಿರ್ವಹಿಸುತ್ತಿದ್ದೆ. ಇದರಿಂದ ಜೀವನ ನಿರ್ವಹಣೆ ಕಷ್ಟ ಎಂದು ಸ್ವತಃ ಸಂಗೀತ ಶಾಲೆಯನ್ನು ತೆರೆದು, ಸ್ಥಳೀಯ ಪ್ರೌಢಶಾಲಾ ಮಟ್ಟದ ಮತ್ತು ಸಂಗೀತಾಭ್ಯಾಸಿಗಳಿಗೆ ಸಂಗೀತಾಭ್ಯಾಸವನ್ನು ಕಲಿಸತೊಡಗಿದೆ. ಪ್ರಾರಂಭದಲ್ಲಿ ನನ್ನ ಬಳಿ ೧೮ ವಿದ್ಯಾರ್ಥಿಗಳಿಂದ ಆರಂಭವಾದ ಸಂಗೀತ ಶಾಲೆ ಈಗ ಸುಮಾರು ೫೦ ವಿದ್ಯಾರ್ಥಿಗಳು ಸಂಗೀತಾಭ್ಯಾಸದಲ್ಲಿ ತೊಡಗಿದ್ದಾರೆ. ನನ್ನ ಬಳಿ ಇದುವರೆವಿಗೂ ಸುಮಾರು ೪೦೦೦ ಸಾವಿರ ವಿದ್ಯಾರ್ಥಿಗಳಿಗೆ ಸಂಗೀತಾಭ್ಯಾಸ ಮಾಡಿಸಿದ್ದಾರೆ.

ನನಗೆ ನನ್ನ ಗ್ರಾಮದಲ್ಲಾಗಲೀ, ಕಲಿಯುವ ಸಂದರ್ಭದಲ್ಲಾಗಲೀ ಯಾವುದೇ ರೀತಿಯ ಜಾತಿಯ ಸೋಂಕು ಇರಲಿಲ್ಲ. ಪಂಡಿತ ಪುಟ್ಟರಾಜ ಗವಾಯಿಗಳು ಮಠದ ಮ್ಯಾನೇಜರ್‌ಗೆ ತಿಳಿಸಿ ನನಗೆ ಶುಕ್ರವಾರ ದಿವಸ ನಮಾಜ್ ಮಾಡಲು ಅವಕಾಶ ಕಲ್ಪಿಸಿದ್ದರು.

ಪುರಾಣದಾಗೆ ಹಾಡಿಕೊಂಡು ಚೆನ್ನಾಗಿ ಇರುತ್ತಿದ್ದೆ. ಪ್ರತಿ ದಿನ ಬೆಳಿಗ್ಗೆ ನಾಲ್ಕು ಗಂಟೆಯಿಂದ ಎಂಟು ಗಂಟೆಯವರೆಗೆ ಸತತ ಆರು ವರ್ಷಗಳಕಾಲ ಸಂಗೀತಾಭ್ಯಾಸ ಮಾಡಿದ್ದೇನೆ. ಯಾವುದೇ ರಾಗವಾದರೂ ಒಂದೂವರೆ ಗಂಟೆಯಿಂದ ಎರಡು ಗಂಟೆಯವರೆಗೆ ಸತತವಾಗಿ ಹಾಡುತ್ತೇನೆ. ಈ ಅಭ್ಯಾಸವೇ ನನಗೆ ಮುಂದಿನ ಬೆಳವಣಿಗೆಗೆ ಸಹಕಾರಿಯಾಯಿತು.

ಮುಸ್ಲಿಂಮರಲ್ಲಿ ನದಾಫ ಮುಸ್ಲಿಂರಿಗೆ ಅಷ್ಟೊಂದು ಪ್ರಾಶಸ್ತ್ಯವಿಲ್ಲ. ನಾನು ಕೈಯಲ್ಲಿ ರುದ್ರಾಕ್ಷಿ, ಕೊರಳಿಗೆ ಗುರುಗಳ ಸಂಕೇತದ ಮಣಿ ಸರ ಧರಿಸುತ್ತೇನೆ. ಶಿವಮೊಗ್ಗ ಭಾಗದಲ್ಲಿ ನೀವು ವಚನ ಹಾಡಬೇಡಿರಿ, ಕವ್ವಾಲಿ ಹಾಡಿರಿ ಎಂಬ ಒತ್ತಡಗಳು ಬಂದವು. ಆದರೆ ನಾನು ಇವಾವುದರ ಬಗೆಗೂ ಹೆಚ್ಚಿಗೆ ತಲೆಕೆಡಿಸಿಕೊಳ್ಳಲಿಲ್ಲ. ಗೊ.ರು.ಚೆನ್ನಬಸಪ್ಪ ಅವರು ನನಗೆ ಅನೇಕ ಸಂದರ್ಭಗಳಲ್ಲಿ ಮಾರ್ಗದರ್ಶನ ನೀಡಿದ್ದಾರೆ.

ನಾನು ಮರಾಠಿ ಅಭಂಗ, ದಾಸ ಸಾಹಿತ್ಯ, ಶರಣ ಸಾಹಿತ್ಯ, ಭಾವಗೀತೆ ಹಿಂದೀ ಭಜನ್, ಹಿಂದೂಸ್ಥಾನಿಯಲ್ಲಿ ಗಾಯಕಿ, ನಾಯಕಿ ಈ ಎರಡು ಪದ್ಧತಿಗಳನ್ನು ಹಾಡುತ್ತೇನೆ. ನನಗೆ ಹಿಂದೂಸ್ಥಾನಿ ಸಂಗೀತ ಪ್ರಕಾರದಲ್ಲಿ ಠುಮರಿ, ಟಿಪ್ಪ, ಹೋರಿ, ಕಜರಿ ಕಲೀಬೇಕು ಎಂಬ ಮಹದಾಸೆ ಇದೆ.

ಶಾಸ್ತ್ರೀಯ ಸಂಗೀತದಲ್ಲಿ ವಾದಿ, ಸಂವಾದಿ, ಸ್ಥಾಯಿ ರಾಗಗಳ ಕಟ್ಟುಪಾಡುಗಳು ಇರುತ್ತಿದ್ದವು. ಜನಪದ ಗೀತೆ ಹಾಡಲು ತಂಬೂರಿ, ಶ್ರುತಿ, ಲಯ, ಪರಿಕಲ್ಪನೆ ಇರಲಿಲ್ಲ. ಯಾವುದೇ ಕಟ್ಟುಪಾಡು ಇರಲಿಲ್ಲ. ಜನಪದ ಸಂಗೀತ ಮುಕ್ತವಾದುದು. ನಾನು ಇಷ್ಟಪಡುವ ಒಂದು ಜನಪದ ಗೀತೆ ಹೀಗಿದೆ.

ಮುಟ್ಟು ಚೆಟ್ಟಿನೋಳು ಮುಟಬ್ಯಾಡ ಎನುತೀರಿ
ಮುಟಚಟ್ಟಿ ಎಲ್ಲಾದ್ಹೇಳಣ್ಣಾ
ಮುಟ್ಟಾದ ಮೂರುದಿನಕೆ
ಹುಟ್ಟಿ ಬಂದೀದಿ ನೀನು॥ ಮುಟ್ಟು ಚೆಟ್ಟಿ॥

ತೊಗಲೋಳು ತೊಗಲೊಕ್ಕ, ತಗಲಿ ಬಂದವ ನೀನು
ತಗಲ ಮಾತಾಡುವುದೇನಣ್ಣ
ಇದರ ಬಗಿಯ ತಿಳಿಯದೇ॥ ಒಗಟು ಮಾತಾಡಿದರೆ
ನಗೀಬೇಡ ಆಗತಿದಿ ನೋಡಣ್ಣಾ॥ ಮುಟ್ಟು ಚೆಟ್ಟಿ॥

ಎಲುವಿನಾಲಯದೊಳು ಒಳಗ್ಹೊಕ್ಕು ನೀ ಕುಂತು
ಓಡಾಡಬ್ಯಾಡ ನೀ ಕೇಳಣ್ಣಾ
ಎಲವು ತೊಗಲ ಮಲಮೂತ್ರ ಮಾಂಸವು

ನಿನ್ನಲ್ಲಿ ಕಾಣುತಾದಣ್ಣಾ ॥ ಮುಟ್ಟು ಚೆಟ್ಟಿ॥

ಊರ ನರಕವ ತಿಂದು ಬೋರ್ಯಾಡ್ಡಿಂಡುವ ಎಮ್ಮಿ
ಹಾಲಿನ ಸವಿ ನೋಡಣ್ಣಾ
ಅದರ ಸ್ವಾದ್ಧತ್ತಿ ನೀಉಂಡು
ದುಂಡಾಗಿ ಕುಂತೀದಿ ಶೀಲ ಎಲ್ಲಿ ಉಳತ್ತೇಳಣ್ಣಾ॥ ಮುಟ್ಟು ಚೆಟ್ಟಿ॥

ಊರ ಬಾವಿಯ ನೀರ ಯಾರಾದರೂ ತರುವರು
ನಿನ್ನ ನೀರ ಬ್ಯಾರ್ಯಾವೇನಣ್ಣಾ
ಲಂಡೇನ್ತೇಳ ಬಂದು ನದಿಯ ಕೂಡಿದ ಮೇಲೆ
ನೈವೇದ್ಯ ಹೇಗಾದವು ಹೇಳಣ್ಣಾ॥ ಮುಟ್ಟು ಚೆಟ್ಟಿ॥

ಸೋಸಲಾಡುವ ದೇಹ ಸೋಸಿ ನೀರ ಮಡಿಮಾಡಿ
ಮಡಿಮಾಡಿ ಕೊಳಬೇಕ ಈ ದೇಹ
ನಮ್ಮ ಧೀರ ಮಹಾಂತೇಶನ ಬಿಡದೆ
ಕೊಂಡಾಡಿದರೆ ಕಡಿತನಕ ಮಡಿಯಾಗುವುದಣ್ಣಾ॥ ಮುಟ್ಟು ಚೆಟ್ಟಿ॥

ನಾನು ಪಂಡಿತ ಪುಟ್ಟರಾಜಗವಾಯಿಗಳ ಆಶ್ರಮದಲ್ಲಿ ಸಂಗೀತಾಭ್ಯಾಸ ಮಾಡುವ ಸಂದರ್ಭದಲ್ಲಿ ಎಲ್ಲರೂ ಒಂದೇ ಎಂಬ ಭಾವನೆ ಇತ್ತು. ಯಾವುದೇ ಜಾತಿ ಮತ ಭೇದಗಳು ಇರಲಿಲ್ಲ. ಆಶ್ರಮದಲ್ಲಿ ಖಾದಿ ಪಂಚೆ ಮತ್ತು ಜುಬ್ಬಾ ಕೊಡುತ್ತಿದ್ದರು. ಪ್ರತಿ ತಿಂಗಳು ತಲೆ ಬೋಳಿಸುವ ಸಂಪ್ರದಾಯವಿತ್ತು. ಎಲ್ಲರೂ ಪರಸ್ಪರ ಗೌರವದಿಂದ ಸತತ ಹತ್ತರಿಂದ ಹನ್ನೆರಡು ಗಂಟೆಗಳ ಕಾಲ ಸಂಗೀತಾಭ್ಯಾಸ, ಪೂಜೆ ಮಾಡುವ ಪರಿಪಾಠವಿತ್ತು. ಆಶ್ರಮದಲ್ಲಿ ಸಂಗೀತಾಭ್ಯಾಸ ಆದ ಎಂಟ್ಹತ್ತು ವರ್ಷದ ನಂತರ ಕಲಿಕೆಯ ಮತ್ಸರ ಕಂಡುಬಂದಿತು.

ಜನಪದ ಹಾಡು ಒಬ್ಬರ ಬಾಯಿಂದ ಇನ್ನೊಬ್ಬರ ಬಾಯಿಗೆ ಬಂದಿರುವಂಥದು. ಶಾಸ್ತ್ರೀಯ ಸಂಗೀತಕ್ಕೆ ಗುರು ಬೇಕು. ಸಂಗೀತದಲ್ಲಿ ಇತಿಮಿತಿ ಆಹಾರ ಅಭ್ಯಾಸದ ಅಗತ್ಯವಿದೆ. ಎಣ್ಣೆಯ ಪದಾರ್ಥ ಕಮ್ಮಿ ಇರಬೇಕು. ಅನೇಕರು ಹರಲಾಪುರ ಅವರು ಇಪ್ಪತ್ತೈದು ವರ್ಷದ ಹಿಂದೆ ಹೇಗೆ ಹಾಡುತ್ತಿದ್ದರೋ ಹಾಗೆ ಈಗಲೂ ಹಾಡುತ್ತಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಉಡುಪಿಯಲ್ಲಿ ನಡೆದ ಮಠದ ಕಾರ್ಯಕ್ರಮದಲ್ಲಿ ಪೇಜಾವರ ಶ್ರೀಗಳು ನಾನು ಹಾಡಿದ ವಿವಿಧ ದಾಸರ ಕೀರ್ತನೆಗಳನ್ನು ನಲವತ್ತೈದು ನಿಮಿಷಗಳವರೆಗೆ ಸಾವಧಾನದಿಂದ ಕೇಳಿರುವುದು ನನ್ನ ಹಾಡುಗಾರಿಕೆಗೆ ಶ್ರೀಗಳು ಮಹತ್ವ ನೀಡಿದ್ದಕ್ಕೆ ತುಂಬಾ ಹೆಮ್ಮೆ ಎನಿಸುತ್ತದೆ. ನಾನು ಯಾವಾಗಲೂ ಸ್ವಯಂ ಇಚ್ಛೆಯಿಂದ ಮತ್ತು ಮೆಚ್ಚಿ ಹಾಡುವ ದಾಸರ ಒಂದು ಕೀರ್ತನೆ ಇಂತಿದೆ.

ಹರಿಕುಣಿದಾ ನಮ್ಮ ಹರಿಕುಣಿದಾನೋ
ಅಕಳಂಕ ಚರಿತಾ ಮಕರ ಕುಂಡಲಧರ
ಸಕಲರ ಪಾಲಿಪ ಹರಿಕುಣಿದಾನೋ

ಅಂದುಗೆ ಅರಳಲೆ ಬಿಂದುಲಿ ಬಾಪುಲಿ
ಚಂದದಿ ನಲಿಯೂತ ಹರಿಕುಣಿದಾನೋ

ಉಟ್ಟ ಪಟ್ಟೆಯ ದಟ್ಟಿ
ಇಟ್ಟ ಕಂಬೀಯ ದಾಮ ದಿಟ್ಟ
ಮಲರಗಂಡಾ ಹರಿಕುಣಿದಾನೋ

ಪರಮ ಭಾಗವತರ ಕೇರಿಯೊಳಾಡುವ

ಪುರಂದರ ವಿಠ್ಠಲ ಹರಿಕುಣಿದಾನೋ
ಹರಿಕುಣಿದಾ ನಮ್ಮ ಹರಿಕುಣಿದಾ
ಪರಮ ಭಾಗವತರ ಕೇರಿಯೊಳಾಡುವ
ಪುರಂದರ ವಿಠಲ ಹರಿಕುಣಿದಾನೋ

ಕನ್ನಡದ 'ಈ'ಟಿವಿ ದೂರವಾಹಿನಿಯಲ್ಲಿ ಎಸ್.ಪಿ. ಬಾಲಸುಬ್ರಮಣ್ಯಂ ಅವರ ನೇತೃತ್ವದಲ್ಲಿ ಪ್ರಸಾರವಾಗುವ 'ಎದೆ ತುಂಬಿ ಹಾಡಿದೆನು' ಕಾರ್ಯಕ್ರಮದಲ್ಲಿ ನಿರ್ಣಾಯಕನಾಗಿ ಭಾಗವಹಿಸಿರುವುದು ನನಗೆ ಗೌರವದ ಸಂಗತಿ ಆಗಿದೆ.

ನನ್ನ ಕುಟುಂಬ ಸಂಗೀತ ಕುಟುಂಬ. ನನ್ನ ಹೆಂಡತಿ ನನ್ನ ಶಿಷ್ಯೆಯೂ ಹೌದು. ನನ್ನ ನನ್ನ ಹೆಂಡತಿ ನನಗೆ ತಂಬೂರಿ ಸಹಕಾರ ನೀಡುತ್ತಾಳೆ. ನನಗೆ ಎರಡು ಗಂಡುಮಕ್ಕಳು. ಮೊದಲ ಮಗ ನಿಷಾದ್ ಎಂ.ಎ. ಸಂಗೀತ ಅಭ್ಯಾಸ ಮಾಡುತ್ತಿದ್ದಾನೆ. ಇವರಿಗೆ ಕಲ್ಕತ್ತಾದ ಉಸ್ತಾಫಖಾನ್ ಪೌಂಡೇಶನ್ ವಿದ್ಯಾರ್ಥಿವೇತನ ದೊರೆತಿದೆ. ಈಗಲೂ ವಾರದಾಗೆ ಎರಡು ದಿವಸ ಅಭ್ಯಾಸ ಮಾಡುತ್ತೇನೆ. ಒಂದು ಮಾತಿದೆ– ಓರ್ವ ಶಿಷ್ಯ ಗುರು ಮೀರಿಸಬೇಕು. ಮಗ ತಂದೆಯನ್ನು ಮೀರಿಸಬೇಕು. ಒಂದು ಸಂಗೀತ ಕಾರ್ಯಕ್ರಮದಲ್ಲಿ ನನ್ನ ಮಗ ಮಾರ್‍ವಾ ರಾಗ ಅರತ್ತೈದು ನಿಮಿಷ ಹಾಡಿದ್ದು ನನ್ನ ಜೀವನದ ವಿಸ್ಮಯದ ದಿನ.

ನಾನು ನನ್ನ ತಂದೆ ಮೌಲಾಸಾಬ್ ಅವರ ಪುಣ್ಯಸ್ಮರಣೆಯಂದು ಅವರ ನೆನಪಿಗಾಗಿ ಸ್ವಗ್ರಾಮವಾದ ಹರಲಾಪುರದಲ್ಲಿ ಅಹೋರಾತ್ರಿ ಒಂದು ದಿನ ಸಂಗೀತ ಕಾರ್ಯಕ್ರಮಗಳನ್ನು ಪ್ರತಿವರ್ಷ ಜನವರಿ ತಿಂಗಳಿನಲ್ಲಿ ನಡೆಸುತ್ತೇನೆ. ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿವಿಧ ಸಾಧಕರಿಗೆ ಸನ್ಮಾನದ ಕಾರ್ಯಕ್ರಮಗಳು ನಡೆಯುತ್ತವೆ. ಈ ಸಂಗೀತ ಕಾರ್ಯಕ್ರಮಕ್ಕೆ ಅಕಾಶವಾಣಿ, ದೂರದರ್ಶನ ಕಲಾವಿದರು, ವಾದ್ಯಗಾರರು, ಶಿವಮೊಗ್ಗ ಕಲಾ ಬಳಗದವರು ಬಂದು ಸಂಗೀತದ ಸೇವೆ ಸಲ್ಲಿಸುತ್ತಾರೆ. ಈ ಸ್ವರ ಶ್ರದ್ಧಾಂಜಲಿ ಕಾರ್ಯಕ್ರಮವು ಹದಿಮೂರು ವರ್ಷಗಳಿಂದ ಶ್ರೀ ಗುರುಕೃಪ ಗಾನಮಂದಿರದ ವಿದ್ಯಾರ್ಥಿಗಳು, ಗ್ರಾಮಸ್ಥರ ಮತ್ತು ಸಂಗೀತ ಪ್ರೇಮಿಗಳ ಸಹಕಾರದಿಂದ ನಡೆಯುತ್ತಲೇ ಇದೆ.

ಹುಮಾಯೂನ್ ಹರಲಾಪುರ ಅವರಿಗೆ ಅನೇಕ ಬಿರುದಾವಳಿಗಳು ಬಂದಿವೆ. ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿದ್ದರು. ಪ್ರಸ್ತುತ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿದ್ದಾರೆ. ಹುಮಾಯೂನ್ ಅವರು, ಆಕಾಶವಾಣಿ ಬಿ ಹೈಗ್ರೇಡ್ ಕಲಾವಿದರು. ಪಂಡಿತ ಪುಟ್ಟರಾಜಗವಾಯಿಯವರ ಸಂಗೀತ ಕಾರ್ಯಕ್ರಮಗಳಲ್ಲಿ ಸಂಗೀತಕ್ಕೆ ತಂಬೂರಿ ಸಾಥ್ ನೀಡಿರುವುದು ಜೀವನದ ಸ್ಮರಣೀಯ ಅನುಭವ ಎನ್ನುತ್ತಾರೆ.

ಉಸ್ತಾದ್ ಎಂದರೆ ತನ್ನಂತೆ ಶಿಷ್ಯರನ್ನು ತಯಾರು ಮಾಡುವವನು. ಹುಮಾಯೂನ್ ಹರಲಾಪುರ ಅವರ ಬಳಿ ಸಂಗೀತ ಶಿಕ್ಷಣ ಪಡೆದ ಹದಿನಾಲ್ಕು ವಿದ್ಯಾರ್ಥಿಗಳಿಗೆ ಸರ್ಕಾರ ಸಂಗೀತ ಶಿಕ್ಷಕರಾಗಿ ನೌಕರಿ ದೊರೆತಿದೆ. ಇವರಲ್ಲಿ ನಾಲ್ವರು ಅಂಧ ವಿದ್ಯಾರ್ಥಿಗಳು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಶಾಂತಾ ಆನಂದ್ ಮತ್ತು ಮಾಳೇನಹಳ್ಳಿ ವೀರಣ್ಣ ಇವರುಗಳು ಹುಮಾಯೂನ್ ಹರಲಾಪುರ ಅವರ ಶಿಷ್ಯಂದಿರು.

ಶ್ರೀ ಹುಮಾಯೂನ ಹರಲಾಪುರ ಅವರು ಕಾರ್ಯಕ್ರಮ ನೀಡಿರುವ ಪ್ರಮುಖ ಸ್ಥಳ ಸಂದರ್ಭಗಳು ಇಂತಿವೆ.

- ಪುರಾಣ ಪ್ರವಚನ
- ದೇವಸ್ಥಾನದ ಜೀರ್ಣೋದ್ಧಾರ
- ವೀರಭದ್ರಸ್ವಾಮಿ ರಥೋತ್ಸವ
- ಮಾರುತಿ ದೇವರ ರಥೋತ್ಸವ
- ಪುರಂದರದಾಸರ ಆರಾಧನೆ
- ಭಾವೈಕ್ಯ ಸಮಾವೇಶ
- ತರಳಬಾಳು ಹುಣ್ಣಿಮೆ ಮಹೋತ್ಸವ
- ಕೃಷಿ ಸಮ್ಮೇಳನ

- ಸಹ್ಯಾದ್ರಿ ಸಾಹಿತ್ಯೋತ್ಸವ
- ವ್ಯಕ್ತಿತ್ವ ವಿಕಸನ ಶಿಬಿರ
- ರಾಮನವಮಿ
- ಗಣಪತಿ ಉತ್ಸವ
- ಶ್ರಾವಣ ಮಾಸ
- ವಿವಾಹ ಮಹೋತ್ಸವ
- ಕೆಳದಿ ಚೆನ್ನಮ್ಮ ಉತ್ಸವ
- ಸಹ್ಯಾದ್ರಿ ಉತ್ಸವ
- ತುಂಗೋತ್ಸವ
- ಸಾಹಿತ್ಯೋತ್ಸವ
- ಯುವಜನೋತ್ಸವ
- ಜಾನಪದ ಕಲೋತ್ಸವ
- ಸಂಗೀತ ಸ್ಪರ್ಧೆ
- ಪುರಂದರೋತ್ಸವ
- ಬೆಳಗಾವಿ ವಿಶ್ವಕನ್ನಡ ಸಮ್ಮೇಳನ
- ಕುಂದಗೋಳ ಸವಾಯಿ ಗಂಧರ್ವ ಪಂಚಾಕ್ಷರಿ ಗವಾಯಿಗಳ ಸ್ಮರಣೋತ್ಸವ
- ಪಣಜಿ, ಬೇಕಲ್, ಮಂತ್ರಾಲಯ, ಕಲ್ಕತ್ತ

ಹುಮಾಯೂನ್ ಹರಲಾಪುರ ಅವರು ನಿರಂತರವಾಗಿ ಸಂಗೀತ ಕಾರ್ಯಕ್ರಮ ನೀಡುವ ಪ್ರತಿಷ್ಠಿತ ಸಂಘ–ಸಂಸ್ಥೆಗಳು

- ಕರ್ನಾಟಕ ಸಂಘ, ಶಿವಮೊಗ್ಗ
- ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ
- ಆಕಾಶವಾಣಿ, ಭದ್ರಾವತಿ
- ಆಕಾಶವಾಣಿ, ಮಂಗಳೂರು
- ರಾಷ್ಟ್ರೀಯ ಬಸವದಳ
- ರೋಟರಿ ಈಸ್ಟ್, ಶಿವಮೊಗ್ಗ
- ಕನ್ನಡ ಸಂಸ್ಕೃತಿ ಇಲಾಖೆ
- ಅಖಿಲಭಾರತ ಶರಣ ಸಾಹಿತ್ಯ ಪರಿಷತ್
- ಗೆಳೆಯರ ಬಳಗ, ಶಿವಮೊಗ್ಗ
- ನಿನಾದ ಪ್ರತಿಷ್ಠಾನ, ಶಿವಮೊಗ್ಗ
- ಕಲಾಸಂಗಮ, ಶಿವಮೊಗ್ಗ
- ಅನುಸಂಧಾನ ಪ್ರತಿಷ್ಠಾನ, ಶಿವಮೊಗ್ಗ
- ಕರ್ನಾಟಕ ಪ್ರೌಢಶಾಲಾ ಶಿಕ್ಷಕರ ಸಂಘ

* * * * *

೪. ಉಸ್ತಾದ್ ಹುಮಾಯೂನ್ ಹರಲಾಪುರ ಸಂದರ್ಶನ

೧. ಮಠದಲ್ಲಿ ನಿಮ್ಮ ಪ್ರಾರಂಭದ ಸಂಗೀತ ಕಲಿಕೆಯ ದಿನಗಳು ಹೇಗಿದ್ದವು?

ಉತ್ತರ: ವೀರೇಶ್ವರ ಪುಣ್ಯಾಶ್ರಮದಲ್ಲಿ ಪ್ರಾರಂಭದಲ್ಲಿ ಎಲ್ಲಾ ವಿದ್ಯಾರ್ಥಿಗಳು ಬೆಳ್ಳಿಗೆ ಪ್ರತಿದಿನ ನಾಲ್ಕು ಘಂಟೆಗೆ ಏಳುವುದು ಅರ್ಧ ಘಂಟೆ ಪ್ರಾರ್ಥನೆ ಮುಗಿದನಂತರ ೮ ಘಂಟೆವರಿಗೆ ಸಂಗೀತ ಅಭ್ಯಾಸ ಮಾಡುವುದು ಯಾವುದೇ ಧರ್ಮದ ವರಾಗಲ್ಲಿ ಒಂದೇ ರೀತಿಯಲ್ಲಿ ಅಭ್ಯಾಸಮಾಡುವುದು ನಂತರ ನಮ್ಮ ಆಶ್ರಮದ ಕಸಗುಡಿಸುವುದು. ಕಣ್ಣು ಇಲ್ಲದವರ ಒಬ್ಬ ಇಬ್ಬರ ಸೇವೆ ಜೊತೆ ಆಶ್ರಮದ ಧನಗಳನ್ನು ಕಾಯುವುದು ಹೀಗೆ ಸರ್ವ ಜನಾಂಗದ ಶಾಂತಿಯ ತೋಟ ಎಂಬಂತೆ ಕಲಿಕೆಯ ದಿನಗಳು ಇದ್ದವು.

೨. ಮೊದ ಮೊದಲು ಸಂಗೀತ ಕಲಿಯುತ್ತಿದ್ದ ದಿನಗಳಲ್ಲಿ ಆನಂತರ (ಅಂದರೆ ೨-೩ ವರ್ಷಗಳ ನಂತರ) ನಿಮ್ಮ ಜೀವನ ಕಠಿಣ ಅನಿಸಲಿಲ್ಲವೇ?

ಉತ್ತರ: ನಾನು ಮೊದಮೊದಲು ಸಂಗೀತ ಕಲಿಯುತ್ತಿದ್ದ ಸಮಯದಲ್ಲಿ ಬೆಳಗ್ಗೆ ಏಳುವುದು ಒಂದು ವಾರ ಕಷ್ಟವಾಯಿತು ನನ್ನಲ್ಲಿ ಸಂಗೀತ ಕಲಿಯುವ ತವಕ ಇದ್ದರಿಂದ ಮುಂದೆ ಆಶ್ರಮದ ನೇಮ ನೀತಿಗಳಿಗೆ ಹೊಂದಿಕೊಂಡೆ. ನಂತರ ನನ್ನ ಸಂಗೀತದ ಜೀವನ ಕಠಿಣ ಎನಿಸಲಿಲ್ಲ.

೩. ಪಂ॥ ಡಾ॥ ಪುಟ್ಟರಾಜ ಗವಾಯಿಗಳ ಬಳಿ ಕಲಿತ ದಿನಗಳ ವಿವರಗಳಿದ್ದರೆ ತಿಳಿಸಿ.

ಉತ್ತರ: ಪಂ॥ ಡಾ॥ ಪುಟ್ಟರಾಜ ಗುರುಗಳ ಬಳಿಯಲ್ಲಿ ಮೂರು ವರ್ಷ ಪೂಜ್ಯರ ಹತ್ತಿರ ಅಭ್ಯಾಸ. ಪೂಜ್ಯರ ಹತ್ತಿರ ವಾರದಲ್ಲಿ ೨-೩ ದಿನ ಪೂಜ್ಯ ಹೊಸ ಹೊಸರಾಗಗಳನ್ನು ತುಂಬಾ ಪ್ರೀತಿಯಿಂದ ಹಾಡಿ ತೋರಿಸುತ್ತಿದ್ದರು. ಗುರುಗಳ ಜೊತೆ ಬೇರೆ ಬೇರೆ ಊರುಗಳಲ್ಲಿ ಪುರಾಣ, ಕೀರ್ತನಗಳ ಜೊತೆಯಲ್ಲಿ ಅವರಿಗೆ ತಂಬೂರಿ ಸಾಥ್ ನೀಡುವುದರ ಜೊತೆ ಜೊತೆಗೆ ಹಾಡುತ್ತಿದ್ದೆವು. ಸಭೆಗಳಲ್ಲಿ ಹೊಸ ಹೊಸ ತಾಳ, ಪಂಚಮ ಸಾವರಿ ತಿಲವಾಡ ತಾಳದಲ್ಲಿ ಹಾಡಲು ಕಲಿಸುತ್ತಿದ್ದರು. ಪೂಜ್ಯರ ಜೊತೆ ಪಾಠ ಅಂದರೆ ಅದು ನಮ್ಮ ಹಬ್ಬವಿದ್ದಂತೆ.

೪. ಸಂಗೀತ ಕಲಿಯುತ್ತಿದ್ದ ದಿನಗಳಲ್ಲಿ ಹೊರಗಡೆ ಪ್ರವಾಸ ಹೋಗಿದ್ದ ಅನುಭವ ಇದ್ದರೆ ತಿಳಿಸಿ.

ಉತ್ತರ: ನಾನು ಸಂಗೀತ ಕಲಿಯುತ್ತಿದ್ದ ದಿನಗಳಲ್ಲಿ ತಿಂಗಳದಲ್ಲಿ ಗುರುಗಳ ಜೊತೆ ಸಂಚಾರವೇ ಹೆಚ್ಚು. ಒಂದು ಊರಲ್ಲಿ ಗುರುಗಳು ವಾರಗಟ್ಟಲೇ ಇರಬೇಕಾಗಿತ್ತು. ಆ ಸಮಯದಲ್ಲಿ ಗುರುಗಳ ಬಟ್ಟೆ ತೊಳೆಯುವ ಕಾಯಕ ನನ್ನದು. ಆ ಸಂಚಾರದಲ್ಲಿ ಪಾಠ ನಡೀತ್ತಿತ್ತು. ನಂತರ ಗುರುಗಳ ಅಪ್ಪಣೆಯಂತೆ ನಮ್ಮ ಆಶ್ರಮದ ನಾಟಕ ಕಂಪನಿಯಾದ ಶ್ರೀ ಗುರು ಕುಮಾರ ಕೃಪಾ ಪೋಷಿತ ಗಾನಯೋಗಿ ಪಂ॥ ಪಂಚಾಕ್ಷರ ಗವಾಯಿಗಳ ನಾಟಕ ಕಂಪನಿಯಲ್ಲಿ ಎರಡು ವರ್ಷ ಹಿನ್ನೆಲೆ ಸಂಗೀತಗಾರನಾಗಿ ಕೆಲವು ನಾಟಕದಲ್ಲಿ ಹಾಡುತ್ತಿದ್ದೆ. ಸಣ್ಣಪುಟ್ಟ ಪಾತ್ರಗಳನ್ನು ಮಾಡಿದ್ದೇನೆ. ಹಿರಿಯ ಕಲಾವಿದರಾದ ಎಲ್ಲಿವಾಳ ಸಿದ್ದಯ್ಯಾ ಸ್ವಾಮಿ, ಚಿತ್ರನಟ ಧೀರೇಂದ್ರ ಗೋಪಾಲ ಹಾಗೂ ಇತರೆ ಹಿರಿಕಿರಿಯ ನಟರ ಜೊತೆ ಸಣ್ಣ ಪಟ್ಟ ಪಾತ್ರಗಳನ್ನು ಮಾಡಿದ್ದೆ.

೫. ಸಂಗೀತ ಕಲಿಕೆ ನಂತರ ನೀವು ಪಟ್ಟ ಕಷ್ಟಗಳ ವಿವರ ತಿಳಿಸಿ.

ಉತ್ತರ: ನಾನು ಸಂಗೀತ ಕಲಿತ ನಂತರ ಆಶ್ರಮದಿಂದ ಹಾವೇರಿ ಜಿಲ್ಲೆ ಹಂದಿಗನೂರು ಎಂಬ ಗ್ರಾಮದಲ್ಲಿ ವಿರಕ್ತ ಮಠದಲ್ಲಿ ಶ್ರೀ ಪೂಜ್ಯ ಶಿವಲಿಂಗ ಮಹಾಸ್ವಾಮಿಗಳ ಜೊತೆ ಪುರಾಣದಲ್ಲಿ ಹಾಡುವುದಕ್ಕೆ ಹೋಗುತ್ತಿದ್ದೆ. ಅವರ ಮಠದಲ್ಲಿ ನಾಲ್ಕು ಮಕ್ಕಳಿಗೆ ಸಂಗೀತ ಪಾಠ ಮಾಡುತ್ತಿದ್ದೆ. ನನ್ನ ಜೀವನದಲ್ಲಿ ಅಷ್ಟೊಂದೂ ಕಷ್ಟದಲ್ಲಿ ನಾನು ಇರಲಿಲ್ಲ. ಅನೇಕ ಪೂಜ್ಯ ಸ್ವಾಮಿಗಳ ಪರಿಚಯ ನನಗೆ ಇದ್ದುದರಿಂದ ಬದುಕು ತೀರಾ ಕಠಿಣವೆನಿಸಲಿಲ್ಲ.

೬. ನಿಮ್ಮ ತಂದೆ ತಾಯಿಗಳ ನಿಮಗೆ ನೀಡಿದ ಪ್ರೋತ್ಸಾಹದ ಬಗ್ಗೆ ತಿಳಿಸಿ.

ಉತ್ತರ: ಸಣ್ಣವನಿದ್ದಾಗ ಪ್ರತಿದಿನ ನನ್ನ ಜಾನಪದ ಹಾಡುತಿದ್ದುದನ್ನು ತಂದೆ-ತಾಯಿ ಕೇಳುತಿದ್ದರು. ನನ್ನ ತಂದೆ-ತಾಯಿ ಅಣ್ಣ-ತಂಗಿಯರ ಸಹಕಾರದಿಂದ ಇಂದು ನಾನೊಬ್ಬ ಸಂಗೀತ ಕಲಾವಿದನಾಗಿ ಬೆಳೆಯಲು ಅನುಕೂಲವಾಗಿದೆ. ಇಡೀ ಕುಟುಂಬ ನನಗೆ ಸಂಗೀತಗಾರನಾಗಲು ಪ್ರೋತ್ಸಾಹ ನೀಡಿದ್ದಾರೆ. ಅವರ ಪ್ರೋತ್ಸಾಹ ಈ ಜನ್ಮದಲ್ಲಿ ಮರೆಯಲಾಗದು.

೭. ಸಂಗೀತದ ಬದುಕು ಆಯ್ದುಕೊಂಡ ನಿಮಗೆ ಮದುವೆಯ ಸಂದರ್ಭದಲ್ಲಿ ಯಾವ ರೀತಿಯಾದರು ಅಡಚಣೆ ಆಯಿತೆ?
ಉತ್ತರ: ನನ್ನ ಸಂಗೀತದ ಬದುಕಿನಲ್ಲಿ ನಾನು ಮದುವೆಯಾದ ದಿನದಿಂದ ಇಂದಿನ ದಿನದವರಿಗೆ ಯಾವುದೇ ರೀತಿಯ ಅಡಚಣೆ ಆಗಿಲ್ಲಾ. ಕಾರಣ ನಾನು ಮದುವೆ ಆಗಿರುವ ನನ್ನ ಶ್ರೀಮತಿಯು ನನ್ನ ಶಿಷ್ಯಳು ಹೌದು, ನನ್ನನ್ನೇ ಮದುವೆ ಆಗಲು ಎರಡು ಮೂರು ವರ್ಷ ಕಾದವಳು. ಆದ್ದರಿಂದಲೇ ಇಂದು ನನ್ನ ಕುಟುಂಬ ಪೂರ್ಣ ಪ್ರಮಾಣದಲ್ಲಿ ಸಂಗೀತಕ್ಕಾಗಿ ತೊಡಗಿಸಿಕೊಂಡಿದ್ದೇವೆ.

೮. ನೀವು ಶಿಮೊಗ್ಗದಲ್ಲಿ Permanent ಕೆಲಸ ಸಿಗುವುದಕ್ಕಿಂತ ಮುಂಚೆ ನೀವು ಅನುಭವಿಸಿದ ಪ್ರಮುಖ ಕಷ್ಟ ಕೂಟಲೆಗಳ ವಿವರ.
ಉತ್ತರ: ನಾನು ಶಿವಮೊಗ್ಗಕ್ಕೆ ಮೊದಲು ಬಂದಾಗ ತುಂಬಾ ಕಷ್ಟಪಟ್ಟು ಮನೆಮನೆಗೆ ಸೈಕಲ್ ತುಳಿದುಕೊಂಡು ಸಂಗೀತ ಪಾಠ ಮಾಡಿಕೊಂಡು ನನ್ನ ಪಯಣ ಸಾಗಿಸಿದೆ ಪ್ರತಿ ಒಂದು ವಾರದಲ್ಲಿ ಒಂದೊಂದು ಊರಿನಲ್ಲಿ ಪಾಠ ಮಾಡುತ್ತಿದ್ದೆ. ಸಾಗರ, ಸೊರಬ, ಭದ್ರಾವತಿ, ತೀರ್ಥಹಳ್ಳಿಗಳಲ್ಲಿ ಸಂಗೀತ ತರಗತಿ ನಡೆಸುತ್ತಿದ್ದೆ.

೯. ಸಂಗೀತ ಕಾರ್ಯಕ್ರಮದಲ್ಲಿ ಬೇರೆ ಊರಿಗೆ ಹೋದಾಗ ನಿಮಗಾದ ಅನುಭವಗಳು, ನೋವುಗಳು, ಸಂತೋಷಗಳ ವಿವರ
ಉತ್ತರ: ನಾನು ಸಂಗೀತ ಕಾರ್ಯಕ್ರಮಕ್ಕೆ ಬೇರೆ ಊರಿಗೆ ಹೋದಾಗ ಕೆಲವು ಕಹಿ ಘಟನೆಗಳು ಆಗಿವೆ. ತರಿಕೇರಿ ನಗರದ ಹತ್ತಿರ ಒಂದು ಹಳ್ಳಿಯೊಳಗೆ ನಮ್ಮನ್ನು ಹಾಡಲು ಪ್ರಾರಂಭಿಸಿ ಕಾರ್ಯಕ್ರಮಕ್ಕೆ ಕರೆಸಿದ ಕಾರ್ಯಕರ್ತರು ಹೊಡೆದಾಡಿದರು ಇನ್ನೊಂದು ಕಾರ್ಯಕ್ರಮ ಆನಂದಪುರದ ಹತ್ತಿರ ಹಾಡಲು ಹೋದಾಗ ಕಾರ್ಯಕ್ರಮ ನಡೆಯದೇ ಹಾಗೇ ಬಂದಿದ್ದು ಉಂಟು. ಇನ್ನೊಂದು ಕಾರ್ಯಕ್ರಮದಲ್ಲಿ ಗಣಪತಿ ಉತ್ಸವ ಸಂದರ್ಭದಲ್ಲಿ ನಡೆದ ಘಟನೆ ಇದು. ಗಣಪತಿ ಉತ್ಸವದಲ್ಲಿ ಗಲಾಟೆ ಆಗಿ ಕಾರ್ಯಕ್ರಮ ನಡೆಯಲಿಲ್ಲ ಹಾಗಾಗಿ ಊರಿಗೆ ವಾಪಾಸು ಬಂದುದು ಉಂಟು. ಇನ್ನೂ ಬೇರೆ ಊರಿಗೆ ಹೋದಾಗ ನಡೆದ ಸಂತೋಷದ ಘಟನೆಗಳು ಹೆಚ್ಚು ಅದರಲ್ಲಿ ಒಂದು ಅನುಭವ ನನ್ನ ಜೀವನದಲ್ಲಿ ಮರೆಯಲಾಗದು. ನಗರದಲ್ಲಿ ನಡೆದ ಒಂದು ಕಾರ್ಯಕ್ರಮದಲ್ಲಿ ನಾನು ಹಾಡಿದ ವಚನ ಗಾಯನ ಕೇಳಿ ಗದುಗಿನ ಶ್ರೀಗಳು ಮತ್ತು ಅನಂತಪುರ ಶ್ರೀಗಳ ಭಕ್ತರು ಅವರ ಜೋಳಗಿಗೆ ಹಾಕಿದ ಕಾಣಿಕೆಗಳನೆಲ್ಲಾ ನನಗೆ ಆಶೀರ್ವಾದ ರೂಪದಲ್ಲಿ ನೀಡಿ ಹರಿಸಿದ ಆ ಸಂತೋಷದ ದಿನಗಳ ಮರೆಯಲಾರೆ. ಧಾರವಾಡದ ಇನ್ನೊಂದು ಕಾರ್ಯಕ್ರಮದಲ್ಲಿ ಐದು ಸಾವಿರಕ್ಕೂ ಹೆಚ್ಚು ಜನಗಳಿಂದ ಬಹುಮಾನ ರೂಪದಲ್ಲಿ (ಅಯರ್) ಆದ ದಿನ ನಾ ಸಂತೋಷಪಟ್ಟು ಕಾರ್ಯಕ್ರಮ ಅದು.

೧೦. ನಿಮಗೆ ಇಷ್ಟವಾದ ಪ್ರಮುಖ ಸಂಗೀತ ಕಾರ್ಯಕ್ರಮಗಳು.
ಉತ್ತರ: ಬಹುಶ ಈ ಪ್ರಶ್ನೆಗೆ ಉತ್ತರ ಹೇಳುವುದು ಕಷ್ಟವಾಗಬಹುದು. ನನ್ನ ಸಂಗೀತ ಪಯಣದಲ್ಲಿ ನನಗೆ ಒಂದೊಂದು ಕಾರ್ಯಕ್ರಮವೂ ಮುಖ್ಯವಾದುದು ನಾನು ಇದುವರೆಗೆ ಮೂರು ಸಾವಿರಕ್ಕೂ ಹೆಚ್ಚು ಕಾರ್ಯಕ್ರಮದಲ್ಲಿ ಹಾಡಿದುಂಟು ಅದರಲ್ಲಿ ೧೦ ಕಾರ್ಯಕ್ರಮ ಹೆಸರಿಸಬಹುದು. ೧. ಶಿವಮೊಗ್ಗ ಶ್ರೋತೃ ಸಭೆ ೨.ಆಳ್ವಾಸ್ ನುಡಿಸಿರಿ ೩.ಮೈಸೂರು ದಸರಾ ಉತ್ಸವ ೪.ಕೇರಳದ ಬೇಕಲಕೋಟೆ ರಾಮೋತ್ಸವ ೫.ಉಡುಪಿಯ ಕೃಷ್ಣಮಠ ೬.ಬೆಂಗಳೂರು ಗಾಯಿತ್ರಿ ಸಂಗೀತ ಸಭಾ, ಯಲಹಂಕ ೭.ಹರಿದಾಸರ ಹಬ್ಬ ೮.ತರಳಬಾಳು ಹುಣ್ಣಿಮೆ ಮಹೋತ್ಸವ ೯.ಬೆಳಗಾಂವ ಸಂಗೀತ ಸಭಾ ೧೦.ರಂಭಾಪುರಿ ಪೀಠದ ದಸರಾ ಉತ್ಸವದಲ್ಲಿ ಇನ್ನೂ ಅನೇಕ ಕಾರ್ಯಕ್ರಮದ ಮುಖ್ಯವಾದವುಗಳು.

೧೧. ನೀವು ಮೆಚ್ಚಿರುವ ಸಂಗೀತ ಸಾಧಕರು
ಉತ್ತರ: ಉಸ್ತಾದ್: ಅಮೀರ್‌ಖಾನ, ಪಂ॥ ಪುಟ್ಟರಾಜ ಗವಾಯಿ, ಪಂ॥ ಬಸವರಾಜ ರಾಜಗುರು, ಪಂ॥ ಮಲ್ಲಿಕಾರ್ಜುನ ಮನ್ಸೂರು, ಪಂ॥ ಭೀಮಸನ್ ಜೋಶಿ, ಪಂ॥ ಚಂದ್ರಶೇಖರ್ ಪುರಾಣಕಮಠ ಇನ್ನೂ ಅನೇಕರಿದ್ದಾರೆ.

೧೨. ಸಂಗೀತಕ್ಕಾಗಿ ಒಂದು ಪ್ರತ್ಯೇಕ ವಿಶ್ವವಿದ್ಯಾಲಯ ಬೇಕಿತ್ತೆ? ಬೇಕಿದ್ದರೆ ಯಾಕೆ?
ಉತ್ತರ: ಸಂಗೀತಕ್ಕಾಗಿ ಒಂದು ಪ್ರತ್ಯೇಕ ವಿಶ್ವವಿದ್ಯಾಲಯ ಅವಶ್ಯವಾಗಿ ಬೇಕಿತ್ತು. ಇವತ್ತಿನ ದಿನಮಾನಗಳಲ್ಲಿ ಸಂಗೀತದ ಬಗ್ಗೆ ಜನಗಳಲ್ಲಿ ಆಸಕ್ತಿ ಕಡಿಮೆ ಆಗಿದೆ. ಅದಕ್ಕಾಗಿ ಮುಂದಿನ ದಿನಮಾನಗಳಲ್ಲಿ ಹಿಂದಿನ ಹಿರಿಯ ಸಂಗೀತಗಾರರ ಬಗ್ಗೆ ಮಾಹಿತಿ, ರಾಗಗಳ ವರ್ಗೀಕರಣದ ಬಗ್ಗೆ ಘರಾಣೆಗಳ ಬಗ್ಗೆ ಮತ್ತು ಸಂಗೀತದಲ್ಲಿ ಹೆಚ್ಚಿನ ಅಧ್ಯಯನಕ್ಕೆ ವಿಶ್ವವಿದ್ಯಾಲಯ ಅವಶ್ಯಕ.

೧೩. ನಿಮ್ಮ ಬಳಿ ಕಲಿತು ಸರ್ಕಾರಿ ಕೆಲಸ ಪಡಿದ ವಿದ್ಯಾರ್ಥಿಗಳ ಪಟ್ಟಿ

ಉತ್ತರ: ನನ್ನ ಹತ್ತಿರ ಇದುವರಿಗೆ ಸಂಗೀತ ಕಲಿತವರ ಸಂಖ್ಯೆ ಅಪಾರ ನನ್ನ ಸಂಗೀತ ವಿದ್ಯಾ ಸಂಸ್ಥೆಯಲ್ಲಿ ಕಲಿತವರ ಪಟ್ಟಿ ದೊಡ್ಡದು.

೧. ರವೀಂದ್ರ ಮಗಳಗಿ, ಸರ್ಕಾರಿ ಶಿಕ್ಷಕ.
೨. ಸೌಮ್ಯಾ ಜೈನ್, ಸರ್ಕಾರಿ ಶಿಕ್ಷಕ
೩. ಸಂತೋಷ ತುಳಜಾರಾಮ ಸಿಂಧೆ, ಸರ್ಕಾರಿ ಶಿಕ್ಷಕ
೪. ಮಂಜುನಾಥ ಗಾನದಕಟ್ಟೆ, ಅಂಧ ಸಂಗಾತಕಾರ, ಸರ್ಕಾರಿ ಶಿಕ್ಷಕ
೫. ಸುಭಾಷ್ ಹಾರೆಗೊಪ್ಪ ಸಾಗರ, ಸರ್ಕಾರಿ ಶಿಕ್ಷಕ
೬. ವಿಕ್ರಂ ಭದ್ರಾವತಿ, ಸರ್ಕಾರಿ ಶಿಕ್ಷಕ
೭. ಜಿ.ಎಂ. ಶಾಸ್ತ್ರಿ, ಸರ್ಕಾರಿ ಶಿಕ್ಷಕ
೮. ವಿಜಯಕುಮಾರಿ ಚಿಕ್ಕಚಾರ್, ಸರ್ಕಾರಿ ಶಿಕ್ಷಕ
೯. ಬಾಳೇಹಳ್ಳೀ ರಾಜೇಂದ್ರ, ಸಕಾರಿ ಶಿಕ್ಷಕ
೧೦. ಜರ್ನಾಧನ್ ಹಗ್ಗಡೆ, ಸರ್ಕಾರಿ ಶಿಕ್ಷಕ
೧೧. ಇಮ್ತಿಯಾಜ್ ಕೋಣಂದೂರು, ಸರ್ಕಾರಿ ಶಿಕ್ಷಕ

೧೪. ನಿಮ್ಮ ಮಕ್ಕಳ ಸಂಗೀತ ಸಾಧನೆ ಬಗ್ಗೆ ನಿಮ್ಮ ಅಭಿಪ್ರಾಯ

ಉತ್ತರ: ನಿಜವಾಗಲು ಸಂಗೀತದಲ್ಲಿ ನನ್ನ ಇಬ್ಬರು ಮಕ್ಕಳು ಒಳ್ಳೆಯ ಸಾಧನೆ ಮಾಡುತ್ತಿದ್ದಾರೆ. ನನ್ನ ಹಿರಿಯ ಪುತ್ರ ನೌಶಾದ್ ಕರ್ನಾಟಕ ಸರ್ಕಾರ ನಡೆಸುವ ಜೂನಿಯರ್ ಗಾಯನ, ಸೀನಿಯರ್ ಗಾಯನ್ ವಿದ್ವತ್ ಪ್ರಥಮ ವಿದ್ವತ್, ದ್ವಿತೀಯ ವಿದ್ವತ್ ಪರೀಕ್ಷೆಗಳನ್ನು ಪ್ರಥಮ ದರ್ಜೆಯಲ್ಲಿ ಪಾಸ್ ಮಾಡಿ ಈಗ ಪಂ॥ ಪಂಚಾಕ್ಷರಿ ಸಂಗೀತ ಮಹಾವಿದ್ಯಾಲಯದಲ್ಲಿ ಗದಗದಲ್ಲಿ ಬಿ.ಎಂ. ಮ್ಯೂಜಿಕ್ ಎರಡನೇ ವರ್ಷದಲ್ಲಿ ಓದುತ್ತಿದ್ದಾನೆ ಮತ್ತು ಕೇಂದ್ರ ಸರ್ಕಾರ ನೀಡುವ ದ ಮಿನಿಸ್ಟ್ರಿ ಆಫ್ ಕಲ್ಚರ್‌ನ ಶಿಷ್ಯವೇತನವನ್ನು ಮೂರು ವರ್ಷ ಪ್ರತಿ ತಿಂಗಳು ೫೦೦೦ ರೂ. ಪಡೆಯುತ್ತಿದ್ದಾನೆ. ಇನ್ನೊಬ್ಬ ಸಣ್ಣ ಮಗ ನಿಷಾದ್ ಜೂನಿಯರ್ ಗಾಯನ ಪ್ರಥಮ ದರ್ಜೆಯಲ್ಲಿ ಪಾಸ್‌ಮಾಡಿ ಸೀನಿಯರ್ ಸಂಗೀತ ಅಭ್ಯಾಸ ಮಾಡುತ್ತಿದ್ದಾನೆ. ನನ್ನ ಧರ್ಮಪತ್ನಿ ತುಂಬಾ ಚೆನ್ನಾಗಿ ಈಗ ಹಾಡುತ್ತಿದ್ದಾಳೆ.

೧೫. ಸಂಗೀತಕ್ಕೆ ಬೇಕಾಗುವ ಯಾವ ವಾದ್ಯಗಳ ನಿಮಗೆ ಪ್ರಮುಖ ಅನಿಸುತ್ತದೆ.

ಉತ್ತರ: ಸಂಗೀತಕ್ಕೆ ಗಾಯಕನಿಗೆ ಸಾಥಿಯಾಗಿ ೧.ಹಾರ್ಮೋನಿಯಂ ೨.ಸಾರಂಗಿ ೩.ವಾಯೋಲಿನ್ ೪.ತಾನ್‌ಪುರ್ ೫.ಸ್ವರಮಂಡಲ ಮುಂತಾದ ಸಂಗೀತ ಪರಿಕರಗಳು ಬೇಕಾಗುತ್ತದೆ. ಜೊತೆಗೆ ಸಹವಾದ್ಯಗಾರರು ಸಹ ಮುಖ್ಯವಾಗುತ್ತಾರೆ.

೧೬. ನೀವು ಧೀರ್ಘವಾಗಿ ಹಾಡಿದ ಸಂಗೀತ ಕಾರ್ಯಕ್ರಮ ವಿವರ.

ಉತ್ತರ: ನಾನು ಸಾಮಾನ್ಯವಾಗಿ ಒಬ್ಬ ಸಂಗೀತಗಾರ ೩ ಘಂಟೆ ಹಾಡಲೇಬೇಕು. ನಾನು ಮೂರು ಘಂಟೆ ಹಾಡಿದ ಸಭೆ ನೂರಾರು ಆದರೆ ಮೂರು ಘಂಟೆ ಹೆಚ್ಚು ಹಾಡಿದ ಕೆಲವು ಸಭೆಗಳನ್ನು ಹೆಸರು ಇಲ್ಲಿ ಹೇಳುತ್ತೇನೆ.

೧. ರಾಣೆಬೆನ್ನೂರು ೪ ಘಂಟೆ
೨. ಚಿನ್ನಮುಳಗುಂದ ೪ ಘಂಟೆ ೩೦ ನಿಮಿಷ
೩. ಚಟ್ನಿಹಳ್ಳಿ ೪ ಘಂಟೆ ೩೦ ನಿಮಿಷ
೪. ಸಾಗರ ೪ ಘಂಟೆ
೫. ಗಿರಿಯಾಪುರ ೪ ಘಂಟೆ

೧೭. ಮಹಿಳೆಯರು ಸಂಗೀತ ಕ್ಷೇತ್ರದಲ್ಲಿ ಸಾಧನೆ ಬಗೆಗಿನ ನಿಮ್ಮ ಅಭಿಪ್ರಾಯ

ಉತ್ತರ: ಹಿಂದಿನಿಂದಲು ಸಂಗೀತ ಕ್ಷೇತ್ರದಲ್ಲಿ ಮಹಿಳೆಯರ ಸಾಧನೆ ಅಪಾರವಾಗಿದೆ. ನಾಡಿನ ಶ್ರೇಷ್ಠ ಸಂಗೀತಗಾರರು ಅನೇಕರಿದ್ದಾರೆ. ಅದರಲ್ಲಿ ಡಾ॥ ಗಂಗೂಬಾಯಿ ಹಾನಗಲ್ ಶ್ರೇಷ್ಠ ಎನಿಸಿದ್ದಾರೆ. ಆದರೆ ಇವತ್ತಿನ ಮಹಿಳೆಯರು ಅಷ್ಟಾಗಿ ಶಾಸ್ತ್ರೀಯ ಸಂಗೀತದ ಬಗ್ಗೆ ಒಲವು ತೋರುತ್ತಿಲ್ಲ. ಆದರು ಸಂಗೀತ ವಿವಿಧ ಪ್ರಕಾರಗಳಲ್ಲಿ ಸಾಧನೆ ಮಾಡುತ್ತಿರುವುದು ಸಂತೋಷದಾಯಕದ ಸಂಗತಿ.

೧೮. ನೀವು ಪಡೆದ ೧೦ ಪ್ರಮುಖ ಪ್ರಶಸ್ತಿಗಳ ಪಟ್ಟಿ ಕೊಡಿ.

ಉತ್ತರ: ನನಗೆ ಅನೇಕ ಸಂಘ ಸಂಸ್ಥೆಗಳಿಂದ ಬಂದಿರುವ ಪ್ರಶಸ್ತಿಗಳು

೧. ಸಂಗೀತ ಚತುರ
೨. ಸಂಗೀತ ಭ್ರಮರ
೩. ಸಂಗೀತ ಕಲಾಭೂಷಣ
೪. ಪಂ॥ ಪುಟ್ಟರಾಜ ಕೃಪಾ ಭೂಷಣ
೫. ಸಂಗೀತ ಪ್ರವೀಣ
೬. ಭಾವ್ಯಕ್ಯ ಗಾನಕೋಗಿಲೆ
೭. ರಮಣಿ ಶ್ರೀ ಶರಣಿ
೮. ಶ್ರೀ ಸಹ್ಯಾದ್ರಿ ಸಂಗೀತ ನಿಧಿ
೯. ಶ್ರೀಶ ವಿಠ್ಠಲದಾಸ
೧೦. ಬಿ.ಜಿ.ಎಸ್. ಮ್ಯೂಸಿಕ್ ಅವಾರ್ಡ್ (ಶ್ರೀಶ್ರೀಶ್ರೀ ಡಾ॥ ಬಾಲಗಂಗಾಧರನಾಥ ಸ್ವಾಮೀಜಿ ಅವರ ಮೊದಲ ಸ್ಮರಣ ಪ್ರಶಸ್ತಿ)
೧೧. ಗಾನಶ್ರೀ
೧೨. ಸ್ವರ ಸುಧಾಕರ
೧೩. ಶೃತಿ ಮನೋಹರ

೫. ಜನಪದ ಛಂದಸ್ಸು ಮತ್ತು ಹಾಡುಗಾರಿಕೆ

ಭಾಷೆಗೆ ವ್ಯಾಕರಣ ಛಂದಸ್ಸುಗಳೆರಡೂ ಪೋಷಕ. ವ್ಯಾಕರಣವು ಗದ್ಯ ಪದ್ಯಗಳೆರಡಕ್ಕೂ ಸಂಬಂಧಿಸಿದೆ. ಛಂದಸ್ಸು ಪದ್ಯ ಸಾಹಿತ್ಯಕ್ಕೆ ಮಾತ್ರ ಅನ್ವಯವಾಗುತ್ತದೆ. ವಿಸ್ತಾರವಾದ ವಿಷಯವನ್ನು ಸಂಗ್ರಹವಾಗಿ ಹೇಳಲೂ, ರಸವತ್ತಾದ ಅಂಶವನ್ನು ಹೃದಯಂಗಮವಾಗಿ ತಿಳಿಸಲೂ, ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳಲೂ ಪದ್ಯ ಹೆಚ್ಚು ಅನುಕೂಲ.

ಛಂದಸ್ಸಿನಲ್ಲಿ ಅಕ್ಷರ ಛಂದಸ್ಸು, ಮಾತ್ರಾ ಛಂದಸ್ಸು ಮತ್ತು ಅಂಶ ಛಂದಸ್ಸು ಎಂದು ಮೂರು ವಿಧ. ಮಾತ್ರಾ ಛಂದಸ್ಸನ್ನು ಗುರು ಮತ್ತು ಲಘುಗಳ ವಿಂಗಡಣೆಯಿಂದ ಗುರುತಿಸಲಾಗುತ್ತದೆ. ಒಂದು ಹ್ರಸ್ವಸ್ವರ ಅಥವಾ ಹ್ರಸ್ವಸ್ವರಯುಕ್ತ ವ್ಯಂಜನದ ಉಚ್ಚಾರಣೆಗೆ ಬೇಕಾಗುವ "ಕಾಲಕ್ಕೆ" ಒಳಪಡುವ ಧ್ವನಿ ಘಟಕಕ್ಕೆ ಒಂದು "ಮಾತ್ರೆ" ಎಂದು ಗಣನೆ. ಒಂದು ಮಾತ್ರೆಯ ವ್ಯಾಪ್ತಿಯುಳ್ಳ ಅಕ್ಷರ "ಗುರು" ಅಂದರೆ, ಎಲ್ಲ ದೀರ್ಘಾಕ್ಷರಗಳೂ, ಪ್ಲುತಸ್ವರ ಅನುಸ್ವಾರ ವಿಸರ್ಗಗಳಿಂದ ಕೂಡಿದ ಅಕ್ಷರ, ಸಂಯುಕ್ತಾಕ್ಷರ, ಒತ್ತಕ್ಷರದ ಹಿಂದಿನ ಅಕ್ಷರ– ಇವೆಲ್ಲ ಗುರುಗಳು. ಹಾಗೆಯೇ ಎಲ್ಲ ಹ್ರಸ್ವಾಕ್ಷರಗಳೂ ಲಘುಗಳು. ಕೆಲವು ನಿಯಮಗಳಿಗನುಸಾರವಾಗಿ ವಿಂಗಡಿಸಿದ ಅಕ್ಷರಗಳ ಗುಂಪಿಗೆ 'ಗಣ'ಎಂದು ಹೆಸರು. ಗಣಗಳಲ್ಲಿ ವರ್ಣಗಣ, ಮಾತ್ರಾಗಣ, ಮತ್ತು ಅಂಶಗಣ ಎಂದು ಮೂರು ವಿಧ.

ಅಚ್ಚಗನ್ನಡದ ಛಂದಸ್ಸು ತಿಳಿಯಲು ಕನ್ನಡ ಜನಪದ ಗೀತೆಗಳಲ್ಲಿ ಹಾಗೂ ಯಕ್ಷಗಾನ ಬಯಲಾಟಗಳಲ್ಲಿ ಮೈವೆತ್ತಿ ಬಂದಿರುವ ಛಂಧಸ್ಸಿನ ವಿವಿಧ ರೂಪಗಳನ್ನು ಅಧ್ಯಯನ ಮಾಡುವುದು ಅಗತ್ಯ. ಏಕೆಂದರೆ, ಕನ್ನಡ ಛಂದಸ್ಸಿಗೆ ಜನಪದ ಸಾಹಿತ್ಯವೇ ಮೂಲಾಧಾರ. ಮೊದಲು ಬಂದದ್ದು ಜನಪದ ಸಾಹಿತ್ಯ; ಅನಂತರ ಅದರಿಂದ ಕವಲೊಡೆದು ಪರಿಷ್ಕಾರ ಹೊಂದಿ ಮೈತಳೆದದ್ದು ಶಿಷ್ಟ ಸಾಹಿತ್ಯ. ಆದರೂ, ಬಹುಕಾಲ ಪಂಡಿತರ ಅಲಕ್ಷ್ಯ ತಿರಸ್ಕಾರಗಳಿಗೆ ಒಳಗಾಗಿದ್ದ ನಮ್ಮ ಜನಪದ ಸಾಹಿತ್ಯ ಈಗ ಎಲ್ಲರ ಆದರಕ್ಕೂ ಪಾತ್ರವಾಗಿದೆ.

ಕನ್ನಡದ ಅತಿ ಪ್ರಾಚೀನ ಅಲಂಕಾರಶಾಸ್ತ್ರ ಗ್ರಂಥವಾದ "ಕವಿರಾಜ ಮಾರ್ಗ"ದಲ್ಲಿ (೯ನೆಯ ಶತಮಾನ) ಅದುವರೆಗೆ ಪ್ರಸಿದ್ಧವಾಗಿದ್ದ ಕನ್ನಡದ ಪದ್ಯ ಪ್ರಕಾರಗಳನ್ನು ತಿಳಿಸಿದೆ.

ಮದನವತಿಯಕ್ಕರಂ ಚೌ

ಪದಿ ಗೀತಿಕೆಯೇಳೆ ತಿವದಿಯುತ್ಸಾಹಂ ಷ

ಟ್ಪದಿಯಕ್ಕರಿಗೆ ಕರಂ ಚೆ

ಲ್ವೊದವಿದ ಛಂದೋವತಂಸಮಬ್ಜದಳಾಕ್ಷೀ

೯ನೆಯ ಶತಮಾನದ ಹೊತ್ತಿಗೇ ಕನ್ನಡದಲ್ಲಿ ಮದನವತಿ, ಅಕ್ಕರ, ದ್ವಿಪದಿ, ಗೀತಿಕೆ, ಏಳೆ, ರಗಳೆ, ಚೌಪದಿ, ಷಟ್ಪದಿ ಮುಂತಾದ ಪದ್ಯ ಪ್ರಕಾರಗಳು ಪ್ರಸಿದ್ಧವಾಗಿದ್ದವು. ಕುಟ್ಟುವಾಗ, ಬೀಸುವಾಗ, ದೇವರನ್ನು ಮೆರವಣಿಗೆ ಮಾಡುವಾಗ, ಮದುವೆ ಮುಂತಾದ ಶುಭಾಚರಣೆಯ ಸಮಾರಂಭಗಳನ್ನು ನೆರವೇರಿಸುವಾಗ ಹಾಗೂ ಬೇಟೆ, ಬೇಟ ಸಾಮೂಹಿಕ ನರ್ತನವೇ ಮೊದಲಾದ ಸಮಯಗಳಲ್ಲಿ, ಯಕ್ಷಗಾನ ಬಯಲಾಟಗಳಲ್ಲಿ ಕನ್ನಡ ಜನ ಹಲವು ರೀತಿಯ ಕಟ್ಟಡದ (ಛಂದಸ್ಸಿನ) ಹಾಡುಗಳನ್ನು ಹಾಡುತ್ತಾ ಬಂದಿದ್ದಾರೆ.

ಈಗ ಕನ್ನಡದ ಜನಪದ ಗೀತೆಗಳಲ್ಲಿ ದ್ವಿಪದಿ, ಏಳೆ, ತ್ರಿಪದಿ, ಚತುಷ್ಪದಿ, ಪಂಚಪದಿ, ಷಟ್ಪದಿ, ರಗಳೆ, ಸಾಂಗತ್ಯ ಸೀಸ ಪದ್ಯಗಳೇ ಅಲ್ಲದೆ, 'ಧವಳ'ದಂತಹ ಹಾಡುಗಳಲ್ಲಿ ಹಲವು ದನಿ ಧಾಟಿಗಳುಳ್ಳ ಪದ್ಯ ಸಾಹಿತ್ಯ ವಿಫುಲವಾಗಿ ಬೆಳೆದು ಬಂದಿದೆ. ವಿವಿಧ ಛಂದಸ್ಸಿನ ಗೀತೆಗಳ ಬಗೆಗೆ ಈ ರೀತಿ ಉದಾಹರಣೆಗಳು ಕಂಡು ಬರುತ್ತವೆ.

ದ್ವಿಪದಿ: (ಎರಡು ಸಾಲಿನ ಪದ್ಯ)

ಒಬ್ಬನ್ನ ಕಟ್ಟಿದ್ದೆ ಒಬ್ಬನ್ನ ಬಿಚ್ಚಿದ್ದೆ
ಒಬ್ಬನ್ನ ಕರಕಂಡ್ ಒಳಗ್ಹೋದೆ

ಏಳೆ: (ಏಳು ಗಣದ ಪದ್ಯ)

ಅಣ್ಣ: ಕುದುರೇನೆ ತಂದೀನಿ ಜೀನವ ಬಿಗಿದೀನಿ
ಬರಬೇಕೆ ತಂಗಿ ಮದುವೇಗೇ

ತಂಗಿ: ಅಂಗ್ಯ ಗುಡಿಸೋರಿಲ್ಲ ಗಂಗ್ಯ ತೊಳಿಯೋರಿಲ್ಲ

ಹೆಂಗೆ ಬರಲಣ್ಣ ಮದುವೇಗೇ.

ತ್ರಿಪದಿ: (ಮೂರು ಸಾಲಿನ ಪದ್ಯ)
ಬೆಟ್ಟದ ಮ್ಯಾಗಳ್ ಜಲ್ಲೇ ಬಿದಿರು
ಬೇಲಿ ಮ್ಯಾಗಳ್ ಸೋರೇ ಬುರುಡೆ
ಲೋಲು ಕಿನ್ನುಡಿ ನುಡಿಸೋನ್ಯಾರಯ್ಯಾ
(ತ್ರಿಪದಿ ಎಂಬ ಹೆಸರಿನ ಪದ್ಯದ ವಿಚಾರವನ್ನು
ಮುಂದೆ ಹೇಳಿದೆ).

ಚತುಷ್ಪದಿ: (ನಾಲ್ಕು ಸಾಲಿನ ಪದ್ಯ)
ಕಬ್ಬು ನಮ್ಮಲ್ಲಿ ಉಂಟೇ ಬಲ್ಲರು ಬಾಲೇ
ಕಡಲೆ ನಮ್ಮಲ್ಲಿ ಉಂಟೇ
ಹೆಣ್ಣೆಂಬೋ ಕಿಚ್ಚಿಗೆ ಬಾಯಾರಿ ನಾ ಬಂದೆ
ಕಣ್ಣು ಪ್ರೀತಿಯ ತೋರಿಸೇ

ಪಂಚಪದಿ: (ಐದು ಸಾಲಿನ ಪದ್ಯ)
ಕಣ್ ನೋಡಿ ಕಪ್ಪಾನೆ ತರುವ
ಬೆನ್ ನೋಡಿ ಕುಪ್ಪಾಸ ತರುವ
ಸಣ್ಣ ಸೀರೇ ಮೊದಲು ಮಾಡಿ
ಹೆಣ್ಣು ಮಾಡ್ಹೋದಾತನ ದಾರಿನ್'
ಏಸು ದಿನಂತ ನೋಡಲಮ್ಮಾ

ಷಟ್ಪದಿ: (ಆರು ಸಾಲಿನ ಪದ್ಯ)
ತಾಯಿ ತಂದೆಗೆ ವಂದನೆ ಮಾಡು
ಗುರುಹಿರಿಯರಿಗೆ ಮರ್ಯಾದೆ ಮಾಡು
ಲಾಭವ ನೋಡಿ ಯಾಪಾರ ಮಾಡು
ಗೋತ್ರವ ತಿಳಿದು ಬಳಕೆಯ ಮಾಡು
ವೈರಿಯ ಕಂಡರೆ ಧೈರ್ಯವ ಮಾಡು
ಬಡತನ ಬಂದರೆ ಬದುಕನು ಮಾಡಣ್ಣಾ

ರಗಳೆ: ರನ್ನದ ಕಣಕೇ ಚಿನ್ನದ ಮೇಟಿ
ಚಿನ್ನದ ಮೇಟಿಗೇ ಬೆಳ್ಳಿಯ ದಾವಣಿ
ಹಂಡೆತ್ತು ಹುಂಡೆತ್ತು ಜಾಲೆತ್ತು ತುಳಿಯಲಿ
ಜಾಲೆತ್ತು ತುಳಿದ್ಹಂಗೆ ಕೆಂದೆತ್ತು ತುಳಿಯಲಿ
ಕೆಂದೆತ್ತು ತುಳಿದ್ಹಂಗೆ ಅಲ್ಲೆತ್ತು ತುಳಿಯಲಿ
ಅಲ್ಲೆತ್ತು ತುಳಿದ್ಹಂಗೆ ಬಲ್ಲೆತ್ತು ತುಳಿಯಲಿ (ಇತ್ಯಾದಿ)

ತ್ರಿಪದಿ: ಕನ್ನಡ ಜನಪದ ಗೀತೆಗಳಲ್ಲಿ ಹೆಚ್ಚಿನ ಭಾಗ ತ್ರಿಪದಿಯಲ್ಲಿದೆ. ಕನ್ನಡ ಜನಪದ ಗೀತೆಗಳು ಪ್ರಾರಂಭದ ಕಾಲದಲ್ಲಿ ಅಂದರೆ, ಸುಮಾರು ಕ್ರಿ.ಶ.೩–೪ನೇ ಶತಮಾನದಲ್ಲಿ ತಮಿಳಿನ **'ಕುರಳ್'**ನಂತೆ ಎರಡು ಪಾದಗಳನ್ನು ಹೊಂದಿದ್ದು, ಕಾಲ ಕಳೆದಂತೆ ಮೂರು

ಪಾದಗಳಾಗಿ ‘ತಿವದಿ” ಎಂದು ಹೆಸರು ಪಡೆದಿರಬೇಕು. ತ್ರಿಪದಿಯ ಮೊದಲನೆಯ ಪಾದ ಹಾಗೂ ಎರಡನೆಯ ಪಾದ ಹಾಗೂ ಮೂರು ಗಣಗಳನ್ನಷ್ಟೇ ಉಳ್ಳ ಹಲವು ಗೀತೆಗಳು ಜನಪದ ಸಾಹಿತ್ಯದಲ್ಲಿ ಇಂದಿಗೂ ಉಳಿದು ಬಂದಿವೆ. ಕೋಲಾಟದ ಪದಗಳಲ್ಲೂ ತ್ರಿಪದಿಯ ಲಕ್ಷಣಗಳು ಕಂಡು ಬರುತ್ತವೆ.

ಎತ್ತೆಲ್ಕಾದೋ ಬುತ್ತೆಲ್ಲುಂಡೋ	೮	
ಎತ್ತಿಗ್ನೀರಾ ಕುಡ್ಸಿದ್ಯೋ	*	
ಎತ್ತಿಗ್ನೀರಾ ಕುಡ್ಸಿದ್ನನ್ಯೈ	೮	
ಮುತ್ತಿನ್ಸಾಗರ್ದೋೞ್ಳ್ಯಾಗ್ಯೇ	೭	=೨೩

ಕೋಲಾಟಗಾರರು ಹೇಳುವಂತೆಯೆ ಬರೆದಿರುವ ಈ ತ್ರಿಪದಿಯಲ್ಲಿ ಕೇವಲ ೨೩ ಅಕ್ಷರಗಳಿವೆ.

ಆವೆಲ್ಕಾದೋ ಹೂವೆಲ್ಮುಡ್ದ್ಯೋ
ಆವಿಗ್ನೀರಾ ಕುಡ್ಸಿದ್ಯೋ
ಆವಿಗ್ನೀರ ಕುಡ್ಸಿದ್ನನ್ಯೈ
ಹೂವಿನ್ಸಾಗರ್ದೋೞ್ಳ್ಯಾಗೇ

ಇದುವರೆಗೆ ದೊರಕಿರುವ ತ್ರಿಪದಿಗಳಲ್ಲೆಲ್ಲಾ ಇವೇ ಅತ್ಯಂತ ಕಡಿಮೆ ಅಕ್ಷರದ ತ್ರಿಪದಿಗಳು. ಈ ತ್ರಿಪದಿಗಳು ಪ್ರಶ್ನೋತ್ತರ ರೂಪದಲ್ಲಿವೆ. ಎತ್ತನ್ನು (ಅವನ್ನೂ) ಎಲ್ಲಿ ಕಾದೆ. ಬುತ್ತಿಯನ್ನು ಎಲ್ಲಿ ಉಂಡೆ, ಎತ್ತಿಗೆ ನೀರನ್ನೆಲ್ಲಿ ಕುಡಿಸಿದೆ–ಎನ್ನುವುದು ಪ್ರಶ್ನೆ. ಅದಕ್ಕೆ ‘ಮುತ್ತಿನ ಸಾಗರದ ಹೊಳೆಯಾಗೆ’ ಹೂವಿನ ಸಾಗರದ ಹೊಳೆಯಾಗಿ’ ಎನ್ನುವುದು ಉತ್ತರ. ‘ನನ್ನಯ್ಯಾ’ ಎನ್ನುವುದು ಪ್ರಶ್ನೆ ಕೇಳುವವನಿಗೂ ಉತ್ತರ ಹೇಳುವವನಿಗೂ ಇರುವ ಸಂಬಂಧವನ್ನು ಸೂಚಿಸುವ ಶಬ್ದ.

ಶುದ್ಧ ತ್ರಿಪದಿ

ತ್ರಿಪದಿಯಲ್ಲಿ ೧೦ ಗಣಗಳಿದ್ದರೆ ಅದು ಶುದ್ಧ ತ್ರಿಪದಿ ಎನಿಸುವುದು. ಶುದ್ಧ ತ್ರಿಪದಿಯನ್ನು ಬೇರೆ ಬೇರೆ ದನಿಯಲ್ಲಿ ಹಾಡಿದಾಗ ಅದರ ಸ್ವರೂಪದಲ್ಲಿ ಬದಲಾವಣೆಯಾಗುವುದಿಲ್ಲ. ಆದರೆ ಪುನರಾವರ್ತನೆಯ ರೀತಿಯಲ್ಲಿ ವ್ಯತ್ಯಾಸ ಮಾಡಲಾಗುತ್ತದೆ.

ಪ್ರಬುದ್ಧ ತ್ರಿಪದಿ

ತ್ರಿಪದಿಯನ್ನು ಹಾಡುವಾಗ ೨ನೆಯ ಸಾಲಿನ ೩ನೆಯ ಗಣಕ್ಕೆ ತನಿಸೊಲ್ಲಿನ ಸ್ಥಾನದಲ್ಲಿಯೂ, ೩ನೆಯ ಸಾಲಿನ ಕಡೆಯ ಗಣಾಂತರದಲ್ಲಿಯೂ ಒಂದೋ ಎರಡೋ ಹೊಸ ಶಬ್ದ(ಪದ)ಗಳನ್ನು ಸೇರಿಸಿಕೊಂಡು ಹಾಡುವುದು ವಿಶೇಷವಾಗಿ ಪ್ರಚಾರದಲ್ಲಿದೆ. ಹಾಗೆ ಹೊಸ ಶಬ್ದವನ್ನು ಸೇರಿಸಿಕೊಂಡು ಹಾಡಿದ ಮೇಲೆಯೇ ಪುನರಾವರ್ತನೆ ಬರುತ್ತದೆ. ಹೀಗೆ ಶುದ್ಧ ತ್ರಿಪದಿಗೆ ಹೊಸ ಪದ ಅಥವಾ ಪದಗಳನ್ನು ಸೇರಿಸಿಕೊಂಡು ಹಾಡಿದಾಗ, ಅಂಥ ತ್ರಿಪದಿಗೆ ಪ್ರಬುದ್ಧ ತ್ರಿಪದಿ ಎಂದು ನನ್ನ ಅಭಿಪ್ರಾಯ. ಹೊಸ ಶಬ್ದವನ್ನು ಸೊಲ್ಲು ಸೊಲ್ಲಿಗೂ ಸೇರಿಸಿಕೊಂಡು ಹಾಡಿದಾಗ ತ್ರಿಪದಿಯ ರಾಗ, ಧಾಟಿ, ಓಟದಲ್ಲಿ ವೈವಿಧ್ಯತೆ ಮೂಡುತ್ತದೆ. ನಾರಿ, ಸುವ್ವಿ, ಸುಯ್ಯೋ, ಶಿವಶಿವ, ಏ ಗಿಣಿಯೇ, ಯಾರಮಗನಮ್ಮಾ–ಹೀಗೆ ಶುದ್ಧ ತ್ರಿಪದಿಗೆ ಸೇರಿಸಿಕೊಂಡು ಹಾಡುವ ಹೊಸಪದಗಳು, ನಮ್ಮ ಜನಪದಗೀತೆಗಳಲ್ಲಿ ವಿಫುಲವಾಗಿವೆ. ಉದಾ: ಊರ ಮೇಲೇ ದೂರವೇನೋ: ತಮ್ಮಯ್ಯ

ಏ ಗಿಣಿಯೇ ಗಿಣಿಯೇ	
ಗ್ಯಾನಿಲ್ಲವೇನೋ ನನ್ನ ಮೇಲೇ	“
ಗ್ಯಾನಿಲ್ಲವೇನೋ ನನ ಮೇಲೇ ಗೌರಿಯ	“
ಕಾಯ್ ಹೆಂಗೆ ಒಡದೋ ಕಡು ಜಾಣಾ	“

ಪಲ್ಲವಿಗಳು

ಪ್ರಬುದ್ಧ ತ್ರಿಪದಿಯನ್ನು ಹಾಡುವಾಗ ಸೇರಿಸಿಕೊಂಡು ಹೇಳುವ ಹೊಸ ಪದಕ್ಕೆ ಅಥವಾ ಪದ ಸಮೂಹಕ್ಕೆ "ಪಲ್ಲವಿ" ಎಂದು ಹೆಸರು. ಕುಟ್ಟುವಾಗ, ಬೀಸುವಾಗ, ಕೋಲಾಟವಾಡುವಾಗ, ಒಸಗೆ ಸೋಬಾನೆ ಪದ ಹೇಳುವಾಗ, ಕಳೆ ಕೀಳುವಾಗ, ನಾಟಿ ಮಾಡುವಾಗ, ಕಥೆ ಹೇಳುವಾಗ ತ್ರಿಪದಿಗೆ ಹಲವು ರೀತಿಯ ಪಲ್ಲವಿಗಳನ್ನು ಸೇರಿಸಿ, ಹಾಡಿನ ದನಿ ಧಾಟಿಯಲ್ಲಿ ಹೆಚ್ಚಿನ ವೈವಿಧ್ಯತೆ ಸಾಧಿಸಲಾಗಿದೆ. ಪಲ್ಲವಿಯ ಧಾಟಿಯೇ ತ್ರಿಪದಿಯ ಧಾಟಿಯಾಗಿದ್ದು, ಹಲವು ಸಂದರ್ಭಗಳಲ್ಲಿ ಪಲ್ಲವಿಯ ತ್ರಿಪದಿಯಾಗಿಯೇ ಇರುವುದೂ ಕಂಡುಬರುತ್ತದೆ.

ಸೊಲ್ಲು, ಅರೆಸೊಲ್ಲು, ಸವಿಸೊಲ್ಲು ಮತ್ತು ತನಿ ಸೊಲ್ಲು

ಗ್ರಾಮೀಣ ಜನರು ತ್ರಿಪದಿಯನ್ನು ಹಲವು ಧಾಟಿಗಳಲ್ಲಿ ಹಾಡುತ್ತಾರೆ. ಹಾಗೆ ಹಾಡುವಾಗ ತ್ರಿಪದಿಯ ರಚನೆಯಲ್ಲಿ ಕೆಲವು ವ್ಯತ್ಯಾಸಗಳು ಉಂಟಾಗುತ್ತವೆ ಅಂಥ ವ್ಯತ್ಯಾಸಗಳನ್ನು ಗುರುತಿಸಲು ಸಹಾಯವಾಗುವಂತೆ ಸೊಲ್ಲು, ಅರೆಸೊಲ್ಲು, ಸವಿಸೊಲ್ಲು, ತನಿಸೊಲ್ಲುಗಳೆಂಬ ಹೆಸರುಗಳನ್ನು ಮತಿಘಟ್ಟ ಕೃಷ್ಣಮೂರ್ತಿಯವರು ಪ್ರಥಮಬಾರಿಗೆ ರೂಪಿಸಿದರು. ಅದರ ಉದಾಹರಣೆಗಳು ಇಂತಿವೆ.

ಸೊಲ್ಲು: "ಕಲ್ ಹೂಡಿ ನೆನೆದೇವು ಕಲ್ಯಾಣದಯ್ಯಾನ
ಬಿಲ್ ಬಾಣಾದ ಬಿದಿರೇ(ಯ)–ರಂಗಯ್ಯಾನ
ಸೊಲ್ಲು ಸೊಲ್ಲಿಗೇ ನೆನೆದೇವೇ" ॥

ಎಂದು ಹಳ್ಳಿಯ ಗರತಿ ರಾಗಿ ಬೀಸುವ ಕಾಯಕ ಆರಂಭಿಸುವಾಗ ಪ್ರಾರ್ಥನೆ ಸಲ್ಲಿಸುತ್ತಾಳೆ. ಇಲ್ಲಿ ಬಂದಿರುವ "ಸೊಲ್ಲು ಸೊಲ್ಲೀಗೆ" ಎಂಬ ಪದಗಳಿಗೆ ತಮ್ಮದೇ ಆದ ವಿಶಿಷ್ಟ ಅರ್ಥವಿದೆ. 'ಸೊಲ್ಲು' ಎಂದರೇನು? ತ್ರಿಪದಿಯನ್ನು ಹಾಡುವಾಗ ಧಾಟಿಯ ಓಟವನ್ನು ತಡೆದು ನಿಲ್ಲಿಸುವ ಸ್ಥಾನಕ್ಕೆ "ಸೊಲ್ಲು" ಎಂದು ಇಲ್ಲಿಯ ಅಭಿಪ್ರಾಯ.

ಅರೆಸೊಲ್ಲು ಸೊಲ್ಲಿನ ಸ್ಥಾನದಲ್ಲಲ್ಲದೆ, ತ್ರಿಪದಿಯ ೪ನೆಯ ಮತ್ತು ೮ನೆಯ ಗಣಾಂತರದಲ್ಲೂ ಹಾಡಿನ ಓಟ ನಿಲ್ಲುತ್ತದೆ.

ಉದಾ: ರಾಗಿ ಬೀಸೋ ಕಲ್ಲೆ ರಾಜಾನ ಒಡಿಗಲ್ಲೇ ।
ರಾಯ ಅಣ್ಣಯ್ನ ಅರಮನೆ ॥
ರಾಯ ಅಣ್ಣಯ್ನ ಅರಮನೆ ರಾಗೀಕಲ್ಲೇ।
ರಾಜ ಬೀದೀಗೇ ದನಿದೋರೇ॥
ತನಿಸೊಲ್ಲು

ತ್ರಿಪದಿಯನ್ನು ಹಾಡುವಾಗ ಎರಡನೆಯ ಪಾದದ ಪುನರಾವರ್ತನೆಯಲ್ಲಿ ಸೇರಿ ಬರುವ ೮ನೆಯ ಗಣಕ್ಕೆ 'ತನಿಸೊಲ್ಲು' ಎಂದು ಹೆಸರಿಸಬಹುದು. ತನಿಸೊಲ್ಲು ತ್ರಿಪದಿಯ ಎರಡು ಮತ್ತು ಮೂರನೆ ಪಾದಗಳಿಗೆ ಸಂಬಂಧ ಕಲ್ಪಿಸುವ ಪ್ರಮುಖ ಕೊಂಡಿ.

ಕಲ್ಹೂಡಿ ನೆನೆದೇವೆ ಕಲ್ಯಾಣದಯ್ಯಾನಾ
ಬಿಲ್ಲು ಬಾಣಾದ ಬಿದಿರೇಯಾ–ರಂಗಯ್ಯಾನಾ
ಸೊಲ್ಲು ಸೊಲ್ಲಿಗೇ ನೆನೆದೇವೇ

ಬೀಸುವಾಗ ಹೇಳುವ ಈ ತ್ರಿಪದಿಯನ್ನು ಮೊದಲನೆಯ ಸೊಲ್ಲಿನ ತನಕ ಹೇಳಿ ಸ್ವಲ್ಪ ಕಾಲ ನಿಲ್ಲಿಸಿದ್ದು, ಅನಂತರ ಹಾಡನ್ನು ಮುಂದುವರಿಸಿದಾಗ ೮ನೆಯ ಗಣ 'ರಂಗಯ್ಯಾನಾ' ಎಂಬ ಪದವನ್ನು ಸೇರಿಸಿಕೊಂಡು "ಸೊಲ್ಲು ಸೊಲ್ಲಿಗೆ ನೆನೆದೇವೆ" ಎಂದು ಹಾಡನ್ನು ಪೂರ್ಣ ಮಾಡಬೇಕಾಗುತ್ತದೆ.

ತ್ರಿಪದಿಯಲ್ಲಿ ತನಿಸೊಲ್ಲಿನ ಪ್ರಾಮುಖ್ಯತೆ ಎಂದರೆ ಅದು ೨ ಮತ್ತು ೩ನೇ ಪಾದಗಳಿಗೆ ಸಂಬಂಧ ಕಲ್ಪಿಸುವ ಕೊಂಡಿ;ಭಾವನೆಗಳ ಸಮನ್ವಯ ಸಾಧಿಸುವ ಸಂಬಂಧಿ. ಇದೇ ತ್ರಿಪದಿ ಜೀವಾಳ.

೬. ಜನಪದ ಸಂಗೀತ

ಜನಪದ ಸಂಗೀತ ಎಂದರೆ ಹಳ್ಳಿಯ ಹಾಡುಗಳ ಸಂಗೀತ. ಅದರ ಲಕ್ಷ್ಯ ಲಕ್ಷಣ ಎರಡೂ ಹಾಡುಗಳನ್ನು ಹಾಡಿದಾಗ, ಕೇಳಿದರೆ ಮೇಲ್ನೋಟಕ್ಕೇ ತೋರುವ ಅಂಶಗಳೂ ಮುಖ್ಯ. ಈ ಅಂಶಗಳು ಸಂಶೋಧನೆಯ ದಾರಿಯನ್ನು ಹಾಕಿಕೊಡುತ್ತವೆ. ಆಳವಾದ ಅಧ್ಯಯನದಿಂದ ಪ್ರಕಾಶಗೊಳ್ಳುವ ಅಂಶಗಳೂ ಅನೇಕ ಇವೆ. ಹಳ್ಳಿಯ ಹಾಡುಗಳ ಸಂಗೀತದ ಗತಿ ವಿಧಿ ಆಯಾಮಗಳೇನು ಎನ್ನುವುದರ ಬಗೆಗೆ ಮತ್ತಷ್ಟು ಸಾಮಗ್ರಿ ಇಂತಹ ಆಳವಾದ ಅಧ್ಯಯನದಿಂದ ದೊರಕುತ್ತದೆ.

ಸಮುದಾಯದ ಸಂಗೀತ:

ಹಳ್ಳಿಯ ಹಾಡುಗಳು ಸಮುದಾಯದ ಸಂಗೀತ. ಈ ಹಾಡುಗಳ ಹಾಡಿಕೆ ಸಾಂದರ್ಭಿಕವೂ ಹೌದು. ಜಾತಿ ಕುಲಗಳಿಗೆ ಅಂಟಿಕೊಂಡು ಪ್ರತ್ಯೇಕ ಜಾಡುಗಳನ್ನು ಹಿಡಿದ ಹಾಡುಗಳು ಇವು. ಆದ್ದರಿಂದ, ಈ ಹಾಡುಗಳನ್ನು ಹಾಡುವ ಜನ ಸಮುದಾಯವನ್ನು ಕುರಿತ ಸಾಮಾಜಿಕ ನೋಟ ಈ ಸಮುದಾಯ ಸಂಗೀತದ ವಿಶ್ಲೇಷಣೆಗೆ ಅತ್ಯಗತ್ಯ ಅನಿವಾರ್ಯ. ಇದರಲ್ಲಿ ಭಾಷೆಯ ಗಣನೆಯೂ ಮುಖ್ಯವೇ. ಎಲ್ಲ ದೇಶಗಳಲ್ಲೂ ಭಾಷೆ, ನುಡಿಗಟ್ಟು ಪದ್ಯದ ಬಂಧ ಮೊದಲು ಸಂಗ್ರಾಹಕರ ಗಮನಕ್ಕೆ ಬಂದು ನಂತರ ಸಂಗೀತದ ವಿಶ್ಲೇಷಣೆಯ ಕಡೆಗೆ ಗಮನ ಹರಿದಿರುವುದು ಸ್ಪಷ್ಟವಾಗಿದೆ. ಸಾಹಿತ್ಯದ ಒಲವುಳ್ಳ ವ್ಯಕ್ತಿಗಳು ಜಾನಪದದ ಅಧ್ಯಯನವನ್ನು ಪ್ರಾರಂಭಿಸಿದ್ದು ಇದಕ್ಕೆ ಕಾರಣ. ನಂತರ, ಮಾನವ ವಿಜ್ಞಾನ ಶಾಸ್ತ್ರಗಳೂ, ಸಮಾಜ ವಿಜ್ಞಾನಿಗಳೂ ಉತ್ಸಾಹ ತೋರಿಸಿದರು. ಶಾಸ್ತ್ರೀಯ ಸಂಗೀತಕ್ಕೆ ಮಾತ್ರವೇ ಅಲ್ಲ, ಲಕ್ಷ್ಯ ಲಕ್ಷಣಗಳ ಅನ್ವಯ, ಹಳ್ಳಿಯ ಹಾಡುಗಳಲ್ಲೂ ತನ್ನದೇ ಆದ ಲಕ್ಷ್ಯ ಲಕ್ಷಣಗಳ ಅನ್ವಯ, ಹಳ್ಳಿಯ ಹಾಡುಗಳಲ್ಲೂ ತನ್ನದೇ ಆದ ಲಕ್ಷ್ಯ ಲಕ್ಷಣಗಳನ್ನು ಗುರುತಿಸಬೇಕು ಎಂದುಕೊಂಡದ್ದು ಅನಂತರದಲ್ಲಿ. ಮಾನವ ಕುಲ ಸಂಗೀತ ಶಾಸ್ತ್ರಿಗಳ (Ethnomusicologists) ಉಗಮವಾದ ನಂತರ. ಸಂಗೀತದಲ್ಲಿ ಭಾಷೆಯ ಕಟ್ಟನ್ನು ಮೀರಿ ಭಾಷೆ ಬಾರದವರನ್ನೂ ಆಕರ್ಷಿಸಬಲ್ಲ ಕೆಲವು ಅಂಶಗಳಿವೆ. ಈ ಅರ್ಥದಲ್ಲಿ ಸಂಗೀತ ಸಾರ್ವತ್ರಿಕವಾಗಬಲ್ಲದು. ವಿವಿಧ ಸ್ಥರಗಳ, ವಿವಿಧ ರೀತಿಯ ಸಂಗೀತಗಳಿಗೆ ಬೇರೆ ಬೇರೆ ಆಯಾಮಗಳಿರುವುದೂ, ಬೇರೆ ಬೇರೆ ಲಕ್ಷಣಗಳಿರುವುದೂ ಸ್ಪಷ್ಟ. ಖಚಿತವಾಗಿ ಯಾವುದೇ ಒಂದು ಪ್ರಕಾರಕ್ಕೆ ಸೇರುವ ಸಂಗೀತವನ್ನು ಕೇಳಿದಿರೆಂದಿಟ್ಟುಕೊಳ್ಳಿ. ಇದು ಶಾಸ್ತ್ರೀಯ ಸಂಗೀತ, ಇದು ಲಲಿತ ಸಂಗೀತ, ಇದು ಜನಪದ ಸಂಗೀತ ಎಂದು ತಕ್ಷಣವೇ ಮನವರಿಕೆಯಾಗುವುದು ಸಹಜ. 'ಇದು ಏಕೆ ಹೀಗೆ?' ಎನ್ನುವುದು ಮಾನವಕುಲ ಸಂಗೀತ ಶಾಸ್ತ್ರಜ್ಞರ ಅನ್ವೇಷಣೆಯ ವಸ್ತು. ಇಂತಹ ಅಧ್ಯಯನಗಳ ಮೌಲ್ಯ ಮಾಪನದಲ್ಲಿ ಬಳಸಿಕೊಳ್ಳಲು ಸಿಕ್ಕಿದ ಮೂಲ ಸಾಧನವಾದರೂ ಏನು? ನಮ್ಮ ದೇಶದ ಬಗೆಗೆ ಬರೆಯುತ್ತಿದ್ದೇನೆ. ಹಾಗೆ ಬಳಸಿದ ಮೂಲಮಾನಗಳು ಶಾಸ್ತ್ರೀಯ ಸಂಗೀತದ ನುಡಿಗಟ್ಟು, ಅದರ ಲಕ್ಷಣ ಗ್ರಂಥಗಳಲ್ಲಿ ಬರೆದಿಟ್ಟ ಪೂರ್ವಾಭಿಪ್ರಾಯಗಳು. ಅವನ್ನೇ ಅವಲಂಬಿಸಿರುವ ತನಕ ಹಳ್ಳಿಯ ಹಾಡುಗಳ ಸಂಗೀತದ ಅಧ್ಯಯನದಲ್ಲಿ ಹೇಳಿಕೊಳ್ಳುವಂತಹ ಬೆಳವಣಿಗೆ ಕಾಣುವುದು ಕಷ್ಟ ಸಾಧ್ಯವೇ. ಮೂಲಮಾನವಾಬಿ ಕೆಲವು ಅಂಶಗಳನ್ನು ಉಪಯೋಗಿಸಿಕೊಂಡು, ಆಯಾ ಸಂಗೀತಕ್ಕೆ ಇಂದಿಗಿರುವ ಆಯಾಮಗಳನ್ನು ಗುರುತಿಸುತ್ತ ಹೊರಟಾಗ ಮಾತ್ರ ಗಮನಾರ್ಹ ಕೆಲಸ ನಡೆಯಲು ಸಾಧ್ಯ.

ಪುಸ್ತಕಗಳನ್ನು ಬಿಟ್ಟು ಹಾಡುಗಾರರ ಬಳಿಗೆ ಹೋದಾಗ ಅನೇಕ ಸಂಗತಿಗಳು ಕಿವಿಗೆ ಕೇಳಿಸುತ್ತವೆ. ಮನಸ್ಸಿಗೆ, ಅಂತಃಪ್ರಜ್ಞೆಗೆ ವಿದಿತವಾಗುತ್ತವೆ. ಈ ಅನಿಸಿಕೆಗಳು ವಿಶ್ಲೇಷಣೆಯ ಮೂಸೆಯಲ್ಲಿ ಕರಗಿದಾಗ, ಪೂರ್ವಾಭಿಪ್ರಾಯಗಳಿಗೆ ವಿರುದ್ಧವೂ ಪೂರಕವಾದವೂ ಆದ ಅನೇಕ ವಿಷಯಗಳು ಬೆಳಕಿಗೆ ಬರುವ ಅವಕಾಶಗಳುಂಟು. ವಿಶ್ಲೇಷಣೆಗಿಂತ ಮೊದಲಿದ್ದ ವಿಚಾರಧಾರೆಯಂತೆಯೇ ಅಲ್ಲದೆ, ಬೇರೆಯೇ ಜಾಡಿನಲ್ಲಿ ವಿಚಾರಗಳು ರೂಪುಗೊಳ್ಳಬಹುದು.

ಹೀಗೆ, ಈ ಹಂತದಲ್ಲಿ ನಡೆಯುವ ಕ್ರಿಯೆ ಎರಡು ದಾರಿಯನ್ನು ಸಾರಬಹುದು.

1. ಹಾಡಿನ ಸಾಮಾಜಿಕ, ಸಾಂಧರ್ಭಿಕ, ಅರ್ಥಸಂಬಂಧವಾದ, ಸಾಹಿತ್ಯ ಸಂಬಂಧವಾದ ಅಧ್ಯಯನ.
2. ಹಾಡಿನ ಸಂಗೀತದ ಲಕ್ಷಣದ, ಲಯವಿನ್ಯಾಸದ, ಜೊತೆಗೂಡುವ ವಾದ್ಯಗಳ, ನಾಟ್ಯದ ಹಾಗೂ ಇತರ ಸಂಗೀತಿಕ ಅಂಶಗಳ ಅಧ್ಯಯನ.

ಈ ಎರಡರಲ್ಲೂ ವಿವಿಧ ಪದರಗಳುಂಟು ಹಾಗೂ ಎರಡು ಜಾಡುಗಳೂ ಒಂದಕ್ಕೊಂದು ಪೂರಕವಾಗಬೇಕಾದದ್ದೂ ಅವಶ್ಯಕ.

ಪ್ರಾತಿನಿಧಿಕ ಮಾದರಿಗಳನ್ನು ಅನುಸರಿಸಿದ ಅಧ್ಯಯನ

ಈಗಾಗಲೇ ಹೇಳಿದಂತೆ, ಯಾವುದೇ ಅಧ್ಯಯನಕ್ಕಾಗಲೀ ಒಂದು ಮಿತಿ ಇರುತ್ತದೆ. ಬೃಹತ್ ಪ್ರಮಾಣದಲ್ಲಿ ಕೆಲಸ ಮಾಡಲು ಹಣಬೇಕು, ಕಾಲಬೇಕು. ಸರ್ಕಾರದ ಅಥವಾ ಖಾಸಗಿ, ಸಂಸ್ಥೆಗಳ ಬೆಂಬಲಬೇಕು. ಆದರೆ, ಎಲ್ಲರಿಗೂ ಇದು ಸಿಕ್ಕುವುದಿಲ್ಲ. ಇದು ವಿಜ್ಞಾನಯುಗ. ವೈಜ್ಞಾನಿಕವಾದ ಕ್ರಮಗಳಿಂದ ಈ ಮಿತಿಯಿಂದುಂಟಾಗುವ ಅನೇಕ ತೊಂದರೆಗಳನ್ನು ಪರಿಹರಿಸಿಕೊಳ್ಳಬಹುದು.

ಅನ್ನ ಆಗಿದೆಯೇ ಎಂದು ತಿಳಿಯಲು ಒಂದು ಅಗುಳನ್ನು ಹಿಚುಕಿ ನೋಡಿದರೆ ಸಾಕು. ಆಧುನಿಕ ವಿಜ್ಞಾನ ತನ್ನದಾಗಿಸಿಕೊಂಡ 'ಪ್ರಾತಿನಿಧಿಕ ಮಾದರಿ' ಅಥವಾ 'ನಮೂನೆ'ಗಳನ್ನು ಆಧರಿಸಿಕೊಂಡು ಅಧ್ಯಯನ ಮಾಡುವ ತತ್ವವನ್ನು ಈ ಗಾದೆ ಪ್ರತಿನಿಧಿಸುತ್ತದೆ. ಇಡೀ ಜನಪದ ಸಮುದಾಯದ ಸಂಪರ್ಕ ಸಾಧ್ಯವಿಲ್ಲದಾಗಲೂ, ಸಾಧ್ಯವಾದಾಗಲೂ, ಪ್ರಾತಿನಿಧಿಕ ಮಾದರಿ ನಮೂನೆಗಳನ್ನು ಆಧರಿಸಿ ಸಂಶೋಧನೆ ನಡೆಸುವುದು ಪರಿಪಾಠವಾಗಿದೆ. ಇದರಿಂದ ಸಾರ್ವತ್ರಿಕ ಸತ್ಯಗಳನ್ನು ಕಂಡು ಹಿಡಿಯಲು ಸಾಧ್ಯ. ಇಂತಹ ಅಧ್ಯಯನ ಸಾರ್ಥಕವಾದ ಅಧ್ಯಯನವಾಗಬೇಕಾದರೆ:

(ಅ) ನಮೂನೆಗಳು ನಿಜವಾಗಿಯೂ 'ಪ್ರಾತಿನಿಧಿಕ' ವಾಗಿರುವಂತಹ ಆಯ್ಕೆ ಬಹುಮುಖ್ಯ.

(ಆ) ಅಧ್ಯಯನದ ಉದ್ದಿಷ್ಯ ಏನು ಎನ್ನುವುದನ್ನು ಎರಡರ್ಥ ಬರದಂತೆ ನಿರ್ಧರಿಸಿಕೊಳ್ಳುವುದು ಅತ್ಯವಶ್ಯಕ.

(ಇ) ಆರಿಸಿಕೊಂಡ ಮಾದರಿ ಗುಂಪುಗಳು ಬಹು ಹೆಚ್ಚಾದರೆ, ಸಂಖ್ಯೆಗಳ ದೆಸೆಯಿಂದ ವಿಶ್ಲೇಷಣೆ ಕಠಿಣವಾದಾಗ ನಿರ್ಣಯಕ್ಕೆ ಬರಲು statistical method ಅನ್ನು ಉಪಯೋಗಿಸಬಹುದು.

ಮುಖ್ಯವಾದ ಮಾತೆಂದರೆ, ಸಂಗೀತದಂತಹ ಸೃಜನಾತ್ಮಕ ವಿಷಯದ ಅಧ್ಯಯನದಲ್ಲೂ ಈ ಮಾರ್ಗಗಗಳನ್ನು ಉಪಯೋಗಿಸುವುದು ಸಾಧ್ಯ. ಸಂಶೋಧಕನಿಗೆ ಅಧ್ಯಯನದ ವಿಷಯ ವಸ್ತುವಿನ ಬಗ್ಗೆ ಸಾಕಷ್ಟು ನಿರ್ಣಯ ಜ್ಞಾನ ಇರಬೇಕು, ಸಹೃದಯತೆ ಇರಬೇಕು ಎನ್ನುವುದು ಅತಿಮುಖ್ಯ.

ಅಧ್ಯಯನದ ಉದ್ದಿಷ್ಯ

ಅಧ್ಯಯನದ ಉದ್ದಿಷ್ಯದ ಬಗ್ಗೆ ಇನ್ನಷ್ಟೂ ವಿಚಾರ ಮಾಡುವುದು ಒಳ್ಳೆಯದು. ಒಂದೇ ಗುಂಪಿನ ಹಾಡುಗಳನ್ನು ಅನೇಕ ಉದ್ದಿಷ್ಯಗಳಿಂದ ಅಧ್ಯಯನ ಮಾಡುವುದು ಸಾಧ್ಯ. ಉದಾ:ರಾಗಿ ಬೀಸುವ ಪದಗಳನ್ನು ತೆಗೆದುಕೊಳ್ಳಿ. ಇದರ ಅಧ್ಯಯನಕ್ಕೆ ಎರಡು ಉದ್ದಿಷ್ಯಗಳನ್ನು ಗುರುತಿಸಬೇಕು.

(ಅ) ಇವನ್ನು ಹಾಡುವವರು ಯಾರು? ಎನ್ನುವುದನ್ನು ಗುರುತಿಸುವುದು

(ಆ) ಇವುಗಳ ಸಂಗೀತದ ಅಂಶಗಳೇನು ಎನ್ನುವುದನ್ನು ಗುರುತಿಸುವುದು

(ಅ) ವನ್ನು ಬಿಟ್ಟು (ಆ) ವನ್ನು ಮಾತ್ರವೇ ಕೈಗೆತ್ತಿಕೊಂಡವರೂ ಉಂಟು. 'ರಾಗಿ ಬೀಸುವ ಪದಗಳನ್ನು ಹಾಡುವವರು ಯಾರು?' ಎಂಬ ಪ್ರಶ್ನೆಯನ್ನು ಗಮನಿಸೋಣ. ಇದಕ್ಕೆ ಉತ್ತರ ಸರಳ ಎಂದು ನಾವು ಯೋಚಿಸಬಹುದು. 'ರಾಗಿಯನ್ನು ಬೀಸುವ ಹೆಂಗಸರು, ಈ ಉತ್ತರ ಸರಳ ಎಂದು ತೋರುತ್ತದೆ. ಆದರೆ ಅಲ್ಲಿಗೂ ಉತ್ತರ ಪೂರ್ಣವಾಗಲಿಲ್ಲ ಎನ್ನಿಸುತ್ತದೆ. 'ಇವರು ಹಳ್ಳಿಗಳಲ್ಲಿ ಇರುತ್ತಾರೆ. 'ಹಳ್ಳಿಯ ಪ್ರತಿಮನೆಯಲ್ಲೂ ಇರುತ್ತಾರೆ'. 'ರಾಗಿ ಬೀಸುವ ಎಲ್ಲ ಹೆಂಗಸರೂ ರಾಗಿ ಬೀಸುವ ಪದಗಳನ್ನು ಹಾಡುತ್ತಾರೆ' 'ರಾಗಿ ಬೀಸದವರೂ ಬೇರೆ ಸಂದರ್ಭಗಳಲ್ಲಿ ಈ ಹಾಡುಗಳನ್ನು ಹಾಡುತ್ತಾರೆ.' ಇವುಗಳೆಲ್ಲ ಸರಿಯುತ್ತರವೆ? ಇಷ್ಟಾಗಿ, 'ರಾಗಿ ಬೀಸುವ ಪದಗಳು' ಯಾವುವು? 'ರಾಗಿ ಬೀಸುವಾಗ ಹಾಡುವ ಪದಗಳು'ಎಂದಾದರೆ ಅವನ್ನು ಬೇರೆ ಯಾವಾಗಲೂ ಹಾಡುವುದಿಲ್ಲವೆ? ಎಂಬ ಪ್ರಶ್ನೆ ಏಳುತ್ತದೆ. 'ಒಂದು ಜಾತಿಯ ಜನರ ಮನೆಗಳಲ್ಲಿ ರಾಗಿ ಕಲ್ಲಿನಲ್ಲಿ ರಾಗಿ ಬೀಸುವಾಗ ಹಾಡುವ ಹಾಡುಗಳು ಮಾತ್ರ', 'ಒಂದು ಪದ್ಧತಿಯಲ್ಲಿ ಮಾತ್ರ ಹಾಡಲ್ಪಡುತ್ತವೆ' ಇತ್ಯಾದಿ. ಅತ್ಯಂತ ಸರಳ ಎನ್ನಿಸುವ ಪ್ರಶ್ನೆಯೂ ಸಂಶೋಧನೆಯ ಭೂತಗನ್ನಡಿಯ ಅಡಿಯಲ್ಲಿ ಕ್ಲಿಷ್ಟತೆಗೆ ಪಕ್ಕಾಗಬಹುದು. ಹಾಗಾಗಿ ಸಂಶೋಧನಕಾರ ಯಾವುದೇ ಒಂದು ಬಿಂದುವಿನಿಂದ ತನ್ನ ಮಟ್ಟಿಗಾದರೂ ಎರಡರ್ಥ ಬರದಂತೆ ದತ್ತ ವಿಷಯಗಳನ್ನೂ ಅವುಗಳ ಸೀಮಾರೇಖೆಯನ್ನು ಗುರುತಿಸಿಕೊಳ್ಳಬೇಕು. ವಿಷಯದ ಅಧ್ಯಯನ ಸಾಕಷ್ಟು ನಡೆದಿದ್ದರೆ, ಸ್ವೀಕೃತವಾದ ನಿರ್ಣಯಗಳ ದೃಷ್ಟಿಯಿಂದ ತನ್ನ ಆಲೋಚನೆಗಳನ್ನು ಒರೆಹಚ್ಚಿ ನೋಡಬೇಕು. ಸ್ವೀಕೃತನಿರ್ಣಯಗಳಿಗೂ ತನ್ನ ಅನಿಸಿಕೆಗಳಿಗೂ ವ್ಯತ್ಯಾಸ ಬಂದಾಗ ಮತ್ತಷ್ಟು ಶ್ರದ್ಧೆಯಿಂದ ತನ್ನ ಉದ್ದಿಷ್ಯವನ್ನು ಪ್ರಶ್ನೆಗಳನ್ನೂ ಖಚಿತವಾಗಿ ರೂಪಿಸಿಕೊಳ್ಳಬೇಕು.

ಹೀಗೆ, ಮೇಲ್ನೋಟಕ್ಕೆ ಸರಳವಾಗಿ ಕಾಣುವ ಪ್ರಶ್ನೆ ಆಳವಾದ ಅಧ್ಯಯನಕ್ಕೆ ಪಕ್ಕಾದಾಗ ಅನೇಕಾನೇಕ ರೀತಿಗಳಲ್ಲಿ ಪರಿವರ್ತಿತಗೊಳ್ಳುತ್ತದೆ. ವಿವಿಧತೆಗೆ ಪಕ್ಕಾಗುತ್ತದೆ. ಉತ್ತರವೂ ಅಷ್ಟೆ.

ಒಂದು ಗುಂಪಿಗೆ ಸೇರಿದ ಹಾಡುಗಳನ್ನು ಗುರುತಿಸಿದೆವೆಂದಿಟ್ಟುಕೊಳ್ಳಿ–ನಂತರ, ಅವುಗಳ ಸಾಮಾನ್ಯ ರೂಪವನ್ನು ಗುರುತಿಸುವುದು ಮುಖ್ಯ ಹೆಜ್ಜೆ. ಒಂದು ಗುಂಪಿನ ಹಾಡುಗಳಿಗೆ ಒಂದು ಸಾಮಾನ್ಯರೂಪ ಇರುತ್ತದೆ ಎಂದು ನಿರ್ಣಯಿಸುವುದೇ ಒಂದು ಮುಖ್ಯ ಹೆಜ್ಜೆಯಾಗಬಲ್ಲದು. ಪರಂಪರೆಯನ್ನು ಹಳ್ಳಿಯಹಾಡನ್ನು ಅರಿತು ಅರ್ಥಮಾಡಿಕೊಂಡು ಬಂದವರು ಇದನ್ನು ಗುರುತಿಸುವ ರೀತಿಗೂ ಆ ಸಂಸ್ಕೃತಿಯ ಹೊರಗಿನಿಂದ ಬಂದವರು ಗುರುತಿಸುವ ರೀತಿಗೂ ಬಹಳ ವ್ಯತ್ಯಾಸವಿರುತ್ತದೆ. ಉದಾಹರಣೆಗೆ ಯುರೋಪಿನ ವಿವಿಧ ಹಳ್ಳಿಯ ಹಾಡುಗಳ ಗುಂಪುಗಳನ್ನು ಅದೇ ಸಂಸ್ಕೃತಿಯಲ್ಲಿ ಬೆಳೆದು ಬಂದ ಯುರೋಪಿಯನ್ನರು ಸಹಜವಾಗಿ ಸರಳವಾಗಿ ಗುರುತಿಸಬಲ್ಲವರಾದರೆ, ಬೆಂಗಳೂರಿನಲ್ಲಿ ಬೆಳೆದ ನಾನು ಅದನ್ನು ಗುರುತಿಸಲು ಬೇರೆಯೇ ಮಾರ್ಗಗಳನ್ನು ಅನುಸರಿಸಬೇಕಾಗುತ್ತದೆ. ಆದರೂ ಯೂರೋಪಿನ ಒಂದು ಗುಂಪಿನ ಹಾಡುಗಳನ್ನು ಗುರುತಿಸುವಲ್ಲಿ ನಾವಿಬ್ಬರೂ ಸಫಲರಾಗಬೇಕು–ಆ ಗುಂಪುಗಳ ಪರಿಚಯ ನಮಗೆ ಒಂದಲ್ಲಾ ಒಂದು ರೀತಿಯಲ್ಲಿ ಇದ್ದರೆ, ಆ ಗುಂಪಿಗೆ ಇರುವ ಸಾಮಾನ್ಯ ವಿಷಯ ವಿವರಗಳ ಬಗೆಗೆ ಸಹೃದಯತೆ ಇದ್ದರೆ ಮೇಲಿನ ಪ್ರಶ್ನೆಯ ಸಂದರ್ಭವನ್ನು ಕುರಿತು ಹೇಳವುದಾದರೆ ಎಂದರೆ, ರಾಗಿ ಬೀಸುವ ಪದಗಳನ್ನು ಕುರಿತು ಯೋಚಿಸುವುದಾದರೆ, ಇಲ್ಲಿಯ ಸಂಶೋಧಕರೂ ಹೊರಗಿನ ಸಂಶೋಧಕರೂ ಅವುಗಳ ಅಧ್ಯನ ಮಾಡಿ, ಅಧ್ಯಯನಕ್ಕೆ ವಿಧಿ ನಿಯಮಗಳನ್ನು ರೂಪಿಸಿಕೊಂಡು ಪರಾಮರ್ಶೆ ಮಾಡಲು ಸಾಧ್ಯ. ಖಚಿತ ಸತ್ಯಗಳನ್ನು ಕಂಡುಕೊಳ್ಳಲು ಸಾಧ್ಯ. ಹಳ್ಳಿಯಲ್ಲೇ ಹುಟ್ಟಿ, ಬೆಳೆದು, ಈ ಹಾಡುಗಳ ಬಗೆಗೆ ಕಳಕಳಿ ಬೆಳೆಸಿಕೊಂಡವರಂತೆಯೇ, ಹೊರಗಿನಿಂದ ಬಂದ ಸಂಶೋಧಕನಿಗೆ ಸಾಂದರ್ಭಿಕವೂ ಅನಿವಾರ್ಯವೂ ಆದ ಪೂರ್ವಾಭಿಪ್ರಾಯಗಳಿಲ್ಲದ್ದರಿಂದ ಮೌಲ್ಯಮಾಪನದಲ್ಲಿ ಹೆಚ್ಚಿನ ವಿಷಯನಿಷ್ಠೆ ತೋರಿಸಲು ಸಾಧ್ಯವಾಗಬಹುದು. ಆದರೆ, ಅಂತಹ ಸಂಶೋಧಕನಿಗೂ ತನ್ನದೇ ಆದ ಪೂರ್ವಾಭಿಪ್ರಾಯಗಳಿರುತ್ತವೆ ಎಂಬುದನ್ನು ಮರೆಯುವಂತಿಲ್ಲ. ಒಟ್ಟಿನಲ್ಲಿ, ಪೂರ್ವಾಭಿಪ್ರಾಯಗಳನ್ನು ಹಿಡಿತದಲ್ಲಿಡಲು ಸಾಧ್ಯವಾದರೆ ಮಾತ್ರ ಸಫಲ ಅಧ್ಯಯನ ಸಾಧ್ಯ.

ಇಷ್ಟು ಹಿನ್ನೆಲೆಯ ಮಾತಾಯಿತು. ಇನ್ನು ಮುಂದೆ ನನ್ನ ಅಧ್ಯಯನದಿಂದ ಒಂದು ಸಂಗೀತಿಕ ವಿಶ್ಲೇಷಣೆಯನ್ನು ಉದ್ಧರಿಸುತ್ತೇನೆ. ಈ ಕೆಳಗಿನ ತ್ರಿಪದಿಗಳನ್ನು ಹಾಡುಗಾರ್ತಿಯರು ನನ್ನ ಧ್ವನಿಮುದ್ರಣಕ್ಕಾಗಿ ಬೇಲೂರಿನಲ್ಲಿ ಹಾಡಿದರು. ಹಾಡುಗಾರ್ತಿಯರದ್ದು ಒಂದು ಗುಂಪು. ಅವರು ಒಂದು ಕ್ರಮದಲ್ಲಿ ಒಂದು ಧಾಟಿಯಲ್ಲಿ ಹಾಡಿದ ತ್ರಿಪದಿಗಳ ಗುಂಪು ಇದು. ಹಾಡುವಾಗ ಅವರು ಎರಡು ಗುಂಪಾಗಿ ಒಡೆದು ಹಾಡಿದರು.

ಬಿತ್ತಕೂರಿಗೆ ಮುಂದು ಬೀಜದೆಡಿಗೇ ಹಿಂದೂ
ಜಾಣ ಹರಳಯ್ನು ಮಿಣಿಮುಂದು । ನಣ್ಣಯ್ಯ
ಸೂಜಣಸಾಲ ಹ್ವಡಿಬಾರೋ ॥

ಬಿತ್ತರ ಭುಜ ಚೆಂದ ಹರದರ ಎದಿಚಂದ.
ಜೋತರುಡುವ್ವೆದೇ ಬಲುಚಂದ । ನಣ್ಣಯ್ನು
ಮಾತೆರಡೆ ಚಂದ ಸಬಿವಳಗೆ ॥

ತಾಳೆ ಹೂವಿನಾ ತಳುದಾಗೇ ಸುಳಿವುಂಟೆ
ತಾಯಿ ಮಕ್ಕಳಿಗೆ ಜಗಳುಂಟೆ । ನಡುದವ್ವ
ನಿನ ಕಾಲಿಗೆ ಬಿದ್ದೇನು ಉಣಬನ್ನಿ॥
ಹಾಗಲ ಕಾಯ ಹ್ಯಾಗಟ್ಯೇ ಕಂದವ್ವ
ಹ್ಯಾಗಟ್ಟರೇನೇ ಕಿರಗಯ್ಯಿ । ಚಾಡಿ ಮಾತು
ನಮ ಹಾಲಿನಂತಾ ಮನಸೇ ಹಗಿಯಾದೊ ॥

ಬಿತ್ತು ಉಟ್ಟುವಾಗ ಉತ್ತಮರೇಳೂವಾಗ
ಉತ್ತಮಕಾಳಿಂಗದ್ದು ಮೆರಿವಾಗ। ದ್ಯಾವಮ್ಮ
ಒಳ್ಳೊಳ್ಳೆ ಮೀನೂ ಗರಿಬಿಟ್ಟು । (ಟ್ಟಾ)ಡಾವಲ್ಲೆ

ಬೆಳ್ಳಿ ದ್ಯಾವಮ್ಮ ಬೆಳುಕೀಗೆ ॥

ಊಟಕ್ಕೆ ಕರಿಸ್ಯಾರೆ ಕೋಟಿರಾಯರ ಮಗನ
ದಾಟಿದರೆ ಭೂಮಿ ಬೆಳಿಯೋರಾ । ಣ್ಣಯ್ಯನ
ಊಟಕೆ ಕರಿಸ್ಯಾರೆ ದೊರಿಗಳು ॥

ಇತ್ಯಾದಿ.

ಚನ್ನಾಪೂರ ಬೇಲೂರಿನ ಹತ್ತಿರದ ಹಳ್ಳಿ. ಅಲ್ಲಿನ ಆರುಜನ ಹಾಡುಗಾರ್ತಿಯರು ನಿಂಗಮ್ಮ, ದ್ಯಾವಮ್ಮ, ಜವರಮ್ಮ, ಸಣ್ಣಮ್ಮ, ಪುಟ್ಟಮ್ಮ, ಗೌರಮ್ಮ ಹಾಡಿದ ತ್ರಿಪದಿಗಳು ಇವು. ಇವರು ಹರಿಜನರು. ಈ ಹಾಡಿಕೆಯನ್ನು ಧ್ವನಿಮುದ್ರಿಸಿದ್ದೂ 1969ರಲ್ಲಿ. ಆಗ ಬೇಲೂರಿನಲ್ಲಿ ಸಿನಿಮಾ ಥಿಯೇಟರ್ ಇರಲಿಲ್ಲವೆಂದು ನನ್ನ ನೆನಪು. ಟೂರಿಂಗ್ ಟಾಕೀಸ್ ಇತ್ತು. ರಾಗೀ ಬೀಸುವಾಗಲೂ ಈ ಪದಗಳನ್ನು ಹಾಡುತ್ತೇವೆ. ಕಳೆ ಕೀಳುವಾಗಲೂ ಹಾಡುತ್ತೇವೆ ಎಂದರು. ನನ್ನ ಧ್ವನಿಮುದ್ರಣಕ್ಕಾಗಿ ಪಡಸಾಲೆಯಲ್ಲಿ ಕೂತು, ರಾಗಿ ಕಲ್ಲಿಲ್ಲದೆ ಹಾಡಿದರು. ಹೊಲದಲ್ಲಿ ಕೆಲಸ ಹೆಚ್ಚಾಗಿ ಸಿಕ್ಕಿದ್ದರಿಂದಲೂ, ಸದಾಕಾಲದಲ್ಲಿ ಸಿಕ್ಕದ್ದರಿಂದಲೂ, ಬೇಲೂರಿನ ಹೋಟೆಲುಗಳಲ್ಲಿ ಅಕ್ಕಿ ಇತ್ಯಾದಿ ಧಾನ್ಯಗಳನ್ನು ಕೇರಿ ಹಸನು ಮಾಡುವ ಮುಂತಾದ ಕೆಲಸಗಳನ್ನು ಮಾಡುತ್ತಿದ್ದರು. ಒಂದೇ ಧಾಟಿಯಲ್ಲಿ ಹಾಡುತ್ತ, ಆಲೋಚನೆಯ ಝಳಕು ಒಂದರಿಂದೊಂದಕ್ಕೆ ಸುಗಮವಾಗಿ ಸಾಗುವಂತೆ, ಹಾಡಿದ ಈ ತ್ರಿಪದಿಗಳ ಗುಂಪಿನ ಹಾಡಿಕೆ ಕೇಳುತ್ತಿದ್ದರೆ, ಅನೇಕ ನುಡಿಗಳನ್ನುಳ್ಳ ಒಂದು ಹಾಡನ್ನು ಹಾಡುತ್ತಿದ್ದಾರೆ ಅನ್ನಿಸದೆ ಇರಲಿಲ್ಲ. ಸಂಗೀತಿಕವಾಗಿ ಇದು ಒಂದು ಹಾಡು, ದೊಡ್ಡ ಹಾಡು ಅನ್ನಿಸುತ್ತದೆ. ಒಂದು ಹಾಡಿನಲ್ಲಿರಬೇಕಾದ ಸಂಗೀತಿಕ ಒಮ್ಮುಖತೆ ಇಲ್ಲಿದೆ. ಪದ ಹೇಳು ಎಂದು ಹಳ್ಳಿಗರು ಅನ್ನುವುದು 'ಹಾಡನ್ನು ಹಾಡು' ಎನ್ನುವುದರ ಸಮಾನಾರ್ಥಕವಾಗಿಯೇ. ಈ 'ಪದ' ತ್ರಿಪದಿಗಳ ಗುಂಪಾಗಿದ್ದು 'ರಾಗಿಬೀಸುವ ಪದ'ವಾಗಿರಬಹುದು, 'ಕಳೆ ಕೀಳುವಾಗಿನ ಪದ'ವಾಗಿರಬಹುದು ಇತ್ಯಾದಿ.

ಈ ಹಾಡಿಕೆಯ 'ನಾದ' ಸ್ವಲ್ಪಮಟ್ಟಿಗೆ ಗಂಟಲಿಂದ ಹಾಡಿದ ಹಾಗೆ ಕೇಳುತ್ತದೆ. ಗಂಟಲ ಹೊರಳುಗಳನ್ನು ಬಿಟ್ಟರೆ ನಾದ ನೇರವಾಗಿ ನುಡಿಯುತ್ತದೆ.

ಇನ್ನು ತ್ರಿಪದಿಗಳನ್ನು ಹಾಡಿರುವ ವಿಧಾನವನ್ನು ತ್ರಿಪದಿಯ ಪುನರುಚ್ಚಾರಣೆಯ ವಿಧಾನವನ್ನೂ ನೋಡೋಣ.

ತ್ರಿಪದಿಯನ್ನು ಮೂರು ಸಾಲುಗಳಲ್ಲಿ ಬರೆಯುವುದು ಛಂದಸ್ಸಿನ ಪದ್ಧತಿ. ಒಂದೊಂದು ಸಾಲಿಗೂ 'ಪಾದ'ವೆಂದು ಹೆಸರಿಸುತ್ತಾರೆ.

ಹಾಡುಗಾರ್ತಿಯರು ಎರಡು ವೃಂದವಾಗಿ ವಿಭಾಗಿಸಿಕೊಂಡು ಈ ತ್ರಿಪದಿಗಳನ್ನು ಹಾಡಿದರು. ಮುಂದಾಳು ಇವರಲ್ಲೊಬ್ಬರು ಎಂದು ಗೊತ್ತಾಗುತ್ತಿತ್ತು. ಆಕೆ ಸೊಲ್ಲೆತ್ತಿಕೊಳ್ಳುತ್ತಿದ್ದ ಠೀವಿ, ಹಾಡನ್ನು ಮುಂದುವರೆಸುತ್ತಿದ್ದ ಧಾಟಿ, ದನಿ ಎತ್ತುವ ರೀತಿ ಇವುಗಳಿಂದ ಮುಂದಾಳುವಿನ ವೃಂದ ಇನ್ನೇನು ನಿಲುಗಡೆಗೆ ಬಂದಿತೋ ಇಲ್ಲವೋ ಎನ್ನುವಾಗಲೇ ಎರಡನೆಯ ವೃಂದ ಪದವನ್ನೆತ್ತಿಕೊಳ್ಳುವುದು ಹಾಡಿಕೆಗೆ ಓಟವನ್ನು ಕೊಡುತ್ತದೆ. ಇದೇ ವೃಂದದ ಹಾಡುಗಾರ್ತಿಯರು ತಿಂಗಳು ಮಾವನ ಪದವನ್ನೂ ಹಾಡಿದ್ದಾರೆ. ನನ್ನ ಧ್ವನಿ ಮುದ್ರಿಕೆಗಾಗಿ ಅದರಲ್ಲಿ, ಈ ರೀತಿ ಎರಡನೆಯ ವೃಂದ ಹಾಡನ್ನೆತ್ತಿಕೊಳ್ಳುವುದು ಮೊದಲನೆಯ ವೃಂದದವರ ಹಾಡಿಕೆಯ ಮುಕ್ತಾಯದ ಮೇಲೆಯೇ ಏರಿಕೊಂಡು ಬಂದಿರುವುದು ಕೇಳಿಬರುತ್ತದೆ. ಅದನ್ನು ನಾನು 'ವೃತ್ತಮಾನ ಹಾಡಿಕೆ' ಎಂದು ಹೆಸರಿಸಿದ್ದೇನೆ. ಇಲ್ಲಿ ಚರ್ಚಿಸುತ್ತಿರುವ ತ್ರಿಪದಿಗಳ ಹಾಡಿಕೆಯಲ್ಲಿ ಅಷ್ಟುಮಟ್ಟಿಗೆ ಮೇಲೇರಿಕೊಂಡು ಪುನರುಚ್ಚಾರಣೆ ಆಗಿಲ್ಲವಾದರೂ ಮೊದಲ ವೃಂದ ಪೂರ್ತಿ ನಿಲ್ಲಿಸುವ ಮುಂಚೆಯೇ ಎರಡನೆಯ ವೃಂದ ಪ್ರಾರಂಭ ಮಾಡುವುದಂತೂ ಸ್ಪಷ್ಟ. ಮುಂದೆ ಹಾಡಿಕೆ ಸಾಗುವುದನ್ನು ಒಂದು ತ್ರಿಪದಿಯ ಪುನರುಚ್ಚಾರಣೆಗಳಿಂದ ನೋಡೋಣ.

ವೃಂದ 1: ತಾಳೆ ಹೂವಿನಾ ತಳುದಾಗೇ ಸುಳಿವುಂಟೇ
ವೃಂದ 2: ತಾಳೆ ಹೂವಿನಾ ತಳುದಾಗೇ ಸುಳಿವುಂಟೇ

ವೃಂದ 1 'ಸುಳಿವುಂಟೇ" ಎಂದು ಹಾಡುತ್ತಾ ಮುಕ್ತಾಯಕ್ಕೆ ಇನ್ನೇನು ಬರುವಂತೆಯೇ 'ಟೇ' ಮೇಲೆಯೇ ಎರಡನೆಯ ವೃಂದ 'ತಾಳೆ ಹೂವಿನ' ಎಂದು ಪ್ರಾರಂಭ ಮಾಡುತ್ತಾರೆ.

ವೃಂದ 1: ತಾಯಿ ಮಕ್ಕಳಿಗೇ ಜಗಳುಂಟೆ
ವೃಂದ 2: ತಾಯ ಮಕ್ಕಳಿಗೇ ಜಗಳುಂಟೆ

ವೃಂದ 1: ತಾಯಿ ಮಕ್ಕಳಿಗೇ ಜಗಳುಂಟೇ ನಡುದವ್ವ
ವೃಂದ 2: ತಾಯಿ ಮಕ್ಕಳಿಗೇ ಜಗಳುಂಟೇ ನಡುದವ್ವ

ವೃಂದ 1 : ನಿನ ಕಾಲಿಗೆ ಬಿದ್ದೇನು ಉಣಬನ್ನಿ
ವೃಂದ 2 : ನಿನ ಕಾಲಿಗೆ ಬಿದ್ದೇನು ಉಣಬನ್ನಿ

ತ್ರಿಪದಿಯ ಹಾಡಿಕೆ ಹೇಗೆ ಎಂಬ ಬಗ್ಗೆ ಸಾಮಾನ್ಯವಾಗಿದ್ದ ತಿಳುವಳಿಕೆಯ ಪ್ರಕಾರ ಹೀಗಿದೆ: ಮೊದಲನೆಯ ಮತ್ತು ಎರಡನೆಯ ಪಾದಗಳನ್ನು ಹಾಡಿ, ಮತ್ತೆ ಎರಡನೆಯ ಪಾದಕ್ಕೆ ಒಂದು ಪದವನ್ನು ಸೇರಿಸಿಕೊಂಡು ಮುಂದಿನ ಪಾದವನ್ನು ಹಾಡುವುದು. ಇದನ್ನೇ ಕನ್ನಡ ಕೈಪಿಡಿಯೂ ಹೇಳುತ್ತದೆ. ಆ ರೀತಿ ಆಗದಿದ್ದರೆ ಈ ತ್ರಿಪದಿಯ ಹಾಡಿಕೆ ಹೀಗಾಗಬೇಕಾಗಿದ್ದಿತು.

ವೃಂದ 1: ತಾಳೆ ಹೂವಿನಾ ತಳುದಾಗೇ ಸುಳಿವುಂಟೇ

ತಾಯಿ ಮಕ್ಕಳಿಗೇ ಜಗಳುಂಟೇ

ವೃಂದ 2: ತಾಳೆ ಮಕ್ಕಳಿಗೇ ಜಗಳುಂಟೆನಡುದವ್ವ

ನಿನ ಕಾಲಿಗೆ ಬಿದ್ದೇನು ಉಣಬನ್ನಿ

ಆದರೆ, ಚನ್ನಾಪುರದ ಹಾಡುಗಾರ್ತಿಯರು ಈ ಪದ್ಧತಿಯಲ್ಲಿ ಹಾಡಿಲ್ಲ ಎನ್ನುವುದನ್ನು ನೊಡಿದ್ದೇವೆ. ತನ್ನ ಸಂಗ್ರಹದ ಹಾಡುಗಳಲ್ಲಿ ಜನಪದ ಹಾಡುಗಾರ್ತಿಯರು ಹಾಡುವಲ್ಲಿ ತ್ರಿಪದಿಯನ್ನು ಛಂದಸ್ಸು ಕೆಡದಂತೆ ಉಳಿಸಿಕೊಂಡು ಅನರ್ಥಕಾರಿಯಾಗಿ ಮುರಿಯದೆಯೂ ಬಹಳಷ್ಟು ಬಗೆಯ ಸ್ವಾತಂತ್ರ್ಯವನ್ನು ವಹಿಸಿ, ಬಹಳ ಸೃಜನಾತ್ಮಕ ರೀತಿಗಳಲ್ಲಿ ಹಾಡಿದ್ದಾರೆ. ಅವರ ಕಲ್ಪನೆಯ ವಿಸ್ತಾರದ ವಿವರ ನೋಟ ನಮ್ಮ ಕಣ್ಣು ತೆರೆಸುವಂತಿದೆ.

ಇನ್ನು ಈ ಹಾಡಿಕೆಯ ಸ್ವರಪದ್ಧತಿ.

ನನ್ನ ಧ್ವನಿ ಮುದ್ರಣವನ್ನು ಎಷ್ಟೆಷ್ಟು ಸಾರಿ ಕೇಳಿದರೂ ಶಾಸ್ತ್ರೀಯ ಸಂಗೀತದಂತಲ್ಲದೆ, ಲಘುಸಂಗೀತದ ರೀತಿಯಲ್ಲಿಲ್ಲದ, ಸಿನಿಮಾ ಹಾಡುಗಳ ಕ್ರಮದಲ್ಲದ ಒಂದು ಅನುಪಮ ರೀತಿಯ ಸಂಗೀತವೇ ನನ್ನ ಕಿವಿಗೆ ಬೀಳುತ್ತದೆ. ಇದರ ಸಂಗೀತಕ್ಕೆ ಇದೇ ಸಾಟಿ, ಬೇರೊಂದಲ್ಲ, 'ಶಾಸ್ತ್ರೀಯ ಸಂಗೀತ' ದಂತೆ ಅಲ್ಲ, ಲಘುಸಂಗೀತದಂತೆ ಅಲ್ಲ' ಇತ್ಯಾದಿ. ಹೀಗೆ 'ಇದಲ್ಲ' 'ಅದಲ್ಲ' ಎಂದು ವರ್ತಿಸುವುದರಿಂದ ಏನು ವರ್ಣಿಸಿದಂತಾಯಿತು? ಹಾಗಾಗಿ ನಮಗೆ ತಿಳಿದ ಒಂದು ಮೂಲಮಾನವಾದ ಸಪ್ತಸ್ವರಗಳ ಕ್ರಮದಲ್ಲಿ ಪ್ರಸ್ತಾರ ಮಾಡುವುದಕ್ಕೆ ಕೈ ಹಾಕಿದ್ದಾಯಿತು.

ಹಿಂದೆ ಉದ್ಧರಿಸಿದ ತ್ರಿಪದಿಗಳಲ್ಲಿ ಸಂಗೀತ ಎರಡನೆಯ ಪಾದ ಮತ್ತು ನಾಲ್ಕನೆಯ ಪಾದಗಳ ಕೊನೆಯ ಗಣಗಳಲ್ಲಿ ನಿಲುಗಡೆಗೆ ಬರುತ್ತದೆ. ಅಂದರೆ

ತಾಳೆ ಹೂವಿನಾ ತಳುದಾಗೆ ಸುಳಿವುಂಟೇ
ತಾಯಿ ಮಕ್ಕಳಿಗೇ ಜಗಳುಂಟೇನಡದವ್ವ
ನಿನ ಕಾಲಿಗೆ ಬಿದ್ದೇನೂ ಉಣಬನ್ನಿ ॥

ಯಲ್ಲಿ "ಳುಂಟೆ" ಮತ್ತು "ಬನ್ನಿ"ಯಲ್ಲಿ ಕಂಠ ಧ್ವನಿ ನಿಲುಗಡೆಗೆ ಬಂದಿದೆ. ಎಂದರೆ ಎರಡನೆಯ ಪಾದದ ಮೊದಲ ಮತ್ತು ಎರಡನೆಯ ಪಾದಕ್ಕಿರುವ ಸಂಗೀತವೇ ಇಡೀ ಹಾಡಿಕೆಗೆ ಇದೆ. ಎಲ್ಲ ತ್ರಿಪದಿಗಳ ಹಾಡಿಕೆಯನ್ನೂ ಗಮನಿಸಿ, ಎರಡನೆಯ ಪಾದದ

ಕೊನೆಯ ಗಣದ ಸ್ವರಸ್ಥಾನವೇ ಆಧಾರ ಷಡ್ಜವೆಂದಿಟ್ಟುಕೊಳ್ಳಬಹುದೆಂಬ ನಿರ್ಣಯಕ್ಕೆ ಬಂದಿದ್ದೇನೆ. ಈಗ ಸ್ವರ ಪಡಿಸಿದರೆ ಹೀಗೆ ಬರೆಯಬಹುದು.

ನಿಸರಿ ರಿಮಾ ಗರಿಗಾರೀ ಸರಿ ಸಾನೀ ಸಾರಿಗರೀ ಸಾರಿಸಾನೀ
ತಾ–ಳೆ ಹೂ ವೀ– ನಾ– ತಳುದಾ– ಗೇ... ಸುಳಿವುಂಟೇ
ನಿಸರಿಗ ರಿಮಗರಿ ಗರೀ ಗರಿಸಾ ರಿಸಸಾ
ತಾ– ಯಿ ಮಕ್ಕಳಿ ಗೇ ಜ–ಗಾ ಳುಂಟೇ

ಒಮ್ಮೊಮ್ಮೆ ಹಾಡಿಕೆ ಸ್ವಲ್ಪವೇ ವ್ಯತ್ಯಾಸಗೊಳ್ಳುತ್ತದೆ.

ನಿಸರಿ ರಿಮಾ ಗರಿಗಾರೀ ಸರಿ ಸಾನೀ ಸಾರಿಗರೀ ಸಾರಿಸಾನೀ
ಮಕ್ಕ ಳ್ಳಿಲ್ಲದ ಬಾ–ಲೇ ಹೋಕ್ಕಳುನಂ . . . . . ಜನಬನವಾ
ನಿಸರಿಗ ರಿಮಗರಿ ಗರೀ ಗರಿಸಾ ರಿಸಸಾೀ
ಮ–ಕ್ಕ ಳೆಸೆಪೋ– ರಾ– ಕ– ಯ್ಯ ನೋಡೀ....

ಹೀಗೆ, ಅಲ್ಲಲ್ಲಿ ಸ್ವರವಿನ್ಯಾಸದಲ್ಲಿ ಅಲ್ಪವ್ಯತ್ಯಾಸಗಳು ಕಂಡುಬರುತ್ತವೆ.

ಸರಿನೀ ಸರಿಗರಿ ಸರಿ ಸರಿಗನೀ
ಬೀ – ಜಾ ದೆ–ಡಿ– ಗೇ ಹಿಂದೂ

ಸರಿಗ ನೀ

ಹಿಂದೂ ಎನ್ನುವಾಗ ಜಾರನ್ನೂ ಗಂಟಲ 'ಹೊರಳ'ನ್ನೂ ಗಮನಿಸಬೇಕು. ಈ ಹಾಡಿಕೆ ಅಪೂರ್ವವೂ, ಮಧುರವೂ, ಜನಪದ ಹಾಡಿಕೆಗೇ ಸೀಮಿತವೂ ಆದ ಗಂಟಲ ಹೊರಳುಗಳಿಂದ ರಂಜಿತವಾಗಿದೆ. ಇನ್ನು ಸ್ವರಸ್ಥಾನ.

ಗಮಕವಿಲ್ಲದೆ ನೇರವಾಗಿ ನುಡಿದಿದೆ ಕಂಠ.

ಕಾಕಿಲಿನಿ– * ಸ, ಜರಿ, ಸಾ.ಗ ಶುಮ ಎಂದು ಹೇಳಬಹುದು. ಇದು ಹಾಡಿನ ಮೂಲಬಿಂದು.

ಇದನ್ನು ಕೇಳಿದ ಶಾಸ್ತ್ರೀಯ ಸಂಗೀತಗಾರರು ಕೆಲವರು ನಿ ಸರಿಯಾಗಿ ಕಾಕಿಲಿ ನಿಶಾದದ ಸ್ಥಾನದಲ್ಲೇ ಇದೆ ಎಂದದ್ದೂ ಉಂಟು. ಯಾವ ರಾಗದ ಕಾ ನಿ ಎನ್ನುವುದು ಪ್ರಶ್ನೆ. ನಾನು ಗುರುತಿಸಿರುವುದು ಶಂಕರಾಭರಣದ 'ನಿ' ಗಿಂತ ಕಮ್ಮಿ ಸ್ಥಾನ ಎಂದು. ನಿ. ರಿ, ಗ, ಮ ಕೀರವಾಣಿಗೆ ಬರುವ ಸ್ಥಾನದಲ್ಲಿವೆ, ಸರಿಮಗರಿ, ರಿಗರಿ ಎಂಬ ಸಂಚಾರಗಳಿಂದ ಶುದ್ಧಪೀಲು ಛಾಯೆ ಇದೆ ಎಂದು ಹೇಳಬಹುದು ಎಂದವರೂ ಉಂಟು. ಇರುವ ಒಂದು ಸಣ್ಣಬಿಂದುವನ್ನು 'ವಿಸ್ತರಿಸಿಕೊಂಡು ಹೋದರೆ ಈ ಎಲ್ಲಾ ಕೇಳಸಿಗುತ್ತದೆ. ಆದರೆ ಇಲ್ಲಿ ಮುಖ್ಯವಾದ ವಿಷಯವೆಂದರೆ ಆ 'ಬಿಂದು'ವೇ ಎಷ್ಟೆಲ್ಲಾ ಆಕರ್ಷಣೀಯವಾಗಿದೆ, 'ಬಿಂದು'ವೇ ಆದರೂ ಹೇಗೆ ಸ್ವಯಂ ಪ್ರಕಾಶತವಾಗಿಯೂ ಸ್ವಯಂ ರಂಜಕವಾಗಿಯೂ ಇದೆ ಎಂಬುದು.

ಜಾಣ ಹರುಳಯ್ನ ಮಿಣಿ ಮುಂದು, ಎಂಬುದೂ ಹಾಡಿನಲ್ಲಿ

ನಿಸಗರಿ ಸಾ ಸಾ

ಮು. . . . . ದೂ ಎಂದೂ
ರಿಸ ಸಾಸಾ ಎಂದೂ ಆಗಿದೆ.
ಮುಂದೂ . . . .

ರಿ ಸ ಸಾ ಸಾ ಎಂಬಲಲ್ಲಿ ಸಸಾ ಎಂದು ಹಾಡುವಾಗ ಘಾತವಿದೆ. ಈ ರೀತಿ ಸ್ವರವ್ಯತ್ಯಾಸ ಮಾಡಿ ಹಾಡಿರುವುದು ಈ ವೃಂದದ ಒಬ್ಬರೇ ಮಹಿಳೆಯ ಸ್ವರದಲ್ಲಿ ಕೇಳುತ್ತದೆ ಎನ್ನಿಸುತ್ತದೆ.

ಮತ್ತೊಮ್ಮೆ ಗಂಟಲ ಹೊರಳಿನ ವಿವರಗಳನ್ನು ನೋಡೋಣ.

ಸರಿನೀ <u>ಸಾರಿಗ ರೀ</u> ಸರಿನೀ ಎಂದು ಹಾಡುವಲ್ಲೂ ಕಂಠಸ್ವರ ಹೊರಳಾಗಿ ಬಂದಿದೆ ಹಾಗೆಯೇ ಮುಕ್ತಾಯದ 'ನಿ ಸರಿಸ ಸಾ ರಿಸಾಸ' ಗಳನ್ನು ಹಾಡುವಾಗಲೂ ಕಂಠಸ್ವರ ಸರಾಗವಾಗಿ ಅಲುಗುತ್ತದೆ ಎಂದರೂ ಸರಿಯಾಗುತ್ತದೆ. ಇದು ಜನಪದ ಹಾಡಿಕೆಯಲ್ಲಿ ಸ್ಪಷ್ಟವಾಗಿ ತೋರುವ ಮುಖ್ಯ ಲಕ್ಷಣ.

ಈ ತ್ರಿಪದಿಗಳನ್ನು ದನಿಯೆಳೆದು ಹಾಡಿದ್ದಾರೆ. ತಾಳಬದ್ಧವಾಗಿ ಅಲ್ಲ. ಆದರೆ ಪ್ರತಿಯೊಂದು ತ್ರಿಪದಿಯ ಪ್ರತಿಪಾದವನ್ನೂ ಹಾಡುವಲ್ಲಿನ ಕಾಲಪ್ರಮಾಣ ನಿಯತವಾಗಿದ್ದು, ಎಳೆದು ಹಾಡುವ ಧ್ವನಿ ಮಾಧುರ್ಯವಾಗಿದ್ದು ಲಯಬದ್ಧವಾಗಿರದೆ ಗತಿ ಪ್ರಧಾನವಾಗಿದೆ.

ಈ ಹಾಡುಗಾರ್ತಿಯರು ತಮ್ಮ ಕಂಠಸ್ವರವನ್ನು ಅತಿಯಾಗಿ ವಿಸ್ತರಿಸಿ ಹಾಡಿಲ್ಲ. ತಮ್ಮ ಕಂಠದಲ್ಲಿ ಸಾಧಾರಣವಾಗಿ, ಸರಾಗವಾಗಿ ನುಡಿಯುವ ಮಧ್ಯಸ್ಥಾಯಿಯಲ್ಲೇ ಹಾಡಿದ್ದಾರೆ. ಆದರೆ, ಮೊದಲನೆಯ ತ್ರಿಪದಿಗೂ ಹತ್ತಿಪ್ಪತ್ತನೆಯ ತ್ರಿಪದಿಗೂ ಸ್ಥಾಯಿ ವ್ಯತ್ಯಾಸವಿದೆ. ಎಂದರೆ, ಹಾಡಹಾಡುತ್ತ ಆಧಾರ ಷಡ್ಜವನ್ನು ಎತ್ತರಿಸಿಕೊಂಡಿದ್ದಾರೆ. ಒಂದೇ ಸ್ಥಾಯಿಯಲ್ಲಿ ಹಾಡಿದಾಗ ಏಕಮಟ್ಟದ ನಾಧದ ಜಡತೆಯ ಭಾರ ಎತ್ತರಿಸಿಕೊಂಡಿದ್ದಾರೆ. ಕೆಲವೇ ಸ್ವರಗಳಿರುವುದರಿಂದಲೂ, ವಿಸ್ತಾರ ಮಾಡದೆ ಮತ್ತೆ ಮತ್ತೆ ಒಂದು ಮೂಲಮಾನವ 'ದನಿ'ಯನ್ನೇ ಹಾಡುತ್ತಿರುವುದರಿಂದಲೂ ಕಂಠಕ್ಕೆ ವೈವಿಧ್ಯಬೇಕಾಗುತ್ತದೆ. ಅನಾಯಸವಾಗಿ ತಮಗರಿಯದೆಯೇ ಸ್ಥಾಯಿ ವ್ಯತ್ಯಾಸ ಮಾಡಿಕೊಂಡು ಇದನ್ನು ಸಾಧಿಸುತ್ತಾರೆ ಹಾಡುಗಾರ್ತಿಯರು. ನಾದದ ಏಕತಾನತೆಯನ್ನು ಮುರಿಯಲು ಇದು ಸಹಾಯಕವಾಗುತ್ತದೆ. ಶ್ರುತಿವಾದ್ಯವಿಲ್ಲದೆ ಹಾಡುವುದರಿಂದ ಸ್ಥಾಯಿಯನ್ನು ಏರಿಸಿಕೊಳ್ಳುವುದು ಸಾಧ್ಯ. ಹೀಗೆ ಏರಿಸಿಕೊಂಡಾಗ ಉಂಟಾಗುವ ಸ್ವರಪಲ್ಲಟದ ಬಗ್ಗೆ ನಿರ್ಣಾಯಕ ಅಂಶಗಳನ್ನು ತಿಳಿಯಬೇಕಾದರೆ, ನೂರಾರು 'ಮಾದರಿ' ದನಿಗಳ ಅಧ್ಯಯನ ಅವಶ್ಯಕ.

ಹಾಡುವಾಗ ಧ್ವನಿ ಗಂಟಲಿನಲ್ಲಿ ಉತ್ಪತ್ತಿ ಮಾಡುತ್ತಾರೆ ಎಂದು ಆಗಲೇ ಹೇಳಿದ್ದೇನೆ. 'ಅ' ಎನ್ನುವುದು 'ಆ್ಯ' ಅಥವಾ 'ಯಾ' ಕ್ಕೆ ಮಧ್ಯಸ್ಥವಾಗಿ ಬಂದಂತೆ ಭಾಸವಾಗುತ್ತದೆ.

ಇನ್ನು ಈ ಹಾಡಿನಲ್ಲಿ ಉಪಯೋಗವಾಗಿರುವ ಸ್ವರಗಳ ಬಗ್ಗೆಯೂ ಹೆಚ್ಚಿನ ಚರ್ಚೆ ಸಾಧ್ಯ.

'ಚರಿ, ಸಾ. ಗ,' ಗಳು ಕೀರವಾಣಿಯ ರಾಗದಲ್ಲಿನಂತೆ ಒಬ್ಬರಿಗೆ ಕೇಳಿಸಿದರೆ, ಆನಂದ ಭೈರವಿ ರಾಗದಲ್ಲಿಯಂತೆ ಇನ್ನೊಬ್ಬರ ಕಿವಿಗೆ ಕೇಳಿಸೀತು. ಇದೆಲ್ಲ ಸ್ವರ ಗಮಕ ರಹಿತವಾಗಿ ನುಡಿಯುವುದರ ಪ್ರಭಾವ. ಒಂದು ಗುಂಪಿನ ಹಾಡುಗಾರರು ಹಾಡುವ ಎಲ್ಲ ಹಾಡುಗಳನ್ನೂ ಧ್ವನಿಮುದ್ರಿಸಿ, ಈ ಸಮಷ್ಟಿಯ ಆಧಾರದ ಮೇಲೆ ಚರ್ಚೆ ನಡೆಸಿದಾಗ ಮಾತ್ರ ನಿರ್ಣಾಯಕ ಅಂಶಗಳು ಬೆಳಕಿಗೆ ಬರುವುದು ಸಾಧ್ಯ. ಅಂತಹ ಚರ್ಚೆ ಹಳ್ಳಿಯ ಹಾಡುಗಳಿಗೇ ಅನುಪಮವಾದಂತಹ ಸಂಗೀತದ ಅಂಶಗಳ ನಿರ್ಣಯಕ್ಕೆ ದಾರಿಮಾಡಿಕೊಡುತ್ತದೆ.

ಇಷ್ಟು ಸೊಗಸಾದ ಈ ತ್ರಿಪದಿಗಳನ್ನು ಹಾಡಿದ ಹಾಡುಗಾರ್ತಿಯರಿಗೆ ಪಟ್ಟಣದ ಹಾಡುಗಳೆಂದರೆ ಒಂದು ಬಗೆಯ ಸೋಜಿಗ. ಅದನ್ನು ನಾವು ಕಲಿಯಬಲ್ಲೆವು ಎಂಬ ಆತ್ಮ ವಿಶ್ವಾಸವಿದೆ. ಈ ಹಾಡುಗಾರ್ತಿಯರ ಸರಾಸರಿ ವಯಸ್ಸು ೪೦–೬೦. ಇವರು ಹೊಲದಲ್ಲಿ ಕಳೆ ಕೀಳುತ್ತ ಹಾಡಲಿ, ರಾಗಿ ಬೀಸುತ್ತ, ಅಕ್ಕಿ ಕೇರುತ್ತ ಹಾಡಲಿ, ನನ್ನ ಟೇಪ್ ರಿಕಾರ್ಡರಿನ ಎದುರು ಕುಳಿತು ಹಾಡಲಿ, ಇವರ ಹಾಡಿನ 'ಬನಿ' ಜನಪದ ಸಂಗೀತದ್ದು. ಬೇಲೂರಿನಲ್ಲಿ ೩೫ವರ್ಷ ಪ್ರಾಯದ ಪುಟ್ಟಮ್ಮ ಹಾಡಿದ ಹಾಡುಗಳನ್ನು ಧ್ವನಿ ಮುದ್ರಿಸಿದೆ. ಪ್ರೈಮರಿ ಶಿಕ್ಷಣ ಪಡೆದ ಈಕೆಯೂ ಹರಿಜನರೇ. ಅದ್ಭುತವಾದ; ಇಂಪಾದ, ಕಂಠಧ್ವನಿ, ಬನಿಗಳೆಲ್ಲ ಜನಪದ ಸಂಗೀತದಿಂದ ಬಂದವು. ಆದರೆ, ಆಕೆ

ಹಾಡಿದ್ದು ಜನಪದ ಸಂಗೀತವಲ್ಲ ಅನ್ನಿಸಿಬಿಡುತ್ತಿತ್ತು. ಕಂಠಧ್ವನಿಯ ಬಳಕೆ, ಏರುಜಾರು ಸ್ವರಗಳ ರೀತಿ, ಸ್ವರಸಂಖ್ಯೆ, ಇವೆಲ್ಲದರಲ್ಲೂ ಬದಲಾವಣೆಯ ಗಾಳಿ ಅಂತರ್ಗಾಮಿಯಾಗಿ ಬಿಟ್ಟಿದ್ದೂ ಸ್ಫುಟವಾಗಿಬಿಡುತ್ತಿತ್ತು.

ಜಾನಪದ ಅಧ್ಯಯನ ಆರಂಭವಾದ ಕಾಲದಲ್ಲಿ ಧ್ವನಿಮುದ್ರಣದ ಹಾಗೂ ಚಿತ್ರೀಕರಣದ ಸಾಧ್ಯತೆ ಅಲ್ಪವಾಗಿತ್ತು. ಆದರೆ ಈಗ ಹಾಗಲ್ಲ. ಅಂದಿನ ಅನೇಕ ಸಂಶೋಧನಕಾರರು, ಭಾರತದವರು ಮತ್ತು ವಿದೇಶಿಯರು, ತಮ್ಮ ಅಧ್ಯಯನದಲ್ಲಿ ಅನೇಕ ನಿರ್ಣಯಗಳನ್ನು ಕೊಟ್ಟಿದ್ದಾರೆ. ವಿದೇಶೀಯರು ಮಾಡಿದ ಅಧ್ಯಯನದ ಆಧಾರಭೂತವಾದ ಧ್ವನಿಮುದ್ರಣಗಳು ವಿದೇಶದ ಅಧ್ಯಯನ ಸಂಸ್ಥೆಗಳ ಲೈಬ್ರರಿಗಳಲ್ಲಿವೆ. ನಮ್ಮ ದೇಶದವರದ್ದು ಅವರವರ ಬಳಿ ಇವೆ.

ಅಂದಿನ ಸಂಶೋಧನಕಾರರ ನಿರ್ಣಯಗಳನ್ನು ಓದುವಾಗ ಒಂದು ಅಂಶ ಎದ್ದು ಕಾಣುತ್ತದೆ. ಹಳ್ಳಿಯ ಹಾಗೂ ಪಟ್ಟಣಗಳ ದೂರ, ಅಂತರ, ಹಾಡುಗಳ ಮೇಲೆ ನಿರ್ಣಾಯಕ ಪ್ರಭಾವ ಬೀರಿದೆ ಎನ್ನುವ ನಿರ್ಣಯ ಬಹಳ ಪ್ರಮುಖವಾಗಿದೆ. ಈಗ ಈ ದೂರ ಅಂತರ ಸಾಕಷ್ಟು ಕಮ್ಮಿಯಾಗಿರುವಾಗ ಹಳ್ಳಿಯ ಹಾಡಿನ ರೂಪ ಏನಾಗಿದೆ? ಇದರ ಸಂಗೀತ ಯಾವ ದಾರಿ ಹಿಡಿದಿದೆ ಎಂಬ ಪ್ರಶ್ನೆ ಮತ್ತೆ ಮತ್ತೆ ಮನಸ್ಸಿನಲ್ಲಿ ಮೂಡುತ್ತದೆ.

ದೆಹಲಿಯ ಮಹಲುಗಳಲ್ಲಿ ಶಾಸ್ತ್ರೀಯ ಸಂಗೀತ ಕೇಳುವಾಗಲೂ ಹಳ್ಳಿಯ ಹಾಡುಗಳ ನೆನಪು ಕಾಡುತ್ತದೆ. ಆಗಾಗ ವೇಷಧಾರಿಯಾದ ಹಳ್ಳಿಯ ಹಾಡು ದೊಡ್ಡಪಟ್ಟಣಗಳ ಅಂಗಗಳಲ್ಲೂ ಧ್ವನಿಗೊಳ್ಳುತ್ತವೆ. ಅದನ್ನೇ ಸಂತೋಷದಿಂದ ಸವಿಯುವಾಗ ಒಳಮನಸ್ಸು ಹಳ್ಳಿಯ ಹೊಲ, ಮನೆ, ಅದರಲ್ಲಿ ರಾಗಿಕಲ್ಲಿನಲ್ಲಿ ಬೀಸುವ ಹೆಂಗಸರು, ಕೋಲಾಟ ಕುಣಿಯುವ ಗಂಡಸರು; ಹಬ್ಬ ಹರಿದಿನಗಳಲ್ಲಿ ಮೇಳಕಟ್ಟಿನ ವೃಂದದವರು ಇವರನ್ನೆಲ್ಲ ಪರಿಭಾವಿಸಿಕೊಂಡು ಕನಸು ಕಾಣುತ್ತದೆ. ಸಂಶೋಧನೆಯ ಸಾಧ್ಯತೆಗಳು ದೂರವಾದಂತೆಲ್ಲ ಕನಸಾದರೂ ಉಳಿಯುವುದು ಸಾಧುವಲ್ಲವೆ?

ಎಲ್.ಜಿ.ಸುಮಿತ್ರ

೭. ಭಾರತೀಯ ಸಂಗೀತದ ವಿಚಾರಗಳು

ಭಾರತೀಯ ಸಂಗೀತಕ್ಕೆ ಅತೀ ಪ್ರಾಚೀನತೆ ಮತ್ತು ಸಮೃದ್ಧತೆಯ ಹಿನ್ನೆಲೆಯಿದೆ. ನಮ್ಮ ದೇಶದಲ್ಲಿ ಅನೇಕ ಸಂಗೀತ ಪ್ರಯೋಗಗಳನ್ನು ಮಾಡುವ ದಿಗ್ಗಜ ವಿದ್ವಾಂಸರು ಮತ್ತು ಕಲಾಕಾರರು ಇದ್ದಾರೆ. ಭಾರತೀಯ ಸಂಗೀತದ ಜನ್ಮವು ವೈದಿಕ ಯುಗದಲ್ಲೇ ಆಗಿದೆ ಎಂಬುದು ಸರ್ವರಿಗೂ ತಿಳಿದ ಸಂಗತಿ. ವೈದಿಕ ಯುಗದಲ್ಲಿ ಸಾಮಗಾನಕ್ಕೆ ಹೆಚ್ಚು ಮಹತ್ವವಿತ್ತು. ಈ ಯುಗದಲ್ಲಿ ಋಷಿಮುನಿಗಳಿಂದ ತಪೋವನಗಳಲ್ಲಿ ಸಾಮ–ಗಾನದ ಸ್ವರಗಳು ಪೋಷಣೆಗಳು ಇದ್ದುವು. ಸಾಮಗಾನದ ಆಧಾರಗಳು ಛಂದೋಗ್ಯ ಉಪನಿಷತ್‌ಗಳಲ್ಲಿ ಕಾಣಸಿಗುವುದನ್ನು ಸಂಶೋಧನೆ ಮಾಡಲಾಗಿದೆ. ಸಾಮಸಂಗೀತದಿಂದಲೇ ಭಾರತೀಯ ಸಂಗೀತದ ವಿಕಾಸವಾಗಿದೆ ಎಂಬುದು ಸಂಗೀತತಜ್ಞರ ಅಭಿಪ್ರಾಯ. ಭಾರತೀಯ ಸಂಗೀತದ ವಿಕಾಸದಲ್ಲಿ ವೈದಿಕ ಸಾಮಗಾನಕ್ಕೆ ಪ್ರಥಮ ಯುಗ, ಗಾಂಧರ್ವ ಉಪವೇದ ಎರಡನೆಯಯುಗವೆಂದು ತಿಳಿಯಲಾಗಿದೆ. ಗಾಂಧರ್ವವೇದ ಯುಗದಲ್ಲಿ ಸಂಗೀತದ ವಿಚಾರ ನಾಟ್ಯಶಾಸ್ತ್ರದ ವಿಚಾರದ ಮೇಲೆ ನಿಂತಿದೆ.

ಸಂಗೀತದ ವಿಕಾಸ ಘಟ್ಟದಲ್ಲಿ ರಾಗ–ರಾಗಿಣಿಗಳ ವಿಚಾರವು ಸಹ ಮಹತ್ವದ್ದಾಗಿದೆ. ಇತಿಹಾಸ ಪೂರ್ವ ಯುಗದಲ್ಲೇ ರಾಗ–ರಾಗಿಣಿಗಳ ಜನ್ಮವಾಗಿರಬಹುದು. ಭಾರತೀಯ ಸಂಗೀತದ ಇತಿಹಾಸ ದಾಖಲೆಯನ್ನು ಗಮನಿಸಿದಾಗ ಕಾಳಿದಾಸನ ಕುಮಾರಸಂಭವದಲ್ಲಿ **'ಕೌಶಿಕ'** ರಾಗದ ಉಲ್ಲೇಖವಿದೆ. ಈ **'ಕೌಶಿಕ'** ರಾಗವು ವಿದರ್ಭ ದೇಶದ ಧ್ವನಿಯ ಮೇಲೆ ಅವಲಂಬಿತವಾಗಿದೆ. ಈ ಹಿಂದೆ ಶಾಸ್ತ್ರೀಯ ಸಂಗೀತವು ಕೇವಲ ರಾಜದರ್ಬಾರು ಮತ್ತು ದೇವಾಲಯಗಳಲ್ಲಿ ಮಾತ್ರ ಪ್ರದರ್ಶನವಾಗುತ್ತಿತ್ತು. ಆದರೆ ಇಂದು ಅವು ಅಕಾಶವಾಣಿ ಮತ್ತು ದೂರದರ್ಶನವಾಹಿನಿಗಳ ಮೂಲಕ ಜನ ಸಾಮಾನ್ಯರವರೆಗೂ ತಲುಪುತ್ತಿವೆ.

ಶಾಸ್ತ್ರೀಯ ಸಂಗೀತದಲ್ಲಿ ಯಾವ ವ್ಯಕ್ತಿಯು ಸ್ವಯಂ ಸಂಗೀತದ ಸಾಧನೆಯನ್ನು ಮಾಡುವ ಸಾಧಕನಾಗಿರುತ್ತಾನೋ ಮತ್ತು ಅವರು ಜಿತೇಂದ್ರಿಯ ಮತ್ತು ಮನಸ್ಸನ್ನು ಶುದ್ಧವಾಗಿಟ್ಟುಕೊಂಡು ಗುರುಮುಖದಿಂದ ಸಂಗೀತ ಪಾರಾಯಣ ಮಾಡಿರುತ್ತಾರೋ ಅವರಿಗೆ ಸಂಗೀತ ಸರಸ್ವತಿಯ ಚರಣಾರವಿಂದಗಳಲ್ಲಿ ಸ್ಥಾನ ಲಭಿಸುತ್ತದೆ.

ವರ್ತಮಾನದ ಸಮಯದಲ್ಲಿ ಸಂಗೀತ ವಿದ್ಯಾಲಯ, ಸಂಗೀತ ಸಮ್ಮೇಳನ, ಆಕಾಶವಾಣಿ ಮತ್ತು ಸಂಗೀತ ಅಕಾಡೆಮಿ ಈ ನಾಲ್ಕು ಸಂಸ್ಥೆಗಳು ಭಾರತೀಯ ಸಂಗೀತ ಶಾಸ್ತ್ರೀಯ ಸಿದ್ಧಾಂತ ಮತ್ತು ವಾದನ, ಗಾಯನಗಳ ಪ್ರಾಯೋಗಿಕ ರೂಪವನ್ನು ಭಾರತೀಯ ಸಂಗೀತದ ಬೆಳವಣಿಗೆಗೆ ಸಾಕಷ್ಟು ಹಿನ್ನೆಲೆ ಒದಗಿಸಿವೆ.

೮. ಹಿಂದುಸ್ಥಾನೀ ಸಂಗೀತ ಮತ್ತು ಘರಾಣೆಗಳು

ಸಂಗೀತದ ಒಂದು ಮಹತ್ವದ ಕಾಲಘಟ್ಟವೆಂದರೆ ಹಿಂದೂಸ್ಥಾನದಲ್ಲಿ ಮುಸಲ್ಮಾನ ಆಡಳಿತದ ಕಾಲ. ಕೆಲವು ಮುಸ್ಲಿಂ ಅರಸರು ಸಂಗೀತವನ್ನು ಗೌರವದಿಂದ ಕಂಡರಲ್ಲದೆ, ತಮ್ಮ ಜೊತೆಯಲ್ಲಿ ಅನೇಕ ಕಲಾವಿದರನ್ನು ಭಾರತಕ್ಕೆ ಕರೆತಂದರು. ಆ ಕಲಾಕಾರರು ಸಂಗೀತವನ್ನು ರಹಸ್ಯವಾಗಿ, ತಮ್ಮ ವಂಶದವರಿಗೆ ಮಾತ್ರ ಸಂಗೀತಾಭ್ಯಾಸ ಮಾಡಿಸುತ್ತಿದ್ದರು. ಗುರುಕುಲ ಪದ್ಧತಿಯಲ್ಲಿ ಗುರು ತಮ್ಮ ಮನೆಯಲ್ಲಿಯೇ ಮಕ್ಕಳಿಗೆ, ಶಿಷ್ಯರಿಗೆ ವಿದ್ಯಾಭ್ಯಾಸ ಹೇಳಿಕೊಡುತ್ತಿದ್ದರು. ಶಿಷ್ಯಂದಿರು ತಮ್ಮ ಗುರುಗಳ ಮನೆಯಲ್ಲಿಯೇ ಇದ್ದು ಗುರುವಿನ ಸೇವೆಯನ್ನು ಮಾಡುತ್ತ, ಅವರಿಂದ ಸಂಗೀತ ವಿದ್ಯಾಭ್ಯಾಸವನ್ನು ಪಡೆಯುತ್ತಿದ್ದರು. ಇಂತಹ ಸಂದರ್ಭಗಳಲ್ಲಿ ಗುರುವಿನ ಅನುಕರಣೆಯಿಂದ ಪ್ರತಿಗಾಯಕನ ಗಾಯನದಲ್ಲಿ ಒಂದು ವೈಯಕ್ತಿಕ ಶೈಲಿ ಹುಟ್ಟಿಕೊಂಡಿತು. ಈ ಅನುಕರಣೆಯ ಗುಣದಿಂದ ಭಾರತೀಯ ಸಂಗೀತ ಜಾತಿ–ಗಾಯನದಿಂದ ರಾಗ ಗಾಯನಕ್ಕೆ, ರಾಗ ಗಾಯನದಿಂದ ಪ್ರಬಂಧ ಗಾಯನ ಹೀಗೆ ಬೆಳವಣಿಗೆಯಾಯಿತು. ಮೊದಲಿಗೆ ಧ್ರುಪದ್ ವಿಭಿನ್ನ ರಾಗ ಮುಂದೆ ಖ್ಯಾಲ್ ಗಾಯನ ಬಂತು. ಇವರಲ್ಲಿ ಪ್ರತಿಯೊಬ್ಬ ಗಾಯಕನ ಸ್ವಂತ ಪ್ರತಿಭೆ, ಸ್ವಂತಿಕೆ, ಸಾಮರ್ಥ್ಯ, ಪ್ರೌಢಿಮೆ ಇವುಗಳಿಂದ ನಿರೂಪಿಸಿದ ರಾಗ ನಿರೂಪಣೆ ಹೆಚ್ಚು ಜನಪ್ರಿಯವಾಗುತ್ತ ಬಂತು. **"ಖ್ಯಾಲ್"** ಗಾಯನದಲ್ಲಿ ವಿವಿಧ ಘರಾಣೆಗಳ ಉತ್ಪತ್ತಿಗೆ ಕಾರಣವಾದವು.

"ಘರಾಣೆ" ಎನ್ನುವ ಪದ ಗುರು–ಶಿಷ್ಯ ಪರಂಪರೆಯಿಂದ ಬಂದದ್ದು. ಘರಾಣಾ ಶಬ್ದದ ಅರ್ಥ ಸಂಪ್ರದಾಯ, ಪರಿವಾರ–ಕುಟುಂಬ, ವಂಶ–ಪರಂಪರೆ, ಮನೆತನ ಎಂದಾಗುತ್ತದೆ. ಘರಾಣಾ ಹಿಂದಿ ಮೂಲದ ಘರ ಎಂಬ ಶಬ್ದದಿಂದ ಬಂದಿದೆ. ಇದರ ಅರ್ಥ ಮನೆ ಪರಂಪರೆ.

ಹಿಂದೂಸ್ಥಾನಿ ಸಂಗೀತ ಮತ್ತು "ಘರಾಣಾ" ಗುರುಕುಲ ವಿಚಾರ

ಒಂದೊಂದು ಘರಾಣಾ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಭಾರತದ ಅನೇಕ ಶ್ರೇಷ್ಠ ಗಾಯಕರು ಒಂದೊಂದು ಘರಾಣ ಪದ್ಧತಿಯಿಂದ ಗುರುತಿಸಲ್ಪಡುತ್ತಾರೆ. ಹಿಂದೂಸ್ಥಾನಿ ಸಂಗೀತ ಕ್ಷೇತ್ರದಲ್ಲಿ **"ಘರಾಣಾ"** ಎಂದರೆ ವಿಶಿಷ್ಟವಾದ ಶೈಲಿ, ಪದ್ಧತಿ, ಪರಂಪರೆ ಎಂಬುದಾಗಿದೆ. **"ಘರಾಣಾ"** ಎಂಬುದು ಸಂಗೀತಶಾಸ್ತ್ರದ ಸತ್–ಸಂಪ್ರದಾಯ, ಆಚಾರ, ಪವಿತ್ರತೆಯ ಲಕ್ಷಣಗಳನ್ನು ಸಹ ಹೊಂದಿದೆ. ಬೇರೆ ಬೇರೆ ಘರಾಣಾ ಪದ್ಧತಿಗಳ ಗಾಯಕಿಯಲ್ಲಿ ಪ್ರಮುಖವಾದ ಅಂಶಗಳಿಗೆ ಪ್ರಾಧಾನ್ಯತೆ ಇರುವುದರಿಂದ ಬೇರೆ ಬೇರೆ ರಸಸ್ವಾದನೆಗೆ ಅನುಕೂಲವಾಗುತ್ತದೆ. ಕೆಲವು **"ಘರಾಣಾ"** ಪದ್ಧತಿಗಳು ಸ್ವರಕ್ಕೆ ಪ್ರಾಧಾನ್ಯತೆ ನೀಡಿದರೆ ಕೆಲವು ತಾನ್, ಲಯಗಳಿಗೆ ಪ್ರಾಧಾನ್ಯತೆ ನೀಡುತ್ತವೆ.

೧೧ ರಿಂದ ೧೨ ನೇ ಶತಮಾನದವರೆಗೂ ಒಂದೇ ಆಗಿದ್ದ ಭಾರತೀಯ ಸಂಗೀತ, ೧೩ನೇ ಶತಮಾನದ ವೇಳೆಗಗೆ ಪರ್ಶಿಯನ್ ಸಂಗೀತದ ಪ್ರಭಾವದಿಂದ, ಹಿಂದೂಸ್ಥಾನ ಸಂಗೀತ ಬೇರೆಯಾಗಿ ಬೆಳವಣಿಗೆ ಆರಂಭವಾದ ಮೇಲೆ, ವಿಭಿನ್ನ ಘರಾಣೆಗಳು ಜನ್ಮ ತಳೆದು, ಬೆಳವಣಿಗೆ ಹೊಂದಿದವು. ಘರಾಣಗಳ ಪ್ರಸಿದ್ಧ ಗಾಯಕರು, ಸಂಗೀತದಲ್ಲಿ ತಮ್ಮದೇ ಆದ ವಿಶಿಷ್ಟ ಗಾಯನ ಶೈಲಿ ರೂಢಿಗೆ ತಂದು, ತಮ್ಮ ಮಕ್ಕಳಿಗೆ ಹಾಗೂ ಶಿಷ್ಯರಿಗೆ ಅದೇ ಬಗೆಯ ಸಂಗೀತಗಾಯನ ವಿಧಾನವನ್ನು ಕಲಿಸಿ, ಪ್ರಚಾರಗೊಳಿಸಿದರು. ಈ ರಾಗ ಶೈಲಿಗಳಿಗೆ ಘರಾಣಾ ಇಲ್ಲವೆ ಗಾನ ಪರಂಪರೆ ಎಂದು ಹೆಸರಿಸಿದ್ದಾರೆ. ಘರಾಣದಲ್ಲಿ ಹಾಡುವ ರಾಗಗಳು ಒಂದೇ ಆಗಿದ್ದರೂ, ಪ್ರತಿಯೊಂದು ಪರಂಪರೆಯ ರಾಗ ಬಿತ್ತರಿಸುವ ಗಾಯನ ಶೈಲಿಯು ಬೇರೆಯಾಗಿವೆ. ಹಿಂದೂಸ್ಥಾನದಲ್ಲಿ ಪ್ರಸ್ತುತ ಪ್ರಚಲಿತವಿರುವ ಕೆಲವು ಘರಾಣೆಗಳ ಹೆಸರು ಇಂತಿವೆ.

೧. **ಗ್ವಾಲಿಯರ್**
೨. **ಜೈಪುರ**
೩. **ಆಗ್ರಾ**
೪. **ದಿಲ್ಲಿ**
೫. **ಕಿರಾಣಾ**
೬. **ಪಟಿಯಾಲಾ**

೧. ಗ್ವಾಲಿಯರ್ ಘರಾಣ:

ಗ್ವಾಲಿಯರ್ ಘರಾಣಾ ಪದ್ಧತಿಯು ಖ್ಯಾಲದ ಸುಪ್ರಸಿದ್ಧ ಘರಾಣಾ ಆಗಿದೆ. ಲಖೌನೌ ಘರಾಣೆಯ ಗುಲಾಮ ಸರೂಲ ಈ ಘರಾಣಾ ಪರಂಪರೆಯ ಮೂಲಪುರುಷರು. ಗುಲಾಮ ಸರೂಲರ ಕಾಲದಲ್ಲಿ ಲಖನೌ ಘರಾಣೆಗೆ ಸ್ವತಂತ್ರ ಅಸ್ತಿತ್ವ ಇರಲಿಲ್ಲ. ಅದು ವಿಭಿನ್ನ ಘರಾಣೆಯಲ್ಲಿ ಸಮ್ಮಿಲಿತವಾಗಿತ್ತು. ಈ ಘರಾಣೆಯ ಹದ್ದೂ, ಹಸ್ಸೂ, ನದ್ದೂಖಾನ್ ಸಹೋದರರು ಪ್ರಸಿದ್ಧ ಖ್ಯಾಲ ಗಾಯಕರಾಗಿದ್ದು, ಗ್ವಾಲಿಯರ್ ದರ್ಬಾರ ಗಾಯಕರಾಗಿದ್ದರು. ಹದ್ದೂ–ಹಸ್ಸೂಖಾನ ಇವರ ಶಿಷ್ಯ ಪರಂಪರೆಯ ಮಾಧ್ಯಮದಿಂದ ಗ್ವಾಲಿಯರ್ ಘರಾಣೆಯ ವಿಸ್ತಾರವು ದೇಶದ ವಿಭಿನ್ನ ಪ್ರದೇಶಗಳಲ್ಲಿ ಆಯಿತು. ಗ್ವಾಲಿಯರ್ ಘರಾಣಾದ ಗಾಯನದ ತಾನುಗಳು ತಮ್ಮದೇ ಆದ ಸ್ಪಷ್ಟತೆಯಿಂದ ಕೂಡಿವೆ.

- ಮುಕ್ತ (ಖುಲ್ಲಾ) ಧ್ವನಿಯಿಂದ ಜೋರಿನಿಂದ ಹಾಡುವುದು
- ಧೃಪದ ಅಂಗದಿಂದ ಖ್ಯಾಲಗಾಯನವನ್ನು ಬಿತ್ತರಿಸುವುದು
- ಬೋಲತಾನಗಳಲ್ಲಿ ಲಯಕಾರಿಗಳನ್ನು ತೋರುವುದು
- ಗಮಕಗಳನ್ನು ಹಾಗೂ ಸರಳ ಸಪಾಟ ತಾನು ಪ್ರಯೋಗಿಸುವುದು
- ಅಲಾಪಗಳನ್ನು ಪ್ರಸ್ತುತಪಡಿಸುವ ವಿಶೇಷ ರೀತಿ.

೨. ಜೈಪುರ ಘರಾಣಾ:

ಈ ಘರಾಣೆಗೆ ನೂರೈವತ್ತು ವರ್ಷಗಳ ಇತಿಹಾಸವಿದೆ. ಈ ಘರಾಣಾದ ಮೂಲಪುರುಷರು ಮನರಂಗರು ಎಂದು ಅಭಿಪ್ರಾಯಪಡಲಾಗುತ್ತದೆ. ಈ ಘರಾಣಾದ ಪ್ರಮುಖ ಕಲಾವಿದರೆಂದರೆ ರಾಜಬ ಅಲೀಖಾನ್. ಇವರು ತಾನಸೇನ್ ವಂಶಜರೆಂಬ ಪ್ರತೀತಿ ಇದೆ. ಮುಂದೆ ಜೈಪುರ ಘರಾಣಾ ಎರಡು ಭಾಗಗಳಾಗಿ ಬೆಳವಣಿಗೆ ಹೊಂದಿದವು ಅದೆಂದರೆ ಪಟಿಯಾಲ ಘರಾಣಾ ಮತ್ತು ಅಲ್ಲಾದಿಯಾ ಘರಾಣಾ.

ಜೈಪುರ ಘರಾಣಾದ ಗಾಯನ ವೈಶಿಷ್ಟ್ಯಗಳು.

- ಧ್ವನಿ ನಿಯಂತ್ರಣದ ಸ್ವತಂತ್ರ ಶೈಲಿ
- ಖುಲ್ಲಾ ಆವಾಜಿನ ಗಾಯನ
- ಗೀತದ ಸಂಕ್ಷಿಪ್ತ ಬಂದಿಷ ಇರುವುದು
- ಆಕರ್ಷಕ ತಾನ ಹಾಗೂ ಅಲಾಪದ ಸಣ್ಣ–ಸಣ್ಣ ತಾನುಗಳಿಂದ ರಾಗವನ್ನು ಲಯ ಅಂಗವಾಗಿ ವಿಸ್ತರಿಸುವುದು.
- ವಕ್ರತಾನ, ಮುಖಬಂದ ತಾನುಗಳನ್ನು ಹಾಡುವುದು
- ವಿಲಂಬಿತ ಗಮಕಯುಕ್ತ ಆಲಾಪಗಳನ್ನು ಮಾಡುವುದು
- ಖ್ಯಾಲ ಗಾಯನದ ವಿಶೇಷ ಬಂದೀಶ ಇರುವುದು.
- ಅತೀ ಕ್ಲಿಷ್ಟ ತಾನುಗಳನ್ನು ಹಾಡುವುದು.

೩. ಆಗ್ರಾ ಘರಾಣಾ:

ಭಾರತೀಯ ಸಂಗೀತದ ಪ್ರಸಿದ್ಧ ಘರಾಣೆ. ಅಲಕದಾಸ ಮತ್ತು ಮಲಕದಾಸ ಆಗ್ರಾ ಘರಾಣಾದ ಮೂಲಪುರುಷರು. ವಾಸ್ತವಿಕವಾಗಿ ತಾನ್‌ಸೇನ್‌ರ ಅಳಿಯ ಖಾಜಿಸುತಾನ ಈ ಘರಾಣಾದ ಮುಖ್ಯ ಪ್ರವರ್ತಕರು. ಆಗ್ರಾ ಘರಾಣಾದ ಅನೇಕ ಗಾಯನ ಸಂಗತಿಗಳು ಗ್ವಾಲಿಯರ್ ಘರಾಣೆಯೊಂದಿಗೆ ಸಾಮ್ಯತೆ ಹೊಂದಿದೆ. ಉಸ್ತಾದ್ ಪಯಾಜಖಾನ, ವಿಲಾಯತ್ ಹುಸೇನ್‌ಖಾನ ಈ ಘರಾಣೆಯ ಪ್ರಸಿದ್ಧ ಗಾಯಕರು.

ಆಗ್ರಾ ಘರಾಣಾದ ಗಾಯನ ವೈಶಿಷ್ಟ್ಯಗಳು

- ನೋಮ್–ತೋಮ್ ಆಲಾಪ ಮಾಡುವುದು
- ಬಂದೀಷದಾರ ಚೀಜುಗಳ ಗಾಯನ
- ಖುಲ್ಲಾ ಆವಾಜಿನ ಗಾಯನ
- ಖ್ಯಾಲ ಗಾಯನದೊಂದಿಗೆ ಧೃಪದ ಧಮಾರಗಳ ಗಾಯನ

- ಬೇಲ್ ತಾನಗಳಲ್ಲಿ ಪ್ರಾವಿಣ್ಯ

೪. ಕಿರಾಣಾ ಘರಾಣಾ:

ಈ ಘರಾಣಾದ ಪ್ರವರ್ತಕರೆಂದರೆ ಬಂದೇ ಅಲಿಖಾನ್. ಈ ಘರಾಣದ ಪ್ರಸಿದ್ಧ ಗಾಯಕರೆಂದರೆ ಅಬ್ದುಲ್ ಕರೀಂಖಾನ್ ಮತ್ತು ಅಬ್ದುಲ್ ವಹೀದ್‌ಖಾನ್.

೫. ದಿಲ್ಲಿ ಘರಾಣಾ:

ಭಾರತದ ಎಲ್ಲಾ ಘರಾಣಾಗಳಿಗಿಂತ ಪ್ರಾಚೀನವಾದುದು. ಇದು ದಿಲ್ಲಿಯ ಮೊಗಲ್ ಬಾದ್‌ಶಹ ಮೊಹಮ್ಮದ್ ಶಹಾನ ದರ್ಬಾರದಲ್ಲಿ ಈ ಗಾಯನ ಶೈಲಿಯು ಪ್ರಥಮವಾಗಿ ಉಗಮವಾಯಿತು. ಸದಾರಂಗ–ಅದಾರಂಗ ಎಂಬ ಖ್ಯಾಲ ಗೀತದ ಗಾಯಕರು ಇದರ ಪ್ರವರ್ತಕರು.

ದಿಲ್ಲಿ ಘರಾಣಾದ ಗಾಯನ ವೈಶಿಷ್ಟ್ಯಗಳು

- ತಾನುಗಳನ್ನು ಹೇಳುವ ವಿಚಿತ್ರ ಪದ್ಧತಿಗಳು. ಜೋಡ–ಜೋಡ ತಾನು; ವಿಖೇಡ ತಾನು, ಪಂದೇ ತಾನು ಮುಂತಾದವು.
- ದೃತ್ ಲಯದಲ್ಲಿ ತಾನುಗಳ ಪ್ರಯೋಗ
- ತಾಲ–ಲಯಗಳ ಮೇಲೆ ಪ್ರಭುತ್ವ
- ತಾನು–ಬಂಧಾನುಗಳಲ್ಲಿ ಆಕಾರದ ಸಿಹಿ ಪ್ರಯೋಗ ಹಾಗೂ ಅವುಗಳಲ್ಲಿಯ ಅವಗುಣಗಳನ್ನು ಕಾಣದಂತೆ ಹಾಡುವುದು.
- ಗಾಯನದ ಅಂಗಗಳಲ್ಲಿ ಸುಂದರ ಸ್ವರಗಳನ್ನು ಬೆರಸಿ, ಕಲಾತ್ಮಕ ಅಂಗವನ್ನು ಬಿತ್ತರಿಸುವುದು.

೧. **ಪಟಿಯಾಲಾ ಘರಾಣಾ:** ಬಡೇಗುಲಾಮಲಿಖಾನರು ಈ ಘರಾಣಾದ ಪ್ರವರ್ತಕರು. ಇದು ಕಿರಾಣಾ–ಜೈಪುರ ಶೈಲಿಯ ಮಿಶ್ರಣದಿಂದ ಉತ್ಪನ್ನವಾದ ಗಾಯನ ಶೈಲಿಯಾಗಿದೆ.

೨. **ಅಲ್ಲಾದಿಯಾ ಘರಾಣಾ:** ಅಲ್ಲಾದಿಯಾಖಾನರೇ ಈ ಘರಾಣೆಯ ಸಂಸ್ಥಾಪಕರು. ಇವರು ಸ್ವತಃ ಕುಶಲ ಗಾಯಕರಾಗಿದ್ದರಲ್ಲದೆ, ಪಂಡಿತ್ ಮಲ್ಲಿಕಾರ್ಜುನ ಮನ್ಸೂರರಂಥ ಶಿಷ್ಯ ಪರಂಪರೆಯನ್ನು ನೀಡಿದ್ದಾರೆ. ಕಿಶೋರಿ ಅಣವೇಕರ, ಕೇಸರಿಬಾಯಿ ಕೇರ್ಕರ, ಮಂಜೀಖಾನ ಮುಂತಾದವರು ಈ ಘರಾಣದ ಪ್ರಸಿದ್ಧ ಗಾಯಕರು.

ಡಾ. ಶ್ರೀಮತಿ ಶಶಿಕಲಾ ವ್ಹಿ. ಚವಡಿ.

ಅನುಬಂಧ

ಪತ್ರಿಕಾ ಪ್ರಕಟಣೆಗಳು

ಹಿಂದೂಸ್ಥಾನಿ ಹಾಡುಹಕ್ಕಿ ಹುಮಾಯೂನ್ ಹರಲಾಪುರ

ರಾಜ್ಯದಲ್ಲಿ ಹಿಂದೂಸ್ಥಾನಿ ಸಂಗೀತಕ್ಕೆ ಉತ್ತರ ಕರ್ನಾಟಕ ಗಟ್ಟಿ ನೆಲೆ. ಬೆಂಗಳೂರು–ಮೈಸೂರಿನ ದಕ್ಷಿಣ ಕರ್ನಾಟಕ ಭಾಗದಲ್ಲಿ ದಕ್ಷಿಣಾದಿ ಸಂಗೀತ ಭದ್ರವಾದ ನೆಲೆಗಟ್ಟನ್ನು ಹೊಂದಿದೆ. ಆದರೂ ಉತ್ತರಾದಿಯ ಹಿಂದೂಸ್ಥಾನಿ ಸಂಗೀತಕ್ಕೆ ಹದವಾದ ವಾತಾವರಣವಿದೆ. ಆದರೆ ಮಲೆನಾಡಿನ ಹೆಬ್ಬಾಗಿಲೆಂದೇ ಹೆಸರಾದ ಶಿವಮೊಗ್ಗವನ್ನು ಹಿಂದೂಸ್ಥಾನಿ ಸಂಗೀತದ ಮುಖ್ಯ ಕೇಂದ್ರವನ್ನಾಗಿಸಿದವರಲ್ಲಿ ಉಸ್ತಾದ್ ಹುಮಾಯೂನ್ ಹರಲಾಪುರ ಪ್ರಮುಖರು.

1980 ರಿಂದ ಈಚೆಗಷ್ಟೇ ಮಲೆನಾಡು ಭಾಗದಲ್ಲಿ ಹಿಂದೂಸ್ಥಾನಿ ಸಂಗೀತವನ್ನು ನೆಲೆಯೂರಿಸುವ ಬಲವಾದ ಪ್ರಯತ್ನ ಪ್ರಾರಂಭವಾಯಿತು. ಶಿವಮೊಗ್ಗವನ್ನು ಕೇಂದ್ರವನ್ನಾಗಿಸಿಕೊಂಡು ಸಂಗೀತದ ಸುಧೆಯನ್ನು ಹರಡುವ ಯತ್ನ ನಡೆಯತೊಡಗಿತು. ಹರಿದು ಹಂಚಿದ್ದ ಕೆಲವೇ ಹಿಂದೂಸ್ಥಾನಿ ಸಂಗೀತದ ಶ್ರೋತೃಗಳನ್ನು ಸಂಗೀತದ ಕಾರ್ಯಕ್ರಮಗಳ ಮೂಲಕ ಒಂದೆಡೆ ಕಲೆ ಹಾಕಲಾಯಿತು.

ಉತ್ತರ ಕರ್ನಾಟಕದಿಂದ ಮಲೆನಾಡಿನ ಶಿವಮೊಗ್ಗಕ್ಕೆ ಹಾರಿ ಬಂದ ಹುಮಾಯೂನ್ ಹರ್ಲಾಪುರರೆಂಬ ಹಿಂದುಸ್ತಾನಿ ಸಂಗೀತದ 'ಹಾಡುಹಕ್ಕಿ' ಇಂತಹ ಕಾರ್ಯಕ್ರಮಗಳಲ್ಲಿ ಹಾಡಿದಾಗ ಕೇಳಿದ ಶ್ರೋತೃಗಳೂ ತಲೆದೂಗತೊಡಗಿದರು. ಕಾಲ ಕಳೆದಂತೆ ಕೇಳುಗರ ಸಂಖ್ಯೆಯೂ ಹೆಚ್ಚುತ್ತಾ ಹೋಯಿತು.

ಸಪ್ತ ಸ್ವರಗಳ ಸಮರ್ಥ, ಸಮರ್ಪಕ ವಿಸ್ತಾರ, ಆಕರ್ಷಕ ಆರೋಹಣ–ಅವರೋಹಣ, ರಾಗ ಮಾಧುರ್ಯತೆ. ಅವುಗಳ ಮೇಲಿನ ಹಿಡಿತ, ನಾದೋಪಾಸನೆ, ಶಾರೀರ, ಹಿಂದೂಸ್ಥಾನಿ ಸಂಗೀತ ಕ್ಷೇತ್ರದಲ್ಲಿ ಹುಮಾಯೂನರನ್ನು ಖ್ಯಾತ ಹಾಡುಗಾರರನ್ನಾಗಿಸಿತು.

ಕೇವಲ ಹಿಂದೂಸ್ಥಾನಿ ಸಂಗೀತವಷ್ಟೇ ಅಲ್ಲ, ವಚನ ಸಂಗೀತ, ದಿಂಡೀ ಸಂಗೀತ (ಮರಾಠಿ ಅಭಂಗಗಳು), ಭಕ್ತಿ ಪ್ರಾಧಾನ್ಯತೆಯ ಲಘು ಸಂಗೀತದಲ್ಲೂ ಗಾಯನ ಸುಧೆಯನ್ನು ಹರಡುತ್ತಿದ್ದಾರೆ. ಇಂದಿಗೂ ಹಿಂದೂಸ್ಥಾನಿ ಕಚೇರಿಗಳಲ್ಲಿ ಮರಾಠಿ ಗೀತೆಗಳನ್ನು ಹಾಡುವ ಪರಿಪಾಠವಿದೆ. ಇದರಿಂದಾಗಿ ದಿಂಡೀ ಸಂಗೀತದ ಮೇಲೂ ಹುಮಾಯೂನರಿಗೆ ಹಿಡಿತವಿದೆ. ಅಲ್ಲದೆ ವಚನ ಗಾಯನಗಳ ಮೂಲಕ ಶಿವಶರಣರ ಅನುಭಾವದ ಮಹಾಮನೆಗೆ ಕೈ ಹಿಡಿದು ಕರೆದೊಯ್ಯುತ್ತಾರೆ. ವೀರಶೈವ–ಲಿಂಗಾಯತ ಮಠಗಳ ಸ್ವಾಮೀಜಿಗಳು ಹುಮಾಯೂನರನ್ನು 'ಶರಣ' ಎಂದೇ ಸಂಭೋಧಿಸುತ್ತಾರೆ.

ಕಳೆದ 25 ವರ್ಷಗಳಿಂದ ಸಂಗೀತ ಸಾಧನೆ ಮಾಡುತ್ತಾ, 1,200ಕ್ಕೂ ಹೆಚ್ಚು ಕಛೇರಿಗಳನ್ನು ನೀಡಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಹೆಚ್ಚಾಗಿ ಹಾಗೂ ರಾಜ್ಯದ ಬಹುತೇಕ ಎಲ್ಲಾ ಜಿಲ್ಲೆಗಳಲ್ಲೂ ಹುಮಾಯೂನ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟಿದ್ದಾರೆ. ಆಂಧ್ರ, ಕೇರಳ, ತಮಿಳುನಾಡು, ಗೋವಾಕ್ಕೂ ಗಾಯನ ಗಂಗೆಯನ್ನು ಹರಿಸಿದ್ದಾರೆ.

ಆಕಾಶವಾಣಿ ಬಿ 'ಹೈಗ್ರೇಡ್' ಕಲಾವಿದರಾಗಿದ್ದು, ರೇಡಿಯೋದಲ್ಲೂ ಗಾಯನ ನೀಡಿದ್ದಾರೆ. ಡಿಡಿ–1, ಉದಯಟಿವಿಯಲ್ಲೂ ಸಂಗೀತದ ಕಾರ್ಯಕ್ರಮಗಳು ಪ್ರಸಾರವಾಗಿವೆ.

ಮೌಲಾಸಾಬ್ ಹಾಗೂ ಹುಸೇನಬಿ ದಂಪತಿಗಳ ಪುತ್ರರಾಗಿ 1963ರಲ್ಲಿ ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಹರಲಾಪುರದಲ್ಲಿ ಹುಮಾಯೂನ್ ಹುಟ್ಟಿದರು. ಬಾಲ್ಯದಲ್ಲಿದ್ದಾಗ ತಾಯಿ ಹಾಡುತ್ತಿದ್ದ ಬೀಸುಕಲ್ಲು, ಸೋಬಾನೆ ಪದಗಳು, ತಂದೆ ಹೇಳುತ್ತಿದ್ದ ಶರೀಪಜ್ಜನ ಹಾಡುಗಳು ಈ ಹುಡುಗ ಸಂಗೀತವನ್ನು ಗುನುಗುವಂತೆ ಮಾಡಿತು. ನಂತರ ಹುಮಾಯೂನ್ ಗೆಳೆಯರ ಭಜನಾಬಳಗದೊಂದಿಗೆ ಧ್ವನಿ ಸೇರಿಸತೊಡಗಿದರು.

ಈ ಕಂಠವನ್ನು ಕೇಳಿದವರು ಶಾಸ್ತ್ರಬದ್ಧ ಸಂಗೀತವನ್ನು ಕಲಿಸುವಂತೆ ಅವರ ತಂದೆಗೆ ಒತ್ತಾಯಿಸತೊಡಗಿದರು. ಪಿಯುಸಿ ಶಿಕ್ಷಣ ಪೂರೈಸಿದ ನಂತರ 8 ವರ್ಷ ಹಣೆಗೆ ವಿಭೂತಿ ಹಚ್ಚಿಕೊಂಡು, ಕೊರಳಲ್ಲಿ ರುದ್ರಾಕ್ಷಿ ಧರಿಸಿ ಶ್ರದ್ಧಾಭಕ್ತಿಯಿಂದ ಸಂಗೀತಾಭ್ಯಾಸ ನಡೆಸಿದರು. ಸಂಗೀತ ಶಾರದೆಯ ಪೂಜೆಯೊಂದಿಗೆ ವಾರಕ್ಕೆರಡು ಬಾರಿ ನಮಾಜ್ ಕೂಡ ಮಾಡುತ್ತಿದ್ದರು. ಸಂಗೀತವನ್ನು ಕಲಿಯಬೇಕೆಂಬ ಉತ್ಕಟ ಬಯಕೆಗೆ ಧರ್ಮ ಅಡ್ಡಿ ಬರಲಿಲ್ಲ. ಪಂಡಿತ ಡಾ. ಪುಟ್ಟರಾಜ ಗವಾಯಿಗಳು ಹಾಗೂ ಫಕಿರೇಶ ಕಣವಿ ಅವರ ಶಿಷ್ಯರಾಗಿ ಸಂಗೀತ ಕಲಿತು ಕಛೇರಿಗಳನ್ನು ನೀಡತೊಡಗಿದರು.

1988ರಲ್ಲಿ ಹುಟ್ಟೂರು ತೊರೆದು ಶಿವಮೊಗ್ಗಕ್ಕೆ ಬಂದರು. ಇಲ್ಲಿನ ಗಾನಯೋಗಿ ಪಂಚಾಕ್ಷರಿ ಟ್ರಸ್ಟ್‌ನ ಸದಸ್ಯರಾಗಿ ಪಂಚಾಕ್ಷರಿ ಸಂಗೀತ ವಿದ್ಯಾಲಯದಲ್ಲಿ ಸಂಗೀತ ಶಿಕ್ಷಕರಾಗಿ 14 ವರ್ಷ ಕೆಲಸ ಮಾಡಿದರು. ಈ ಅವಧಿಯಲ್ಲಿ ಮಲೆನಾಡು ಜಿಲ್ಲೆಯಲ್ಲಿ ಅಲ್ಲಲ್ಲಿ ನಡೆಯುತ್ತಿದ್ದ ಹಿಂದೂಸ್ಥಾನಿ ಕಛೇರಿಗಳ ಸಂಖ್ಯೆಯನ್ನು ಹೆಚ್ಚಿಸಿ, ಶೋತೃಗಳನ್ನು ಸೆಳೆದರಲ್ಲದೆ ಅನೇಕ ಶಿಷ್ಯಂದಿರನ್ನು ತಯಾರು ಮಾಡಿದರು.

ಪ್ರಸ್ತುತ ಶಿವಮೊಗ್ಗ ತಾಲೂಕಿನ ಆಯನೂರು ಹೋಬಳಿ ವ್ಯಾಪ್ತಿಯ ತಮ್ಮಡಿ ಹಳ್ಳಿಯ ಸರ್ಕಾರಿ ಶಾಲೆಯಲ್ಲಿ ಸಂಗೀತ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲದೆ ಶ್ರೀಗುರು ಪುಟ್ಟರಾಜ ಕೃಪಾಗಾನ ಮಂದಿರವನ್ನು ನಡೆಸುತ್ತಿದ್ದಾರೆ. ಶಾಸಕ, ಚಲನಚಿತ್ರನಟ ಕುಮಾರ್ ಬಂಗಾರಪ್ಪ ಕೂಡ ಹುಮಾಯೂನ್‌ರ ಬಳಿ ಕೆಲಕಾಲ ಸಂಗೀತ ಕಲಿಕೆಯ ಅಭ್ಯಾಸ ನಡೆಸಿದ್ದಾರೆ. ಹುಮಾಯೂನ್ ಕೇವಲ ಶಿವಮೊಗ್ಗಕಷ್ಟೇ ಸಂಗೀತ ತರಗತಿಗಳನ್ನು ನಡೆಸದೆ ಜಿಲ್ಲೆಯ ತಾಲೂಕು ಕೇಂದ್ರಗಳಾದ ಸಾಗರ, ಸೊರಬ, ತೀರ್ಥಹಳ್ಳಿಯಲ್ಲೂ ಹಿಂದೂಸ್ಥಾನಿ ಸಂಗೀತವನ್ನು ಕಲಿಸಿಕೊಟ್ಟಿದ್ದಾರೆ.

ಇವರ ಸಂಗೀತ ಸೇವೆಯನ್ನು ಗುರುತಿಸಿ ಪಂಡಿತ ಪುಟ್ಟರಾಜರ ಕೃಪಾ ಭೂಷಣ, ಸಂಗೀತ ಚತುರ, ಗಾಯನ ಸಾಮ್ರಾಟ್, ಸಂಗೀತ ಭ್ರಮರ, ಸಂಗೀತ ಕಲಾ ಕೇಸರಿ, ಸಂಗೀತ ಕಲಾಭೂಷಣ, ಭಾವೈಕ್ಯ ಗಾನ ಕೋಗಿಲೆ, ಗಾಯನ ಚತುರ, ಗಾನರತ್ನ, ಗಾನ ಸುಧಾಕರ, ಸಂಗೀತ ವಿಶಾರದ ಹೀಗೆ ಹಲವು ಬಿರುದುಗಳನ್ನಿತ್ತು ಗೌರವಿಸಲಾಗಿದೆ.

ಇಷ್ಟೆಲ್ಲಾ ಸಾಧನೆಗಳ ನಡುವೆಯೂ ಹುಮಾಯೂನ್ **"**ಸಂಗೀತದಲ್ಲಿ ತಾವಿನ್ನೂ ವಿದ್ಯಾರ್ಥಿ ಕಲಿಯುವುದಿನ್ನೂ ಸಾಕಷ್ಟಿದೆ**"** ಎಂದು ವಿನಮ್ರರಾಗಿಯೇ ನುಡಿಯುತ್ತಾರೆ. ಇದು ಕೇವಲ ತೋರಿಕೆಗೆ ಆಡುವ ಮಾತಲ್ಲ. ಮನದಾಳದ ನುಡಿ.

ಲೇಖಕರು: ಸಂತೋಷ್ ಎಲಿಗಾರ್.

ಪಂಚಪ್ರಶ್ನೆ:

1. ಸಂಗೀತದ ನಂಟು ಬೆಳೆದದ್ದು ಹೇಗೆ?

ನಮ್ಮ ತಂದೆ ದಿನಾ ಬೆಳಗ್ಗೆ 4 ಗಂಟೆಗೆ ಎದ್ದು ಸಂತ ಶಿಶುನಾಳ ಷರೀಫರ ತತ್ವಪದಗಳನ್ನು ಏಕನಾದದಲ್ಲಿ ತುಂಬಾ ಇಂಪಾಗಿ ಹಾಡ್ತಾ ಇದ್ರು. ನಾನು ನಿತ್ಯವೂ ಆಲಿಸುತ್ತಿದ್ದೆ. ಹಾಗೇ ಊರಲ್ಲಿ ನಡೆಯುವ ಭಜನೆ ಮೇಳದಲ್ಲಿ ಸೇರ್ಕಂಡು ನಾನು ಹಾಡಲಿಕ್ಕೆ ಶುರು ಮಾಡ್ದೆ. ಆ ಸಂದರ್ಭ ಗೆಳೆಯರು, ಪೋಷಕರು ಪ್ರೋತ್ಸಾಹಿಸಿದರು. ನಂತರ ಗದಗ ವೀರೇಶ್ವರ ಪುಣ್ಯಾಶ್ರಮದಲ್ಲಿ ಡಾ.ಪುಟ್ಟರಾಜ ಗವಾಯಿಗಳ ಶಿಷ್ಯನಾದೆ.

2. ಪುಟ್ಟರಾಜ ಗವಾಯಿಗಳ ಶಿಷ್ಯರಾಗಿ ನಿಮ್ಮ ಅನುಭವ?

ಗುರು ಡಾ.ಪುಟ್ಟರಾಜ ಕವಿ ಗವಾಯಿಗಳು ಗಾಂಧಿ ತತ್ವ ಪರಿಪಾಲಕರು. ನಮಗೆ ಗಾಂಧಿ ತತ್ವದಡಿಯಲ್ಲೇ ಶಿಕ್ಷಣ ನೀಡುತ್ತಿದ್ದರು. ಖಾದಿಯ ಜುಬ್ಬ, ಪೈಜಾಮ, ಟೊಪ್ಪಿ ಧರಿಸುವುದು ಕಡ್ಡಾಯವಾಗಿತ್ತು. ಜಾತಿ ಭೇದ ಮಾಡುತ್ತಿರಲಿಲ್ಲ. ಅವರು ಶಿಸ್ತಿನ ಸಿಪಾಯಿ. ಎಲ್ಲ ವರ್ಗದ ವಿದ್ಯಾರ್ಥಿಗಳೂ ಅಲ್ಲಿ ಸಂಗೀತ ಅಭ್ಯಾಸ ಮಾಡುತ್ತಿದ್ದಾರೆ. ಸಂಗೀತದ ಜತೆಗೆ ನಮಗೆ ಅಲ್ಲಿ ದೊರೆತದ್ದು ಸಂಸ್ಕಾರ, ಕಲಿತದ್ದು ಸಂಸ್ಕೃತಿ.

3. ಗುರುಮುಖೇನ ಶಿಕ್ಷಣ ಬೇಕಾ?

ಖಂಡಿತ. ಹಿಂದೆ ಗುರುಗಳನ್ನು ಹುಡುಕಿಕೊಂಡು ಶಿಷ್ಯರು ಹೊಗ್ತಾ ಇದ್ರು. ಆದರೆ ಈಗ ಶಿಷ್ಯರನ್ನೇ ಹುಡುಕಿಕೊಂಡು ಗುರು ಹೋಗಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಅಂದಿದ್ದ ಗುರು ಶಿಷ್ಯರ ನಡುವಿನ ಗೌರವ, ಭಕ್ತಿ, ಮಧುರ ಬಾಂಧವ್ಯ ಮರೆಯಾಗಿದೆ. ಸಂಗೀತ ಶಿಕ್ಷಣ ಅನ್ನೋದು ವ್ಯಾಪಾರಿಕರಣವಾಗಿ ಬಿಟ್ಟಿದೆ. ದುಡ್ಡು ಕೊಟ್ಟು ಎಷ್ಟು ಬೇಕೋ ಅಷ್ಟು ಮಾತ್ರ ಹೇಳಿಸಿಕೊಳ್ಳುತ್ತಾರೆ. ಪೂರ್ಣ ಪ್ರಮಾಣದಲ್ಲಿ ಕಲಿಯುವ ಆಸಕ್ತರ ಸಂಖ್ಯೆ ಕಡಿಮೆಯಾಗಿದೆ.

4. ಸರಕಾರ ಏನು ಮಾಡಬೇಕು?

ಸಂಗೀತ ಗ್ಲೋಬಲ್. ಅದಕ್ಕೆ ಯಾವ ಗಡಿಯೂ ಇಲ್ಲ. ಇದೇ ರೀತಿ ಸಂಗೀತಗಾರರೂ ಕೂಡ. ನಾಡಿನಲ್ಲಿ ಒಳ್ಳೆಯ ಅಂಥ ಕಲಾವಿದರಿದ್ದಾರೆ. ಅವರಿಗೆ ವೇದಿಕೆಗಳನ್ನು ಕಲ್ಪಿಸಿಕೊಡಬೇಕು. ಅಲ್ಲದೆ ಅಂತಹರನ್ನು ಸರಕಾರ ಗುರುತಿಸಿ ಪ್ರೋತ್ಸಾಹಿಸಬೇಕು.

5. ಯುವ ಗಾಯಕರಿಗೆ ಏನು ಹೇಳ್ತೀರಿ?

ಸಂಗೀತಕ್ಕೆ ಏಕತೆ ಮೂಡಿಸುವ ಶಕ್ತಿ ಇದೆ. ಅಲ್ಲದೆ ಗಾಯಕರು ವೃತ್ತಿಯಲ್ಲಿ ಶಿಸ್ತನ್ನು ರೂಢಿಸಿಕೊಳ್ಳುವುದರ ಜತೆಗೆ ಶಾಸ್ತ್ರಬದ್ಧವಾಗಿ ಸಂಗೀತವನ್ನು ಕಲಿಯಬೇಕು. ಪಾಶ್ಚಾತ್ಯ ಸಂಗೀತಕ್ಕೆ ಮಾರು ಹೋಗಬಾರದು. ಸತತ ಸಾಧನೆಯಿಂದಷ್ಟೇ ಪರಿಪೂರ್ಣತೆ ಸಾಧ್ಯ.

ವಿಜಯಕರ್ನಾಟಕ ಸೋಮವಾರ, 23 ಮಾರ್ಚ್ 2009

ಸುರೇಶ್ ವಿ. ಬಿಸ್ಲಳ್ಳಿ, ಶಿವಮೊಗ್ಗ

ಗಾಯನವೇ ಉಸಿರು

ಮನೆಯೇ ಪಾಠ ಶಾಲೆ, ತಾಯಿಯೇ ಮೊದಲ ಗುರು ಎಂಬ ಮಾತಿದೆ. ತಾಯಿ ಮನೆಯಲ್ಲಿ ಸದಾ ಗುನುಗುತ್ತಿದ್ದ ಬೀಸೋ ಪದ ಹಾಗೂ ತಂದೆ ಏಕತಾರಿಯನ್ನು ಮೀಟಿ ಹಾಡುತ್ತಿದ್ದ ಸಂತ ಶಿಶುನಾಳ ಷರೀಫರ ತತ್ವ ಪದಗಳನ್ನು ಅಂದು ಆಲಿಸುತ್ತಿದ್ದ ಬಾಲಕನೊಬ್ಬ ಇಂದು ಸಂಗೀತ ಪ್ರೇಮಿಗಳು, ವಿದ್ವಾಂಸರು ಗುರುತಿಸುವಷ್ಟು ಮಟ್ಟಿಗೆ ಬೆಳೆದಿದ್ದಾರೆ. ಅಷ್ಟೇ ಅಲ್ಲ ಶಿಶುನಾಳರಂತೆ ಧರ್ಮ ಸಮನ್ವಯದ ಹರಿಕಾರರು ಆಗಿದ್ದಾರೆ. ಅರೇ ಶಿವಮೊಗ್ಗದ ಸಂಗೀತ ಕಲಾವಿದ ಉಸ್ತಾದ್ ಹುಮಾಯೂನ್ ಹರ್ಲಾಪುರ್.

ಹೌದು, ಹುಟ್ಟಿದ್ದು ಇಸ್ಲಾಂ ಧರ್ಮದಲ್ಲಿ. ವಚನ, ಗಾಯನ ಹಿಂದೂ ಧರ್ಮದಲ್ಲಿ ಎಂತವರನ್ನೂ ಮಂತ್ರಮುಗ್ಧರನ್ನಾಗಿಸುವ ಶಕ್ತಿ ಅವರ ಕಂಚಿನ ಕಂಠಕ್ಕಿದೆ.

ಮೂಲತಃ ಧಾರವಾಡ ಜಿಲ್ಲೆ ಕುಂದಗೋಳದ ಹಲಾಪುರ ಗ್ರಮದ ಇವರು ೩೦ ವರ್ಷಗಳಿಂದ ಶಿಮೊಗ್ಗದಲ್ಲಿವಾಸ. ನಿತ್ಯ ಸಂಗೀತ ಸೇವೆಯ ಕಾಯಕ. ಆಯನೂರು ಜೂನಿಯರ್ ಕಾಲೇಜಿನಲ್ಲಿ ಸಂಗೀತ ಉಪಾಧ್ಯಾಯ ಹಾಗೂ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸಿಂಡಿಕೇಟ್ ಸದಸ್ಯರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಗದಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ದೀರ್ಘಕಾಲ ಸಂಗೀತಾಭ್ಯಾಸ ನಡೆಸಿ, ಪಂ. ಪುಟ್ಟರಾಜ ಕವಿ ಗವಾಯಿಗಳ ನೆಚ್ಚಿನಶಿಷ್ಯರೆನಿಸಿಕೊಂಡರು. ೬೦ಕ್ಕೂ ಹೆಚ್ಚು ರಾಗಗಳಲ್ಲಿ ಸುಶ್ರಾವ್ಯವಾಗಿ ಹಾಡಬಲ್ಲರು. ಬಿಳಿ ಜುಬ್ಬಾ, ಗಾಂಧಿ ಟೋಪಿ, ಹಣೆಗೆ ವಿಭೂತಿ, ಕೊರಳಿಗೆ ರುದ್ರಾಕ್ಷಿಮಾಲೆ ಧರಿಸಿ ಅಭ್ಯಾಸಕ್ಕೆ ಕುಳಿತರೆ ಮುಸ್ಲಿಮನೆಂಬುದನ್ನು ಮೈ ಮರೆತು ಬಿಡುತ್ತಿದ್ದ ಇವರೀಗ ಶಿವಮೊಗ್ಗದಲ್ಲಿ ಶ್ರೀ ಗುರುಕೃಪ ಗಾನಮಂದಿರ ಸಂಗೀತ ಶಾಲೆ ಆರಂಭಿಸಿ, ಯುವ ಪೀಳಿಗೆಗೆ ಸಂಗೀತವನ್ನು ಧಾರೆ ಎರೆಯುತ್ತಿದ್ದಾರೆ. ರಾಗ, ತಾಳ, ಲಯ, ಬದ್ಧ ಹಾಗೂ ಸುಶ್ರಾವ್ಯವಾಗಿ ವಚನಗಳನ್ನು ಹಾಡುವ ಪರಿ ಸಂಗೀತಪ್ರಿಯರನ್ನು ಸೆಳೆಯದಿರದು. ನಾಡಿನಾದ್ಯಂತ ಹಿಂದೂಸ್ಥಾನಿ ಶಾಸ್ತ್ರೀತ ಸಂಗೀತ, ವಚನ, ಸಂಗೀತ, ಸುಗಮ ಸಂಗೀತ ಕಛೇರಿ ನೀಡಿ ಸೈ ಎನಿಸಿಕೊಂಡ ಇವರದು ಸಂಗೀತ ಕುಟುಂಬವೇ ಸರಿ. ಪತ್ನಿ ದಿಲ್ಶಾದ್ ಬೇಗಂ ಕೂಡ ಹಾಡಬಲ್ಲರು. ಪುತ್ರರಾದ ನೌಶಾದ್ ಹರಲಾಪುರ, ನಿಶಾದ್ ಹರಲಾಪುರ ಕೂಡ ಭವಿಷ್ಯದ ಗಾಯಕರು.

ಹರಲಾಪುರ ಅವರ ಸಂಗೀತ ಸೇವೆಯನ್ನು ಗುರಿತಿಸಿ ರಮಣಶ್ರೀ ಶರಣ ಪ್ರಶಸ್ತಿ, ಅತ್ಯತ್ತಮ ಶಿಕ್ಷಕ ಪ್ರಶಸ್ತಿ ಸೇರಿದಂತೆ ಗಾಯನ ಚತುರ, ಗಾನ ರತ್ನ, ಸಂಗೀತ ಸುಧಾಕರ, ಗಾಯನ ಸಾಮ್ರಾಟ್ ಮುಂತಾದ ಬಿರುದುಗಳನ್ನು ಹಲವು ಸಂಘ–ಸಂಸ್ಥೆಗಳು ನೀಡಿ ಗೌರವಿಸಿ, ಸನ್ಮಾನಿಸಿವೆ.

ಹುಮಾಯೂನ್ ಹರಲಾಪುರ ಅವರು ಕಾರ್ಯಕ್ರಮದ ಛಾಯಾಚಿತ್ರಗಳು



ಭಕ್ತಿ ಸಂಗೀತದ ಕಾರ್ಯಕ್ರಮ



ವಿದ್ಯಾಗುರು ಪಂಡಿತ ಪುಟ್ಟರಾಜಗವಾಯಿಗಳಿಗೆ ಮನೆಯಲ್ಲಿ ಗೌರವಾರ್ಪಣೆ



ಅಖಿಲ ಭಾರತ ಜ್ಯೋತಿರ್ವಿಜ್ಞಾನ ಸಮಾವೇಶದಲ್ಲಿ ನೀಡಿದ ಕಾರ್ಯಕ್ರಮ



ಶಿವಮೊಗ್ಗದಲ್ಲಿ ನೀಡಿದ ಕಾರ್ಯಕ್ರಮ



ಸಪ್ತಸ್ವರ ಬಳಗ, ಮೈಸೂರು ಇಲ್ಲಿ ನೀಡಿದ ಕಾರ್ಯಕ್ರಮ



ಶ್ರೀ ಸರ್ವಸಿದ್ಧಿ ವಿನಾಯಕಸ್ವಾಮಿ ಸೇವಾ ಸಮಿತಿ (ರಿ).ಶಿವಮೊಗ್ಗದ ವತಿಯಿಂದ ಕಾರ್ಯಕ್ರಮ



Indian Junior Chamber ಪ್ರಾದೇಶಿಕ ಕಾರ್ಯಕ್ರಮ



ಶಿವಮೊಗ್ಗದ ಕಾರ್ಯಕ್ರಮ



ಕೀರ್ತನಕಾರರ ಸಮ್ಮೇಳನದ ಕಾರ್ಯಕ್ರಮ



ಮಂತ್ರಾಲಯದಲ್ಲಿ ನಡೆದ ಕಾರ್ಯಕ್ರಮ



ಪ್ರಶಸ್ತಿ ಪಡೆದ ಸಮಾರಂಭ




ಆಳ್ವಾಸ್ ನುಡಿಸಿರಿ ೨೦೧೦ರ ಕಾರ್ಯಕ್ರಮ



ಗುರುಕೃಪ ಗಾನ ಮಂದಿರ ಸಂಗೀತ ಕಾರ್ಯಕ್ರಮ



ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಯವರಿಂದ ಸನ್ಮಾನ




ಹುಮಾಯುನ್ ಹರಲಾಪುರ ಅವರ ತಂದೆ



ಹುಮಾಯುನ್ ಹರಲಾಪುರ ಅವರ ತಾಯಿ

ಪ್ರಶಸ್ತಿ ಪತ್ರಗಳು



ವಿಶ್ವ ಹಿಂದು ಪರಿಷದ್, ಕರ್ನಾಟಕ

ಭಾರತ ಸಂಸ್ಕೃತಿ ಪರಿಚಯ ಪರೀಕ್ಷೆ

ಪ್ರವೇಶ ಪತ್ರ ಕ್ರಮಾಂಕ : .... ಗಳಿಸಿದ ಅಂಕ : ....

ಪ್ರಮಾಣ ಪತ್ರ

ಚಿ|| ....

ಶುಕ್ಲನಾಮ ಸಂವತ್ಸರದ ಮಾರ್ಗಶಿರ ಶುದ್ಧ ಪಂಚಮಿಯಂದು (ದಿನಾಂಕ 3-12-1989) ನಡೆದ ಭಾರತ ಸಂಸ್ಕೃತಿ ಪರಿಚಯ ಪರೀಕ್ಷೆಯಲ್ಲಿ .... ಶ್ರೇಣಿಯಲ್ಲಿ ಉತ್ತೀರ್ಣರಾಗಿರುವರು.


ಮುಖ್ಯೋಪಾಧ್ಯಾಯರ ಸಹಿ

ಮಕರ ಸಂಕ್ರಾಂತಿ, 14-1-1990

(ಅಧ್ಯಕ್ಷರು)

ಭಾರತ ಸಂಸ್ಕೃತಿ ಪರಿಚಯ ಪರೀಕ್ಷಾ ಮಂಡಳಿ

ಧರ್ಮಶ್ರೀ, 91, ಶಂಕರಪುರ, ಬೆಂಗಳೂರು-4



ಅಖಿಲ ಭಾರತ ನಾಲ್ಕನೆಯ ಶರಣ ಸಾಹಿತ್ಯ ಸಮ್ಮೇಳನ

ಶ್ರೀ ಜಗದ್ಗುರು ರೇಣುಕಾಚಾರ್ಯ ಕಲ್ಯಾಣ ಮಂಟಪ

ರತ್ನಗಿರಿ ರಸ್ತೆ, ಚಿಕ್ಕಮಗಳೂರು

ಪ್ರಶಸ್ತಿ ಪತ್ರ


ದಿನಾಂಕ .... ಏಪ್ರಿಲ್ ತಿಂಗಳಲ್ಲಿ ನಡೆದ ಅಖಿಲ ಭಾರತ ನಾಲ್ಕನೆಯ ಶರಣ ಸಾಹಿತ್ಯ ಸಮ್ಮೇಳನದಲ್ಲಿ .... ಭಾಗವಹಿಸಿದ .... ನೀಡಿದ ಪ್ರಶಸ್ತಿ ಪತ್ರ.

ಅಧ್ಯಕ್ಷರು

ಸಮ್ಮೇಳನ ಸ್ವಾಗತ ಸಮಿತಿ

ಅಧ್ಯಕ್ಷರು

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್



ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ ಸಿರಿಗೆರೆ

ತರಳಬಾಳು ಹುಣ್ಣಿಮೆ ಮಹೋತ್ಸವ

ಪ್ರಶಸ್ತಿ ಪತ್ರ

ಹೆಸರು ....

ಊರು ....

ತಾಲ್ಲೂಕು ....

ಪ್ರದರ್ಶಿಸಿದ ಕಲೆ ....

ಚನ್ನಗಿರಿಯಲ್ಲಿ ದಿನಾಂಕ 10-2-1992 ರಿಂದ 18-2-1992 ರ ವರೆಗೆ ನಡೆದ ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಭಾಗವಹಿಸಿ ತಮ್ಮ ಕಲಾ ಪ್ರತಿಭೆಯನ್ನು ಪ್ರದರ್ಶಿಸಿ ಜನಮನವನ್ನು ರಂಜಿಸಿದ್ದಕ್ಕಾಗಿ ಜನತೆಯ ಪರವಾಗಿ ಅಭಿನಂದಿಸುತ್ತಾ ನಿಮ್ಮ ಜೀವನದ ಸರ್ವತೋಮುಖ ಯಶಸ್ಸಿಗೆ ಶುಭ ಹಾರೈಸುತ್ತೇವೆ.

ಶ್ರೀ ತರಳಬಾಳು ಜಗದ್ಗುರು

ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು

T.V.4

PRASAR BHARATI
(BROADCASTING CORPORATION OF INDIA)

DOORDARSHAN KENDRA

BANGALORE

सत्यम् शिवम् सुंदरम

MUSIC CONTRACT FROM

No.

Dated

Dear Sir/Madam

We offer you an engagement to telecast and to perform as follows :

Date of Telecast 20-9-04 & 21-9-04

Time of Telecast 10.30 AM & 9.00 AM CHANDANA

Date of Recording 27/07/04

Time of Recording 1.30 PM

Duration 30 MTS

Programme TO PRESENT SWARA SANGAMA

Fee offered for Telecast RS.2132/-(RUPEES TWO THOUSAND ONE HUNDRED & THIR two only)

Fee offered for a Mechanical Reproduction of the performance

The above offer is contingent on your compliance with the following terms, and with the conditions printed overleaf.

1. That your signed acceptance, together with all necessary particulars, reaches this office by Regd., A.D. Post or is handed over personally to the officer designated for the purpose and the receipt obtained thereof by

2. That you shall complete, return and submit for approval the programme form which is attached herewith (together with the printed copy or typed script of all songs, words and material you propose to use) to The Director, Doordarshan Kendra, Bangalore.

The Stamp duty will be borne by the Government.

Yours faithfully,

for Director
Doordarshan Kendra
for and on behalf of the president of India

Shri/Smt HUMAYUN HARLAPUR
Address ~~SRI GURU PUTTARAJA~~
KRUPA GANA MANDIRA
OPP DURGIGUDI SCHOOL
SHIMOGA -2

T.V.4

PRASAR BHARATI
(BROADCASTING CORPORATION OF INDIA)

DOORDARSHAN KENDRA

BANGALORE

सत्यम् शिवम् सुंदरम

MUSIC CONTRACT FROM

No. 380

Dated 22.1.2002

Dear Sir/Madam

We offer you an engagement to telecast and to perform as follows :

Date of Telecast 06.02.2002

Time of Telecast 6.30 A.M.

Date of Recording 28.01.2002

Time of Recording 8.30 A.M. to 1.30 P.M.

Duration 30 Mts.

Programme To Sing Devotional Songs in Chandana

Fee offered for Telecast 2,816/- (Rupees two thousand eight hundred and Sixteen only)

Fee offered for a Mechanical Reproduction of the performance

The above offer is contingent on your compliance with the following terms, and with the conditions printed overleaf.

1. That your signed acceptance, together with all necessary particulars, reaches this office by Regd., A.D. Post or is handed over personally to the officer designated for the purpose and the receipt obtained thereof by

2. That you shall complete, return and submit for approval the programme form which is attached herewith (together with the printed copy or typed script of all songs, words and material you propose to use) to The Director, Doordarshan Kendra, Bangalore.

The Stamp duty will be borne by the Government.

Yours faithfully,

for Director
Doordarshan Kendra
for and on behalf of the president of India

Shri/Smt. Humayun Harlapur,
Address : Music Teacher, Sri Panchakshara
Sangeetha Vidyalaya, No. 1,
Sri Sangamesha, Opp. Karnataka
Sangha, B.H. Road, Shimoga-577202.

Gov
23.1.2002



ಶ್ರೀ ಹುಮಾಯೂನ್ ಎಂ. ಹರಲಾಪುರ

ಅವರಿಗೆ ನ್ಯಾಮತಿಯ ಸಮಸ್ತ ಸಂಗೀತ ಪ್ರೇಮಿಗಳು ಸಲ್ಲಿಸುವ

ಸನ್ಮಾನ ಪತ್ರವು

ಡಾ|| ಪಂಡಿತ ಪುಟ್ಟರಾಜ ಗವಾಯಿಗಳವರ ಶಿಷ್ಯರೇ

ಸನ್ಮಾನ ಮತ್ತು ಗಾಯನ ಸಾಮ್ರಾಟ

ತಮ್ಮ ಶುಭಾಕಾಂಕ್ಷಿಗಳು,

ನ್ಯಾಮತಿಯ ಶ್ರೀಗುರು ಕೃಪಾಶ್ರಮ

ದಿನಾಂಕ 28-2-1991



ಕರ್ನಾಟಕ ಸರ್ಕಾರ

ಜಿಲ್ಲಾಡಳಿತ, ಜಿಲ್ಲಾಪಂಚಾಯತ್

ಮೈಸೂರು ದಸರಾ ಮಹೋತ್ಸವ ಸಮಿತಿ ಹಾಗೂ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಚಾಮರಾಜನಗರ

ಚಾಮರಾಜನಗರ

ದಸರಾ ಮಹೋತ್ಸವ 2013

ಪ್ರಶಸ್ತಿ ಪತ್ರ

ಶ್ರೀ ಹನುಮಂತರಾವ್ ಎಂ. ಹರಲಾಪುರ್ ...ರವರಿಗೆ


ಕಲೆಯೆಂದರೆ ಸತ್ಯ, ಶಿವ, ಸುಂದರಗಳ ಕೂಡಲಸಂಗಮ. ಸತ್ಯ ಸೌಂದರ್ಯಗಳಿಗೆ ರೂಪ ಕೊಡುವುದೇ ಕಲೆ. ಇಂತಹ ಅಪರೂಪ ಕಲಾಸಂಗಮ 2013ರ ಅಕ್ಟೋಬರ್ 5 ರಿಂದ 12 ರವರೆಗೆ ಚಾಮರಾಜನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದ "ಚಾಮರಾಜನಗರ ದಸರಾ ಉತ್ಸವ"ದಲ್ಲಿ ಭಾಗವಹಿಸಿ..... ಆತ್ಮಪದ ಗಾಯನ ಕಾರ್ಯಕ್ರಮ

ಕಾರ್ಯಕ್ರಮ ನೀಡಿದ್ದಕ್ಕಾಗಿ ತಮ್ಮನ್ನು ಗೌರವಪೂರ್ವಕವಾಗಿ ಅಭಿನಂದಿಸುತ್ತೇವೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಾಮರಾಜನಗರ

ಜಿಲ್ಲಾಧಿಕಾರಿಗಳು ಹಾಗೂ ಕಾರ್ಯಾಧ್ಯಕ್ಷರು, ಚಾಮರಾಜನಗರ ದಸರಾ ಮಹೋತ್ಸವ 2013

ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಚಾಮರಾಜನಗರ



ಸಹ್ಯಾದ್ರಿ ಉತ್ಸವ - 98

(ಮಾರ್ಚ್ 28 ರಿಂದ ಏಪ್ರಿಲ್ 6 ರ ವರೆಗೆ)

ಪ್ರಶಂಸಾ ಪತ್ರ

ಶ್ರೀ / ಶ್ರೀಮತಿ / ಕುಮಾರಿ / ಕುಮಾರ ಹನುಮಂತರಾವ್. ಎಂ. ಹರಲಾಪುರ್. ರವರು ಶಿವಮೊಗ್ಗದಲ್ಲಿ ನಡೆದ ಸಹ್ಯಾದ್ರಿ ಉತ್ಸವ - 98ರ ಸಂದರ್ಭದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ (ಗಾಯನ) 3-4-98 ಕಾರ್ಯಕ್ರಮದಲ್ಲಿ ಭಾಗವಹಿಸಿ/ಪ್ರಾಯೋಜಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿರುವುದಕ್ಕಾಗಿ ಈ ಪ್ರಶಂಸಾ ಪತ್ರವನ್ನು ಕೊಡಲಾಗಿದೆ.

ಸದಸ್ಯ / ಕಾರ್ಯದರ್ಶಿ, ಸಹ್ಯಾದ್ರಿ ಉತ್ಸವ ಸಮಿತಿ, ಶಿವಮೊಗ್ಗ.

ಕಾರ್ಯಾಧ್ಯಕ್ಷರು, ಸಹ್ಯಾದ್ರಿ ಉತ್ಸವ ಸಮಿತಿ, ಶಿವಮೊಗ್ಗ.

ಪ್ರಕಟಣೆ ಕೃಪೆಗಾಗಿ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು

ಶಿವರಾತ್ರೀಶ್ವರ ವೃತ್ತ, 1ನೆಯ ಮುಖ್ಯ ರಸ್ತೆ, 8ನೆಯ ವಿಭಾಗ, ಜಯನಗರ,
ಬೆಂಗಳೂರು-560 070.

ಕ್ರಮಾಂಕ : 515/2010-11
ದಿನಾಂಕ : 23-9-2010

ಶ್ರೀ ಹುಮಾಯೂನ್ ಹರ್ಲಾಪುರ ಅವರಿಗೆ ಪ್ರಣಾಮಗಳು

ಮಾನ್ಯರೆ,

ತಮಗೆ ತಿಳಿದಿರುವಂತೆ ಶರಣ ಸಾಹಿತ್ಯ ಮತ್ತು ಸಂಸ್ಕೃತಿಗಳ ಸಂವರ್ಧನೆಯನ್ನೇ ಧ್ಯೇಯವಾಗಿಟ್ಟುಕೊಂಡು ಸೇವೆ ಸಲ್ಲಿಸುತ್ತಿರುವ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಈ ಕ್ಷೇತ್ರದಲ್ಲಿ ಗಣನೀಯ ಕೊಡುಗೆ ನೀಡಿರುವ ಗಣ್ಯರಿಗೆ ಕಳೆದ ಐದು ವರ್ಷದಿಂದ ವಾರ್ಷಿಕ ಪ್ರಶಸ್ತಿಗಳನ್ನು ನೀಡುತ್ತ ಬಂದಿದೆ.

ಬೆಂಗಳೂರು ನಗರದ ರಮಣಶ್ರೀ ಪ್ರತಿಷ್ಠಾನದ ಸಹಯೋಗದೊಂದಿಗೆ ಆರಂಭವಾಗಿರುವ ಈ ಯೋಜನೆಯಲ್ಲಿ ಕೆಳಗೆ ಕಂಡಂತೆ 2010 ರ 'ರಮಣಶ್ರೀ ಶರಣ ಪ್ರಶಸ್ತಿ' ನೀಡಲು ಪರಿಷತ್ತು ನಿರ್ಧರಿಸಿದೆಯೆಂದು ತಿಳಿಸಲು ಹರ್ಷಿಸುತ್ತೇನೆ.

1. ಶರಣ ಸಾಹಿತ್ಯ ಸಂಶೋಧನೆ – ಡಾ. ಎಸ್. ವಿದ್ಯಾಶಂಕರ್, ಬೆಂಗಳೂರು
2. ಆಧುನಿಕ ವಚನ ರಚನೆ – ಡಾ. ಸಂಗಮೇಶ್ ಹಂಡಗಿ, ನವಲಗುಂದ
3. ವಚನ ಸಂಗೀತ – ಶ್ರೀ ಹುಮಾಯೂನ್ ಹರ್ಲಾಪುರ, ಶಿವಮೊಗ್ಗ
4. ಶರಣ ಸಂಸ್ಕೃತಿ ಸಂಸ್ಥೆ – ಬಸವತತ್ತ್ವ ಪ್ರಚಾರ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು

'ರಮಣಶ್ರೀ ಶರಣ ಪ್ರಶಸ್ತಿ'ಯು ತಲಾ 25,000 ರೂ. ಗೌರವಧನ ಮತ್ತು ಪ್ರಶಸ್ತಿ ಫಲಕಗಳನ್ನೊಳಗೊಂಡಿರುತ್ತದೆ. ಪ್ರಶಸ್ತಿಗಾಗಿ ಆಯ್ಕೆಗೊಂಡಿರುವ ತಾವು ಪರಿಷತ್ತಿನ ಮೇಲೆ ಅಭಿಮಾನವಿಟ್ಟು ಪ್ರಶಸ್ತಿ ಸ್ವೀಕರಿಸಲು ಸಮ್ಮತಿ ನೀಡಬೇಕಾಗಿ ಕೋರುತ್ತೇನೆ.

ಪ್ರಶಸ್ತಿ ಪ್ರದಾನ ಸಮಾರಂಭವು ದಿನಾಂಕ 17-11-2010 ರಂದು ಬೆಂಗಳೂರಿನಲ್ಲಿ ನಡೆಯಲಿದ್ದು ತಾವು ಇಲ್ಲಿಗೆ ಬಂದು ಹೋಗುವ ಪ್ರಯಾಣವೆಚ್ಚ ಮತ್ತು ಇಲ್ಲಿನ ಊಟ-ವಸತಿಗೆ ವ್ಯವಸ್ಥೆ ಮಾಡಲಾಗುತ್ತದೆ.

ತಾವು ದಯವಿಟ್ಟು ತಮ್ಮ ಸಮ್ಮತಿ ಪತ್ರದೊಂದಿಗೆ ತಮ್ಮ ಪರಿಚಯ ಸಾಹಿತ್ಯ ಮತ್ತು ಅಂಚೆಕಾರ್ಡ್ ಅಳತೆಯ ಒಂದು ಭಾವಚಿತ್ರ ಹಾಗೂ ಪತ್ರಿಕೆಗಳಿಗೆ ಬಿಡುಗಡೆ ಮಾಡಲು ಪಾಸ್‌ಪೋರ್ಟ್ ಅಳತೆಯ 15 ಭಾವಚಿತ್ರಗಳನ್ನು ಆದಷ್ಟು ಬೇಗ ಕಳುಹಿಸಿಕೊಡಬೇಕಾಗಿ ಕೋರುತ್ತೇನೆ.

ತಮ್ಮ ಪತ್ರದ ನಿರೀಕ್ಷೆಯಲ್ಲಿ,


ಇಂತು ಪ್ರಣಾಮಗಳು

(ಗೊ.ರು. ಚನ್ನಬಸಪ್ಪ)
ಅಧ್ಯಕ್ಷ

ಶ್ರೀ ಹುಮಾಯೂನ್ ಹರ್ಲಾಪುರ
ಪಂ. ಪಂಚಾಕ್ಷರ ಗವಾಯಿ ಸಂಗೀತ ಪಾಠಶಾಲೆ
ಮುಖ್ಯರಸ್ತೆ, ಪಾರ್ಕ್ ಬಡಾವಣೆ
ಸರ್ಕಾರಿ ಪ್ರೌಢಶಾಲೆ ಎದುರು
ದುರ್ಗಿಗುಡಿ, ಶಿವಮೊಗ್ಗ – 577 201

ತಕ್ಷಣ ಉತ್ತರ ಬರೆಯಲು
[illegible]
[illegible]

ದೂರವಾಣಿ : 080-22970125 ಮತ್ತು 22970104 / 105 / 106 Extn : 221 - 224



ಇವರು .... ರಂದು / ರಿಂದ .... ರ ವರೆಗೆ
ಹೊಸನಗರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿದ್ದ .... ದಲ್ಲಿ
ಭಾಗವಹಿಸಿರುತ್ತಾರೆ. ಹಾಗೂ .... ಸ್ಥಾನವನ್ನು ಗಳಿಸಿರುತ್ತಾರೆಂದು
ದೃಢೀಕರಿಸುತ್ತೇವೆ.

ದಿನಾಂಕ:

ಕಾರ್ಯದರ್ಶಿ
ಕ.ಸಾ.ಪ., ಹೊಸನಗರ

ಅಧ್ಯಕ್ಷರು
ಕ.ಸಾ.ಪ. ಹೊಸನಗರ

ಹೊಸನಗರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು
ಹೊಸನಗರ
ಶಿವಮೊಗ್ಗ ಜಿಲ್ಲೆ.

ಪರಾಮರ್ಶನ ಗ್ರಂಥಗಳು:

೧. ಸುವರ್ಣ ಜಾನಪದ : ಪ್ರ.ಸಂ.ಡಾ.ಎಚ್.ಜೆ.ಲಕ್ಕಪ್ಪಗೌಡ, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು
೨. ಸಂಗೀತ ಸಂಪದ: ಡಾ. ಶಶಿಕಲಾ ವ್ಹಿ. ಚವ್ಹಡಿ, ಪ್ರಸಾರಾಂಗ, ೨೦೦೧, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೩. ಜಾನಪದ ಕೈಪಿಡಿ, ಪ್ರ.ಸಂ:ಡಾ.ಎಚ್.ಜೆ.ಲಕ್ಕಪ್ಪಗೌಡ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ಹುಮಾಯೂನ್ ಹರಲಾಪುರ ■ ಡಾ. ವೃಷಭಕುಮಾರ್

ಜನಪದರ ಬದುಕಿನೊಂದಿಗೆ ಹಾಡು ಬೆಸೆದುಕೊಂಡೇ ಬಂದಿರುತ್ತದೆ. ಬದುಕಿನ ಗತಿಗೆ ಲಯ ಯಾವತ್ತೂ ಜೊತೆಗೇ ಇರುತ್ತದೆ. ಹಾಗಾಗಿ ಈ ಎರಡೂ ಸಂಗತಿಗಳು ಅಭಿನ್ನ. ಜೀವನದಲ್ಲಿ ಸಹಜವಾಗಿ ಎದುರಾಗುವ ಪಾಡನ್ನು ಮರೆಯಲು ಹಾಡಿನ ಮೊರೆಹೋದ ಜನಪದರ ಬದುಕಿನ ಜೀವನಶೈಲಿ ಅನುಕರಣೀಯ. ಬದುಕಿನೊಂದಿಗೆ ಮೇಳವಿಸಿಕೊಂಡಿರುವ ಸಂಗೀತವನ್ನು ಶಿಷ್ಟ ಮತ್ತು ಜನಪದ ಎಂದು ವಿಭಾಗಿಸಿರುವುದು ಅಧ್ಯಯನದ ಅನುಕೂಲಕ್ಕಾಗಿ ಅಷ್ಟೆ. ಹಾಡುಗಾರನಿಗೆ ಹಾಡಿನ ಪರಿ ಮುಖ್ಯವೇ ಹೊರತು ಆ ಕುರಿತ ಪರಿಕಲ್ಪನೆಗಳಲ್ಲ; ಈ ಹಿನ್ನೆಲೆಯಲ್ಲಿ ಸಂಗೀತವನ್ನೇ ತಮ್ಮ ಉಸಿರನ್ನಾಗಿಸಿಕೊಂಡಿರುವ ಅನೇಕ ಸಂಗೀತ ಕಲಾವಿದರು ನಾಡಿನ ಸಂಗೀತ ಕ್ಷೇತ್ರದ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ. ಇಂಥ ಸಂಗೀತ ಸಾಧಕರ ಹಾಡುಗಾರಿಕೆ ಜನಮಾನಸಕ್ಕೆ ಚಿರಪರಿಚಿತ. ಆದರೆ, ಅವರ ಕಲಾಬದುಕನ್ನು ಪರಿಚಯಿಸುವ ಪ್ರಯತ್ನಗಳು ನಡೆದಿರುವುದು ವಿರಳವೆ. ಈ ನಿಟ್ಟಿನಲ್ಲಿ ಜನಪದ ಮತ್ತು ಶಿಷ್ಟ ಸಂಗೀತ ಪ್ರಕಾರಗಳೆಡರಲ್ಲೂ ವಿಶಿಷ್ಟ ಸಾಧನೆ ಮೆರೆದಿರುವ ಉಸ್ತಾದ್ ಹುಮಾಯೂನ್ ಎಂ. ಹರಲಾಪುರ ಅವರನ್ನು ಪರಿಚಯಿಸುವ ಡಾ. ವೃಷಭಕುಮಾರ್ ಅವರ ಈ ಪಯತ್ನ ಗಮನಾರ್ಹವಾದುದು. ಅವರ ಬದುಕಿನ ಘಟನೆಗಳನ್ನು ವಿವರಿಸಿರುವುದರ ಜೊತೆಗೆ ಸಂಗೀತದ ವಿವಿಧ ಪ್ರಕಾರಗಳ ಬಗೆಗೆ ಮಾಹಿತಿ ಒದಗಿಸುವ ಬರೆಹಗಳು ಇಲ್ಲಿ ಸಂಚಿತವಾಗಿವೆ. ಈ ಮಹತ್ವದ ಕಾರ್ಯಕ್ಕೆ ಡಾ. ವೃಷಭಕುಮಾರ್ ಅಭಿನಂದನಾರ್ಹರು.

■ ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ISBN 978-93-83149-15-5

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ